ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 2 ಸಂಚಿಕೆ 44

ನವೆಂಬರ್ 02. 2008

ಕನ್ನಡ ವಾರಪತ್ರಿಕೆ


www.janashakthi.org

ರೂ. 5/-









ಮತಾಂತರದ ಹಕ್ಕು ಧಾರ್ಮಿಕ ಸ್ವಾತಂತ್ರ್ಯದ ಭಾಗ



ಯಡಿಯೂರಪ್ಪ ಸರ್ಕಾರ : ಸರ್ವಂ ಭ್ರಷ್ಟಮಯಂ

ಸೌಹಾರ್ದತೆಯೇ ರಾಜ್ಯೋತ್ಸವವಾಗಲಿ

ರೋಣ : ಕಾಮುಕರ ಕಾಟಕ್ಕೆ ಮುಗ್ಧೆ ಬಲಿ






ಒಬಾಮಾ ಅಧ್ಯಕ್ಷರಾದರೆ...?

ನೋಟ

ಜ್ಯೋತಿಷ್ಯವೆಂಬ ಮಹಾ ವಂಚನೆ

ಜ್ಯೋತಿಷ್ಯ ಎಂಬುದು ಎಂತಹ ವಂಚನೆ. ಅದಕ್ಕೆ ಆಧಾರವಾದ ಅಂಶಗಳು ಎಂತಹ ಪೊಳ್ಳು. ಒಂದು ವಿವೇಚನೆ



ಡಾ. ಜಿ. ಭಾಸ್ಕರ ಮಯ್ಯ

ಜ್ಯೋತಿಷ್ಯದ ಗ್ರಂಥಗಳಲ್ಲಿಯೇ ಒಂದಕ್ಕೊಂದು ಸಾಂಗತ್ಯವಿಲ್ಲ. ಆದರಲ್ಲಿ ಮತ್ತೆ ಮತ್ತೆ ಬೀಜ ಸಂಸ್ಕಾರವಾಗುತ್ತದೆ. ಲೆಕ್ಕಕ್ಕೂ ಗ್ರಹ ಸ್ಥಾನಗಳಿಗೂ ಹೊಂದಿಕೆ ಬರುವುದಿಲ್ಲ. ಹಿಂದಿನವರ ಸಿದ್ಧಾಂತ ತಪ್ಪೆಂದು ವರಾಹ ಮಿಹಿರ ಸಾಧಿಸಿದ. ಬ್ರಹ್ಮ ಸಿದ್ಧಾಂತವನ್ನು ತಾನು ಮಂಡಿಸಿದ್ದೇನೆಂದು ಬ್ರಹ್ಮಗುಪ್ತ ಸಾರಿದ - *'ಜಾನಾತ್ಯೇಕಮಪಿ ಯತೊ ನ ಆರ್ಯಭಟೋ ಗಣಿತ ಗೋಲಾನಾಮ್'* (ಆರ್ಯಭಟನಿಗೆ ಗಣಿತ, ಗೋಲದ ಬಗ್ಗೆ ಏನೂ ತಿಳಿದಿರಲಿಲ್ಲ!) *'ನ ಮಾಯಾ ಪ್ರೋಕ್ತಾನಿ ತತ್ ಪ್ರಥಕ್ ಪ್ರಥಕ್ ದೂಷಣಾನ್ಯೇಷಾವರ್'* (ಆದುದರಿಂದ ಅವನ ಮೇಲೆ ಈ ವಿಷಯದಲ್ಲಿ ಪ್ರತ್ ಪ್ರತ್ಯೇಕವಾಗಿ ದೂಷಣೆಗಳನ್ನು ಹೇಳಿಲ್ಲ !) ಈ ಬ್ರಹ್ಮಗುಪ್ತ ಬರೆದುದೇ ತಪ್ಪೆನ್ನುವವನು ಭಾಸ್ಕರಾಚಾರ್ಯ. ಪ್ರತಿಯೊಬ್ಬನೂ ಹಿಂದಿನದ್ದನ್ನು ತಪ್ಪೆನ್ನುತ್ತಾ ಹೋದ. ಈ ಪರಿಸ್ಥಿತಿಯಲ್ಲಿ ಜ್ಯೋತೀಷ್ಯಕ್ಕೆ ಇರುವ ನೆಲೆಯಾದರೂ ಯಾವುದು?


ಗೋಳಸ್ಯ ಪರಿಚ್ಛೇದಃ ಕರ್ತುಂ
ಯಂತ್ರೈವಿನಾ ಯತೊ ಶಕ್ಯಃ
ಸಂಕ್ಷಿಪ್ತಂ ಸ್ಪಷ್ಟಾರ್ಥಂ
ಯಂತ್ರಾಧ್ಯಾಯಃ ತತೋ ವಕ್ಷೇ

ಬ್ರಹ್ಮಗುಪ್ತನು ಈ ರೀತಿಯಲ್ಲಿ ಯಂತ್ರ ಸಾಧನಗಳಿಲ್ಲದಿದ್ದರೆ ಖಗೋಲದ ವಿಮರ್ಶೆ ಅಸಾಧ್ಯ. ಆದ್ದರಿಂದ ತಾನು ಯಂತ್ರಾಧ್ಯಾಯವನ್ನು ಹೇಳುತ್ತೇನೆನ್ನುತ್ತಾನೆ. ಅಲ್ಲದೆ ಆತನ ಇನ್ನೊಂದು ಮುಖ್ಯವಾದ ಮಾತು -

'ಗಣಿತಜ್ಞೊ ಗೋಳಜ್ಞೊ ಗ್ರಹಗತಿಂ ವಿಜಾನತಿ
ಯೋ ಗಣಿತ ಗೋಳ ಬಾಹ್ಯೋ ಜಾನತಿ
ಗ್ರಹಗತಿಂ ಸಃ ಕಥಮ್'

(ಗಣಿತ ತಿಳಿದವರೂ, ಖಗೋಲದ ಅರಿವಿರುವವರೂ ಗ್ರಹಗತಿಯನ್ನು ತಿಳಿಯಲಾರರು. ಇವೆರಡೂ ಗೊತ್ತಿಲ್ಲದವರು ಗ್ರಹಗತಿಯನ್ನು ಹೇಗೆ ತಿಳಿದಾರು?)

ಹೀಗಿರುವಲ್ಲಿ ಪಂಚಾಗ ಗುಣಿಸುವವರು ಯಾವ ಯಾವ ಯಂತ್ರಗಳನ್ನು ಇಟ್ಟುಕೊಂಡಿದ್ದಾರೆ? ವೇದಾಗಾರಗಳು ಇವರಲ್ಲಿವೆಯೆ? ನಮ್ಮ ಜ್ಯೋತಿಷಿಗಳ ಬಳಿ ಯಾವ ಸಾಧನಗಳಿವೆ? 'ಕುಜ ಇಂದು ಅನುರಾಧಾ ಎರಡನೆಯ ಪಾದಕ್ಕೆ 32 ಘಂ. 17 ವಿ.ಘ. ಸಮಯಕ್ಕೆ ಹೋಗುವನು? ಎಂದು ಪಂಚಾಗದವರು ಹೇಳಿದರೆ ನಂಬುವುದು ಹೇಗೆ? (ನರಸಿಂಹಮೂರ್ತಿಯವರು)



ನವಗ್ರಹಗಳಲ್ಲಿ ನಾಲ್ಕು ಗ್ರಹಗಳೇ ಅಲ್ಲ, ಸೂರ್ಯ ಒಂದು ನಕ್ಷತ್ರ. ಚಂದ್ರ ಒಂದು ಉಪಗ್ರಹ (ಇಂಥ ಉಪಗ್ರಹಗಳು ಸೌರವ್ಯೂಹದಲ್ಲಿ ಮೂವತ್ತಕ್ಕೂ ಹೆಚ್ಚಿವೆ) ರಾಹು, ಕೇತುಗಳು ಚಂದ್ರ ಸೂರ್ಯರ ಕಕ್ಷೆಗಳನ್ನು ಕಡಿಯುವ ಕಾಲ್ಪನಿಕ ಜ್ಯಾಮಿತಿಯ ಬಿಂದುಗಳು (ಇವು ಮೊಲದ ಕೊಂಬಿನಂತೆ ಅಸ್ತಿತ್ವವೇ ಇಲ್ಲದ ಗ್ರಹಗಳು)

ಇಷ್ಟಕ್ಕೂ ಮಗು ಹುಟ್ಟಿದ ಕಾಲ ಯಾವುದು? ಗಂಡು ಹೆಣ್ಣು ಸೇರಿದ ಕಾಲವೇ? (ಸೇರಿದಾಗ ಆಗಬೇಕೆಂದಿಲ್ಲ! ಅಥವಾ ಅದನ್ನು ತಿಳಿಯುವುದಾದರೂ ಹೇಗೆ?). 4, 5, 6, 7, 8, 9 ತಿಂಗಳಲ್ಲಿ ಯಾವಾಗ? ತಲೆ ಹೊರಗೆ ತೋರಿ ಬಂದ ಸಮಯವೇ? ಮಗು ಕೆಳಗೆ ಬಿದ್ದ ಸಮಯವೇ? ವಿಮಾನ ಅಥವಾ ರಾಕೆಟ್‌ನಲ್ಲಿ ಮಗು ಜನಿಸಿದರೆ? ಸಿಸೇರಿಯನ್ ಮೂಲಕ ಬೇಕಾದ ಕಾಲಕ್ಕೆ ಹೆರಿಗೆ ಮಾಡಿಸಿದರೆ? ಈ ಯಾವ ಪ್ರಶ್ನೆಗಳನ್ನೂ ಜ್ಯೋತಿಷಿಗಳು ಎದುರಿಸಲಾರರು. ಸ್ಪರ್ಮ್ ಮತ್ತು ಓವಾ ಒಟ್ಟು ಸೇರಿದಾಗಲೇ ಜೀವ ಅಸ್ತಿತ್ವಕ್ಕೆ ಬರುತ್ತದೆ. (ಇಷ್ಟಕ್ಕೂ 'ಸ್ಪರ್ಮ್'ಗೂ 'ಓವಾ'ಕ್ಕೂ ಜೀವವಿದೆ!) ಅದು ಯಾವ ಕ್ಷಣದಲ್ಲಿ ಸೇರಿ ಜೀವ ಅಸ್ತಿತ್ವಕ್ಕೆ ಬರುತ್ತದೆಂದು ಯಾರಿಗೂ ಹೇಳುವುದು ಅಸಾಧ್ಯ. ಅಂಥದರಲ್ಲಿ ಜೋಯಿಸರು ಹೇಳುವ ಈ ಜನ್ಮ ಕಾಲಕ್ಕೆ ಏನಾದರೂ ಅರ್ಥವಿದೆಯೆ?

ಆದ್ದರಿಂದಲೇ ಇರಬೇಕು - ವೇದ ವೇದಾಂತಗಳನ್ನು ಆಳವಾಗಿ ಅಭ್ಯಾಸ ಮಾಡಿದ ಮಹಾನ್ ವ್ಯಕ್ತಿ ಸ್ವಾಮಿ ದಯಾನಂದ ಸರಸ್ವತಿಯವರು ತಮ್ಮ ಸತ್ಯಾರ್ಥ ಪ್ರಕಾಶವೆಂಬ ಗ್ರಂಥದಲ್ಲಿ ಜ್ಯೋತಿಷ್ಯವನ್ನು ಸುದೀರ್ಘವಾಗಿ ವಿಮರ್ಶಿಸಿ - ಫಲ ಜ್ಯೋತಿಷ್ಯವೆನ್ನುವುದು ಬರೇ ಬೂಟಾಟಿಕೆ, ಜೋಯಿಸರ ಹಣ ಮಾಡುವ ತಂತ್ರ ಎಂದು ಲೇವಡಿ ಮಾಡಿರುತ್ತಾರೆ.


ಸುಮಾರು ಎರಡು ದಶಕಗಳ ಹಿಂದೆ ಜ್ಯೋತಿಷ್ಯದ ಬಗ್ಗೆ ಹದಿನಾರು ಪ್ರಶ್ನೆಗಳನ್ನು ನಾನಾ ಪಂಚಾಗ ಕರ್ತೃಗಳಿಗೆ - (ಕೃಷ್ಣ ಪಂಚಾಗದ ಅಡಿಗರು, ತಟ್‌ವಟ್ ಪಂಚಾಗದ ಜೋಯಿಸರು, ಮೊಗೇರಿ ಪಂಚಾಗದ ಪದ್ಮನಾಭ ಅಡಿಗರು ಮೊದಲಾದವರು) ನಾನು ಕೇಳಿದ್ದೆ, ಯಾರಿಂದಲೂ ಸಮರ್ಪಕವಾದ ಉತ್ತರ ಬರಲಿಲ್ಲ. ಉಡುಪಿ ಪಂಚಾಗದ ಪಾರಂಪಳ್ಳಿಯ ಅಡಿಗರು ಮನುಷ್ಯ ಚಂದ್ರ ಗ್ರಹಕ್ಕೆ ಹೋದುದೇ ಸುಳ್ಳು ಎಂದರು. (ಅವರೀಗ ಇಲ್ಲ). ಆದರೆ ಓರ್ವ ಪಂಚಾಗ ಕೃರ್ತ ಮೊಗೇರಿ ಪದ್ಮನಾಭ ಅಡಿಗರ ಮನೆಯಲ್ಲಿ (ಇವರ ದೊಡ್ಡಪ್ಪನ ಮಗನೇ ಕನ್ನಡದ ಶ್ರೇಷ್ಠ ಕವಿ ಗೋಪಾಲಕೃಷ್ಣ ಅಡಿಗರು) ನಾನು ಈ ವಿಚಾರದಲ್ಲಿ ಚರ್ಚಿಸುತ್ತಾ ಇಡೀ ದಿನ ಇದ್ದೆ. ನನ್ನ ಪ್ರಶ್ನೆಗಳಿಗೆಲ್ಲಾ ಅವರೇ ಬರೆದುಕೊಟ್ಟ ಉತ್ತರಗಳು ನನ್ನ ಬಳಿ ಇವೆ. ಅವೆಲ್ಲಾ ಯಾವ ರೀತಿಯಲ್ಲಿಯೂ ಸಮರ್ಥನೀಯವಾದ ವೈಜ್ಞಾನಿಕ ಉತ್ತರಗಳಾಗಿರಲಿಲ್ಲ. ಆದರೆ ಅವರಿಗೆ ಗಣಿತದ ಜ್ಞಾನ ಅಗಾಧವಿತ್ತು. ಕೊನೆಯಲ್ಲಿ ಅವರೆಂದರು - 'ಈ ಜ್ಯೋತಿಷ್ಯದಲ್ಲಿ ಗಣಿತದ ಭಾಗವೆಲ್ಲ ಸರಿಯಾದುದೆ. ಆದರೆ ಫಲ ಜ್ಯೋತಿಷ್ಯ ಬರೇ ಭಾವನಾತ್ಮಕವಾದುದು. ಇದನ್ನು ನಾವು ಹೊರಗೆ ಹೇಳುವಂತಿಲ್ಲ.' ಹೀಗೆ ಅತ್ಯಂತ ಪ್ರಾಮಾಣಿಕವಾಗಿ ನುಡಿದ ಓರ್ವ ವ್ಯಕ್ತಿಯನ್ನು ನಾನು ಕಂಡೆ.

ನಾನು ಜ್ಯೋತಿಷಿಗಳಿಗೆ ಕೇಳಿದ ಆ ಹದಿನಾರು ಪ್ರಶ್ನೆಗಳನ್ನು ಈ ಮುಂದೆ ಕೊಡುತ್ತಿದ್ದೇನೆ. ತಮ್ಮನ್ನು ಮಹಾ ಜ್ಯೋತಿಷಿಗಳೆಂದು ಘೋಷಿಸಿಕೊಳ್ಳುವವರು ಈ ಪ್ರಶ್ನೆಗಳಿಗೆ ಉತ್ತರಿಸಲಿ -

1. ಗೋದಿ (ಯವ) ಕಾಳಿನ ಎಂಟರಷ್ಟು ಉದ್ದವೆಂದರೆ ಒಂದು ಅಂಗುಲ. ಇಪ್ಪತ್ತನಾಲ್ಕು ಅಂಗುಲಗಳಿಗೆ ಒಂದು ಹಸ್ತ. ನಾಲ್ಕು ಹಸ್ತಗಳಿಗೆ ಒಂದು ದಂಡ. 2000 ದಂಡಗಳಿಗೆ ಒಂದು ಕ್ರೋಶ. ಇದರ ನಾಲ್ಕರಷ್ಟು ದೂರವೆಂದರೆ ಒಂದು ಯೋಜನವಾಗುತ್ತದೆ. ಪ್ರಕೃತಿಯಲ್ಲಿ ಒಂದು ಯವ ಇನ್ನೊಂದರಂತೆ ಇಲ್ಲ. ಅವುಗಳಲ್ಲಿ ಅತೀ ಕಡಿಮೆಯೆಂದರೆ 0.1 ಮಿ. ಮಿ. ವ್ಯತ್ಯಾಸವಿರಬಹುದೆಂದು ಭಾವಿಸಿದರೂ, ಒಂದು ಯೋಜನದಲ್ಲಿ 614.4 ಮೀಟರಿನಷ್ಟು ವ್ಯತ್ಯಾಸ ಬರುತ್ತದೆ. ವೈಜ್ಞಾನಿಕ ಮನೋಭಾವದವರು ಜ್ಯೋತಿಷ್ಯ ಶಾಸ್ತ್ರದ ಮೇಲೆ ಇಂತಹ ಭಯಂಕರ ದೋಷವನ್ನು ಆರೋಪಿಸುತ್ತಿದ್ದಾರೆ. ನಮ್ಮ ಸನಾತನ 'ಹೋರಾಶಾಸ್ತ್ರ' ದಲ್ಲಿ ನಿಖರವಾಗಿ ದೂರವನ್ನು ಅಳೆಯಲು ಇನ್ನಾವ ಮೂಲಮಾನವಿದೆಯೆಂದು ತಾವು ದಯವಿಟ್ಟು ತಿಳಿಸುವಿರಾ?

2. ಸಮಯ ಅಳೆಯಲು ಯಾವ ಮೂಲ ಮಾನವನ್ನು ಉಪಯೋಗಿಸುತ್ತೀರಿ? ಸ್ಪಷ್ಟವಾಗಿ ಇದನ್ನು ಅಳೆಯಲು ಸ್ಟಾಂಡರ್ಡ್ ಗಂಟೆಯಂತಹ ಆಧುನಿಕ ಉಪಕರಣಕ್ಕೆ ಹೊರತಾಗಿ ನಿಮ್ಮೊಡನೆ ಅಳೆಯುವ ಬೇರಾವ ಸಾಧನವಿದೆ? (ಗಳಿಗೆ ಬಟ್ಟಲು ಅಂತ ಒಂದಿದೆ. ಅದಕ್ಕೆ ಘಟೀ ಯಂತ್ರ ಎಂದು ಕರೆಯುತ್ತಾರೆ. ಅದನ್ನು ನಿರಂತರವಾಗಿ ಯಾರು ತಾನೆ ವ್ಯವಸ್ಥಿತಗೊಳಿಸಲು ಸಾಧ್ಯ? ಇಷ್ಟಕ್ಕೂ ಗಳಿಗೆ ಬಟ್ಟಲಲ್ಲಿ ಮೊದಲು ನೀರು ವೇಗವಾಗಿ ಬರುತ್ತದೆ ಕೊನೆಗೆ ನಿಧಾನವಾಗುತ್ತದೆ. ಈ ಗಳಿಗೆ ಬಟ್ಟಲಿನ ಆವಾಂತರದಿಂದಲೇ ಭಾಸ್ಕರಾಚಾರ್ಯರಂತಹ ಮಹಾ ಜ್ಯೋತಿಷಿಯ ಮಗಳು ಲೀಲಾವತಿ

ಪುಟ 15ಕ್ಕೆ



ಬಿ.ಪಿ.ಎಲ್.ಕಾರ್ಮಿಕರ ಹೋರಾಟ ನಿಧಿ

ಬಿಪಿಎಲ್ ಕಾರ್ಮಿಕ ಮುಖಂಡರು ಜೈಲು ವಾಸ ಅನುಭವಿಸುತ್ತಿದ್ದು, ಅದಕ್ಕೆ ಸಂಬಂಧಪಟ್ಟಂತೆ ಸುಪ್ರೀಂಕೋರ್ಟ್‌ನಲ್ಲಿ ಮನವಿ ಸಲ್ಲಿಸಲಾಗಿದೆ. ಈ ಹೋರಾಟ ನಡೆಸಲು ಲಕ್ಷಾಂತರ ರೂಪಾಯಿ ವೆಚ್ಚ ಆಗಲಿದ್ದು ಸಾರ್ವಜನಿಕರಿಂದ ಕಾರ್ಮಿಕರಿಂದ ಹಣ ಸಂಗ್ರಹಿಸಬೇಕೆಂದು ಕರೆ ನೀಡಲಾಗಿತ್ತು. ಈ ಕುರಿತು ಸಿಪಿಐ(ಎಂ) ಪಕ್ಷದ ವತಿಯಿಂದ ಈ ಕೆಳಗಿನಂತೆ ಹಣ ಸಂಗ್ರಹಿಸಲಾಗಿದೆ.

ಬಳ್ಳಾರಿ ಜಿಲ್ಲಾ ಸಮಿತಿ	1,000.00
ದೇವದುರ್ಗ ತಾಲ್ಲೂಕು ಸಮಿತಿ	752.00
ಶ್ರೀನಿವಾಸಪ್ಪ ತಾಲ್ಲೂಕು ಸಮಿತಿ	700.00
ಒಟ್ಟು	2,452.00

ಬಿಹಾರ ನೆರೆ ಪರಿಹಾರ ನಿಧಿ

ಹಾಸನ ನಗರ ಸಮಿತಿ	5,300
ದ.ಕ. ಜಿಲ್ಲಾ ಸಮಿತಿ	3,600
ಮೈಸೂರು ಜಿಲ್ಲಾ ಸಂ.ಸಮಿತಿ	16,270
ಧಾರವಾಡ ಜಿಲ್ಲಾ ಸಂ. ಸಮಿತಿ	1000
ಕೆ.ಜಿ.ಎಫ್ (ಕೋಲಾರ) ಸ್ಥಳೀಯ ಸಮಿತಿ	4000
ಕೋಲಾರ ಜಿಲ್ಲಾ ಸಮಿತಿ ಸದಸ್ಯರಿಂದ	340
ಒಟ್ಟು	30,510

ಸಂಪಾದಕೀಯ

ಸೌಹಾರ್ದ ರಾಜ್ಯೋತ್ಸವವಾಗಲಿ

ನಮಗಿಂದು ಕರ್ನಾಟಕ ರಾಜ್ಯೋತ್ಸವದ ಸಂಭ್ರಮ. ಭಾಷಾವಾರು ಪ್ರಾಂತ್ಯಗಳ ರಚನೆಗಾಗಿ ತ್ಯಾಗ, ಬಲಿದಾನದಿಂದ ಹೋರಾಡಿದವರ ನೆನೆವ ಸಂದರ್ಭ. ಹಾಗೆಯೇ ಭಾರತದ ಸ್ವಾತಂತ್ರ್ಯ ಹಾಗೂ ಏಕೀಕರಣದ ಆಶಯಗಳನ್ನು ಸಾಧಿಸಲಾಗಿದೆಯೇ ಎಂದು ಅವಲೋಕಿಸಿ, ಮುನ್ನೆಡೆಯ ಸವಾಲು ಗುರುತಿಸಿಕೊಳ್ಳುವ ಸನ್ನಿವೇಶವೂ ಕೂಡ.

'ಸರ್ವಜನಾಂಗದ ಶಾಂತಿಯ ತೋಟ'ವೆಂದು ರಾಷ್ಟ್ರಕವಿ ಕುವೆಂಪುರವರಿಂದ ಬಣ್ಣಿಸಲಾದ ಕರ್ನಾಟಕ ಶಾಂತಿ, ಸೌಹಾರ್ದತೆಯ ನೆಲೆವೀಡು. ಬಹುಭಾಷಾ, ಬಹು ಸಂಸ್ಕೃತಿಗಳಿಂದ, ಅರಳಿ ನಿಂತ ನಾಡು, ಇಲ್ಲಿ ಭಾಷೆ, ಆಚರಣೆಗಳಿಗಷ್ಟೆ, ಭಿನ್ನವಲ್ಲ ಸೂಫಿ, ಸಂತರು, ಶರಣರಂಥವರು ಹಲವು ಧಾರ್ಮಿಕ ಸಂದೇಶದ ವೈವಿಧ್ಯತೆಗಳು ಮೇಳೈಸಿವೆ. ಯಾವುದೇ ರಾಜ್ಯ ಅಥವಾ ದೇಶ ಪ್ರಗತಿ ಸಾಧಿಸಬೇಕಾದರೆ ಶಾಂತಿ, ಸಾಮರಸ್ಯ ಜನತೆಯಲ್ಲಿ ಇರುವುದು ಅತ್ಯಗತ್ಯ. ಅದನ್ನು ಜತನದಿಂದ ಕಾಯ್ದುಕೊಳ್ಳಬೇಕಾಗಿದೆ.

ಕರ್ನಾಟಕದಲ್ಲಿ ಸೌಹಾರ್ದತೆ, ಶಾಂತಿಗೆ ಧಕ್ಕೆ ಒದಗುತ್ತಿದೆ. ಫ್ಯಾಸಿಸ್ಟ್ ಮಾದರಿಯ ಕೋಮುವಾದವು ಅಪಾಯ ಹೆಚ್ಚಿಸಿದೆ. ಕೋಮುದ್ವೇಷದ ಬೆಳವಣಿಗೆಗಾಗಿ ಹಲವು ವರ್ಷಗಳಿಂದಲ್ಲೂ ಕೋಮುವಾದಿಗಳೂ ಸತತವಾಗಿ ಯತ್ನಿಸುತ್ತಲೇ ಬಂದಿದ್ದಾರೆ. ಈ ದಿನಗಳಲ್ಲಂತೂ ಭಯೋತ್ಪಾದನೆಯ ಕರಿನೆರಳು ಬಿದ್ದಿದೆ.

ಬಿಜೆಪಿ ಪಕ್ಷವು ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ನಂತರ ಈ ಅಪಾಯ ಹೆಚ್ಚಿದೆ. ಮುಂಬರುವ ಲೋಕಸಭಾ ಚುನಾವಣೆಗಳನ್ನು ಗಮನದಲ್ಲಿರಿಸಿದ ಬಿಜೆಪಿ ಹೆಚ್ಚಿನ ಸಂಸತ್ತಿನ ಸ್ಥಾನ ಪಡೆಯಲು, ಗೆದ್ದ ವಿಧಾನ ಸಭಾ ಕ್ಷೇತ್ರಗಳಲ್ಲಿ ಮತ ಕ್ರೋಢಿಕರಿಸಿಕೊಳ್ಳಲು ಎಲ್ಲಾ ಪ್ರಯತ್ನಗಳಿಗೆ ಇಳಿದಿದೆ. ಇದರೊಂದಿಗೆ ಆರ್.ಎಸ್.ಎಸ್. ಸಂಘಟನೆಯು ಬಿಜೆಪಿ ಅಧಿಕಾರದಲ್ಲಿರುವುದನ್ನು ಬಳಸಿಕೊಂಡು ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳಲು ಹವಣಿಸುತ್ತಿದೆ.


ಅಭಿವೃದ್ಧಿಯ ಮಂತ್ರ ಜಪಿಸಿ ಅಧಿಕಾರಕ್ಕೆ ಬಂದ ಬಿಜೆಪಿಯು ಇಂದು ಅದನ್ನೇ ಮರೆತಿದೆ. ವ್ಯತಿರಿಕ್ತವಾಗಿ ನಡೆಯುತ್ತಿದೆ. ಜನತೆಯ ಸಂಕಷ್ಟಗಳು ಹೆಚ್ಚಿವೆ. ಆಳಗೊಂಡ ಕೃಷಿ ಬಿಕ್ಕಟ್ಟು ಪರಿಣಾಮವಾಗಿ ರೈತರ ಆತ್ಮಹತ್ಯೆ, ಹೆಚ್ಚಿದೆ. ಬೆಲೆ ಏರಿಕೆ, ನಿರುದ್ಯೋಗ, ಹೀಗೆ ಆನೇಕ ಸಮಸ್ಯೆಗಳು ಉಲ್ಬಣಗೊಂಡಿವೆ. ಜನತೆ ಪರಿಹಾರ ನಿರೀಕ್ಷಿಸುತ್ತಿದ್ದರೆ ಬಿಜೆಪಿಯು ಜನರ ಅತೃಪ್ತಿಯನ್ನು ಬೇರೆ ಕಡೆಗೆ ತಿರುಗಿಸಲು ಕೋಮುವಾದಿ ಗಲಭೆ ಸೃಷ್ಟಿಸಿ, ಅಲ್ಪಸಂಖ್ಯಾತರ ಮೇಲೆ ಸತತವಾಗಿ ಧಾಳಿ ನಡೆಸುತ್ತಿದೆ. ಕ್ರೈಸ್ತ ಚರ್ಚ್‌ಗಳ ಮೇಲಿನ ಧಾಳಿ, ಗಣೇಶ ಹಬ್ಬದ ಸಂದರ್ಭದಲ್ಲಿ ಮುಸ್ಲಿಂರ ಮೇಲೆ ನಡೆದ ಅಕ್ರಮಗಳೇ ರಾಜ್ಯದಲ್ಲಿ ಶಾಂತಿ-ಸೌಹಾರ್ದತೆಯನ್ನು ಕದಡಿವೆ.

ಇಂತಹ ಕೋಮುವಾದಿಗಳ ಧಾಳಿಗಳು ಭಯೋತ್ಪಾದನೆಯನ್ನು ಬೆಳೆಸುತ್ತಿದೆ. ಇವೆರಡಕ್ಕೂ ಆಂತರಿಕ ಸಂಬಂಧಗಳಿವೆ. ಕೇವಲ ಅಲ್ಪಸಂಖ್ಯಾತರ ಹೆಸರಿನ ಭಯೋತ್ಪಾದನೆ ಮಾತ್ರವಲ್ಲ. ಹಿಂದುತ್ವ ಹೆಸರಿನಲ್ಲಿ ಬಜರಂಗದಳ, ವಿ.ಹೆಚ್.ಪಿ ಯಂತಹ ಸಂಘಟನೆಗಳು ಆತ್ಮಹತ್ಯಾ ದಳಗಳನ್ನು ರಚಿಸಿಕೊಂಡು, ಸಶಸ್ತ್ರ ತರಬೇತಿ ನೀಡುತ್ತಿವೆ ಎಂಬ ವರದಿಗಳಿವೆ. ಕೋಮುವಾದದ ಬೆಳವಣಿಗೆಗಳಿಗೆ ಭಯೋತ್ಪಾದನೆಯು ಸಹ ಆಯುಧಗಳನ್ನು ಒದಗಿಸುತ್ತದೆ.

ಇದೇ ಸಂದರ್ಭದಲ್ಲಿ ಬಾಷಾಂಧ ಶಕ್ತಿಗಳು ಜನರ ನಡುವಿನ ಒಗ್ಗಟ್ಟನ್ನು ಒಡೆಯಲು ಸಕ್ರಿಯವಾಗಿವೆ. ಪ್ರಾದೇಶಿಕ ಅಸಮಾನತೆಯಿಂದಾಗಿ ಪ್ರತ್ಯೇಕತೆಯ ಕೂಗು ಕೇಳುತ್ತಿವೆ. ಇಂತಹ ಶಕ್ತಿಗಳು ತಲೆ ಎತ್ತಿ ಬೆಳೆಯುವುದು ಅಂತಿಮವಾಗಿ ನಾಡಿನ ಜನರ ಒಗ್ಗಟ್ಟಿಗೆ ದೇಶದ ಸಮಗ್ರತೆಗೆ ಗಂಡಾಂತರಕಾರಿಯಾಗಿದೆ. ಬಿಜೆಪಿಯು ಇಂದು ನಾಡಗೀತೆಯ ಆಶಯವನ್ನು ರಕ್ಷಿಸದೆ, ಅದರ ಮೇಲೆ ಮಾರಣಾಂತಿಕ ಧಾಳಿ ನಡೆಸುತ್ತಿದೆ. ಇಂತಹ ಸಂದರ್ಭದಲ್ಲಿ ಇಂದಿನ ರಾಜ್ಯೋತ್ಸವ ಕೇವಲ ನಾಡಹಬ್ಬವಾದರೆ ಸಾಲದು, ಅದು ಸೌಹಾರ್ದತೆಯ ರಾಜ್ಯೋತ್ಸವವಾಗಬೇಕು. ಶಾಂತಿ ಸೌಹಾರ್ದತೆ ಜನತೆಯ ಒಗ್ಗಟ್ಟು ಉಳಿಸಿಕೊಂಡು ಏಕೀಕರಣದ ಆಶಯಗಳ ಪೂರ್ಣ ಸಾಧನೆಗೆ ಮುನ್ನಡೆಯು ಬೇಕು. ಆದ್ದರಿಂದ ಕೋಮುವಾದ - ಭಯೋತ್ಪಾದನೆಗಳನ್ನು ಹಿಮ್ಮೆಟ್ಟಿಸಿ ಸೋಲಿಸುವ ಆಚರಣೆ ಎಲ್ಲರದಾಗಲಿ.

ಈ ಸಂದರ್ಭದಲ್ಲಿ ಜನಶಕ್ತಿಯು ಎಲ್ಲಾ ಓದುಗರಿಗೆ ಶುಭಾಶಯಗಳನ್ನು ತಿಳಿಸುತ್ತದೆ.

ಯಡಿಯೂರಪ್ಪ ಸರ್ಕಾರ ಸರ್ವಂ ಭ್ರಷ್ಟಮಯಂ



ಕರ್ನಾಟಕದಲ್ಲಿ ತಂಡೋಪ ತಂಡವಾಗಿ ಅಧಿಕಾರಿಗಳ ವರ್ಗಾವಣೆಯಾಗುತ್ತಿರುವುದನ್ನು ಕಂಡ ಗೆಳೆಯರೊಬ್ಬರು 'ರಾಜ್ಯದಲ್ಲಿ ವರ್ಗಾವಣೆ ಯಾಗದ ಅಧಿಕಾರಿಗಳು ಯಾರಾದರೂ ಉಳಿದಿದ್ದಾರೆಯೇ' ಎಂದು ಕೇಳಿದರು. ಅವರ ಗಮನ ಎಲ್ಲಾ ಇದ್ದದ್ದು ಯಡಿಯೂರಪ್ಪನವರ ಸರ್ಕಾರ ಮತ್ತೆ ಮತ್ತೆ ಸಾಮೂಹಿಕ ವರ್ಗಾವಣೆ ಮಾಡುತ್ತಿದ್ದ ದಿಢೀರ್ ಪ್ರಸಂಗಳ ಬಗ್ಗೆ. ಏನಿಲ್ಲವೆಂದರೂ ಒಂದೊಂದು ಬಾರಿಗೆ ನೂರಾರು, ಮುನ್ನೂರು ಹೀಗೆ ಪೊಲೀಸ್ ಅಧಿಕಾರಿಗಳನ್ನು, ಇತರೆ ಇಲಾಖೆಗಳವರನ್ನು ಮಧ್ಯರಾತ್ರಿಯಲ್ಲಿ ವರ್ಗಾಯಿಸುತ್ತಲೇ ಬಂದಿದ್ದು ಎಂತಹವರಿಗೂ ಅಚ್ಚರಿ ತರದೇ ಇರಲಾರದು. ಇಂತಹ ವರ್ಗಾವಣೆಗಳ ಬಗ್ಗೆ ಸ್ವತಃ ತಮ್ಮ ಮಂತ್ರಿ ಮಂಡಲದ ಸಚಿವರುಗಳು, ಇಲಾಖೆಗಳ ಉನ್ನತ ಅಧಿಕಾರಿಗಳು ಗೊಣಗಾಟ ನಡೆಸುತ್ತಿರುವುದು ಇನ್ನೂ ಕೇಳುತ್ತಲೇ ಇದೆ. ಯಾಕೆಂದರೆ ತಮ್ಮ ಇಲಾಖೆಗಳ ಸರ್ಕಾರದ ವರ್ಗಾವಣೆ ತಮಗೆ ತಿಳಿಯುವುದು ಫೈಲ್‌ಗೆ ಒಂದು ಸಹಿ ಹಾಕಿ ಸಾಗ ಹಾಕಬೇಕಾಗಿ ಬಂದಾಗಲೇ.

ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಹೇಳಿದರು 'ಈ ವರ್ಗಾವಣೆಗಳು ನಮ್ಮ ಕೈಯಲ್ಲಿ ಇಲ್ಲ' ಅಂದರೆ ಇಂತಹ ವರ್ಗಾವಣೆಗಳು ಪುಟ್ಟಾ ಪೂರ ಮುಖ್ಯಮಂತ್ರಿಗಳ ಕೈಯಲ್ಲಿದೆ. ಗೃಹ ಮಂತ್ರಿ ಅದಕ್ಕೆ ಕೈ ಜೋಡಿಸಿದ್ದಾರೆ. ಎಲ್ಲಾ ವರ್ಗಾವಣೆಗಳು ಮುಖ್ಯಮಂತ್ರಿಗಳಿಂದಲೇ ಆಗಬೇಕು. ಬೇರೆಯವರಿಗೆ ಅಧಿಕಾರವನ್ನೇ ನೀಡಿಲ್ಲ.

ಹೀಗೆ ವರ್ಗಾವಣೆಯಾಗಿ ಬಂದಿದ್ದ ಉಪನೊಂದಣಾಧಿಕಾರಿಯೊಬ್ಬ ಗೊಣಗುತ್ತಿದ್ದ 'ನಾನು ಇಲ್ಲಿಗೆ ಭಂದು ಆರು ದಿನಗಳಾದವು. ಒಂದಿಪ್ಪತ್ತು ದಿನಗಳಾದರೂ ಇಲ್ಲಿರಬೇಕೆಂದು ಕೇಳಿ ಬಂದಿದ್ದೆ. ಆದರೆ ಹೀಗಾಯಿತು'. ಆತನ ವ್ಯಥೆಯ ಮಾತಿನ ಹಿಂದೆ ಒಂದು ಮಮಕಾರವಿತ್ತು.

ಆತ ಇಲ್ಲಿಗೆ ವರ್ಗಾವಣೆಯಾಗಿ ಬರಲು ಇಪ್ಪತ್ತು ಲಕ್ಷ ರೂಪಾಯಿ ಕೊಟ್ಟಿದ್ದನಂತೆ. ಇಪ್ಪತ್ತು ದಿನಗಳಾದರೂ ಇದ್ದರೆ ಒಂದಿಷ್ಟು ಕಾಸು ಹಿಂದೆ ಪಡೆಯುವ ಮತ್ತು ಅದರ ಮೇಲೊಂದಿಷ್ಟು ಮಾಡುವ ಯೋಜನೆ ಇತ್ತಂತೆ. 'ನಿಮಗೆ ನಷ್ಟವಾಯಿತೆಂಬ ದುಃಖವೇ'? ಎಂದರೆ 'ಹಾಗೇನಿಲ್ಲ ಈಗಾಗಲೇ 32 ಲಕ್ಷ ಮಾಡಿದ್ದೇನೆ. ಇನ್ನೊಂದಿಷ್ಟು ಆಗಿದ್ದರೆ' ಎಂದು ಪಿಸೂಮಾತಿನಲ್ಲಿ ಹೇಳಿದ ತನ್ನ ಅಪ್ತಮಿತ್ರನಿಗೆ ಈ ಮಹಾಶಯ ! ಆರು ದಿನಗಳಲ್ಲಿ 32 ಲಕ್ಷ ! ಇಲ್ಲಿಗೆ ಇಂಥಲ್ಲಿಗೆ ಬರುವುದೇ ಸಾರ್ವಜನಿಕ ಹಣ ದೋಚಲು, ಇಲ್ಲವೇ ಹಲವು ಅಕ್ರಮಗಳನ್ನು ನಡೆಸಿ ಲಂಚ ಹೊಡೆಯಲು!. ಇದು ಒಬ್ಬರ ಕಥೆಯಲ್ಲ, ಎಲ್ಲರದ್ದು ಒಂದೊಂದು ಕಥೆ,ಅಂದರೆ ಈ ವರ್ಗಾವಣೆಯ ಪ್ರಕ್ರಿಯೆಯು ಬಹುದೊಡ್ಡ ದಂಧೆ. ನೂರಾರು ಕೋಟಿ ರೂಪಾಯಿಗಳ ಅಕ್ರಮ ದಂಧೆ.

ಎಂತಹ ವಿಚಿತ್ರ ನೋಡಿ. ಭ್ರಷ್ಟಾಚಾರ ತೊಲಗಿಸಿ, ಸ್ವಂತ, ದಕ್ಷ ಆಡಳಿತ ನೀಡುವುದಾಗಿ ಈಗಾಗಲೇ ಮುಖ್ಯಮಂತ್ರಿಗಳು, ಬಿಜೆಪಿ ನಾಯಕರು ಹೇಳುತ್ತಲೇ ಇದ್ದಾರೆ. ತಮ್ಮದು 'ಅಭಿವೃದ್ಧಿ'ಯ ಸರ್ಕಾರ ಎನ್ನುತ್ತಿದೆ. ಈ ಪದಗಳಿಗೆ ಬೇರೆಯದೇ ಅರ್ಥವನ್ನೂ ತಂದುಕೊಟ್ಟವರೇ ಕಮಲಧಾರಿಗಳು ! ಶಕ್ತ್ಯನುಸಾರ ನೀವು ಊಟ ಮಾಡಿ, ಮುಖ್ಯ ಪಾಲು ನಮಗೆ ನೀಡಿ? ಎಂಬುದೇ ಇವರ ಸಂದೇಶ. ದಕ್ಷ, ಜನಪರ ಆಡಳಿತ ನೀತಿ ಎಂಬುದು ಈಗಿನ ಮೇಲಿನ ಮನೆ ಅಷ್ಟೇ.

ಹೀಗೆ ಮುಖ್ಯಮಂತ್ರಿಗಳು, ಮಂತ್ರಿಗಳು, ಅಧಿಕಾರಿಗಳು ಶಕ್ತ್ಯಾನುಸಾರ ಲೂಟಿಗೆ ಇಳಿದಿರುವಾಗಲೇ ಅಸಮಧಾನಗೊಂಡ ಆಡಳಿತ ಪಕ್ಷದ ಕೆಲವು ಶಾಸಕರು, ಗೊಣಗಾಡಿದ್ದಾರೆ. ಭ್ರಷ್ಟಾಚಾರವೆನ್ನುವುದು ಆಡಳಿತದಲ್ಲಿ, ತೀರಾ ಹಾಸುಹೊಕ್ಕಾಗಿದೆ. ಒಬ್ಬ ಶಾಸಕ ತನ್ನ ಕ್ಷೇತ್ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಹೊಂದಿದ ಪ್ರದೇಶವಾದರೆ ವರ್ಷಕ್ಕೆ 50 ರಿಂದ 100 ಕೋಟಿ ರೂಪಾಯಿಗಳ ವಹಿವಾಟಿನಲ್ಲಿ ಇರುತ್ತಾನೆ. ಐದು ವರುಷಕ್ಕೆ ಬೆಂಗಳೂರಿನಂತಹ ಊರಲ್ಲಾದರೆ 500 ಕೋಟಿ ರೂಪಾಯಿಯನ್ನು ಮೀರಿದ ವಹಿವಾಟು ! ಈ ದಂಧೆ ಹೇಗೆ ನಡೆಯುತ್ತದೆ ಎಂಬುದನ್ನು ಬಿಲ್ಡರ್ ಒಬ್ಬ ಹೇಳುತ್ತಿದ್ದ. ಬಿಡಿಎ ಅಧಿಕಾರಿಗಳಿಗೆ ಮೂರು ಕೋಟಿ ಕೊಟ್ಟೆ. ಎರಡು ಕೋಟಿ ಕಟ್ಟಡ ನಿರ್ಮಾಣದ ಕೆಲಸಗಳ ಆರಂಭಕ್ಕೆ ಹಾಕಿದೆ. ನಮ್ಮ ಯೋಜನೆಗೆ ಅಂಗೀಕಾರ ಸಿಗಬೇಕಿತ್ತು. ಅಷ್ಟರಲ್ಲೇ ಆ ಸರ್ಕಾರ ಹೋಯಿತು. ಹೊಸ ಸರ್ಕಾರ ಬಂತು. ಈಗ ಮತ್ತೇ ಹೊಸದಾಗಿ ಆರಂಭಿಸಲು ಹೇಳುತ್ತಿದ್ದಾರೆ. ಏನು ಮಾಡುವುದು?

ಇದು ದೊಡ್ಡವರಿಂದ ದೊಡ್ಡವರು ದೋಚುವ ಪರಿ ಎಂದು ಸುಮ್ಮನಾಗುವಂತಿಲ್ಲ. ಮುಖ್ಯಮಂತ್ರಿಯವರ ಕಛೇರಿಗೆ ಏನಾದರೂ ನೀವು ಒಂದು ಪಕ್ಷ ಮನವಿ ಕೋರಿಕೆ ನೀಡುವಂತಿದ್ದರೆ, ಅದು ಮುಂದೆ ಸರಿಯಬೇಕಾದರೆ ಐದೂನೂರರ ನೋಟು ಇಡಬೇಕಾಗುತ್ತದೆ. ವಿಧಾನಸೌಧದೊಳಗೆ ಹೋಗಬೇಕೆಂದರೆ ಇಂತಿಷ್ಟು ಹಣಕೊಟ್ಟರಾಯಿತು ಎನ್ನುವ ಮಾತುಗಳು ಅನೇಕ ಕೇಳುತ್ತವೆ. ಇಂತಹ ನಿತ್ಯದ ಘಟನೆಗಳು ಮಂತ್ರಿ-ಮಹೋದಯರ ಮೂಗಿನ ಕೆಳಗೆ ನಡೆಯುತ್ತಿದ್ದರೂ ಕಂಡು ಕಾಣದಂತೆ, ಕೇಳದಂತೆ ನಡೆಯುತ್ತಿರುವುದರಲ್ಲಿ ಎಂತಹ ಹಂಚಿಕೆ ಇದೆ. ಇಂತಹ ಹಗಲೂ ದರೋಡೆ ಅಪರಾಧ ಎನ್ನಿಸುವುದಿಲ್ಲ. ಶಾಸಕರುಗಳ ಬಹಿರಂಗ ಖರೀದಿಯು ರಾಜಕೀಯ ತಂತ್ರದಲ್ಲಿ ಮೇಲುಗೈ ಸಾಧನೆ ಎಂದೇ ಬಿಂಬಿಸಲಾಗುತ್ತಿದೆ. ಜನರ ವಿಶ್ವಾಸಗಳಿಸಿ ಆರಿಸಿ ಬರಲು ಆಗದ ಮುಖೇಡಿಗಳು ಆರಿಸಿ ಬರಲು ಹಣದ ಹೊಳೆಯನ್ನೆ ಹರಿಸುವುದು ಹೋರಾಟದ ಒಂದು ತಂತ್ರವೆಂದು, ಆ ಜಾಣತನಕ್ಕೆ ಹೊಗಳಿಕೆಯ ಹೊಗೆ ಹಾಕಲಾಗುತ್ತಿದೆ. ಇಂತಹ ಅಪೂರ್ವ ಮಂತ್ರಿಗಳ ಸಂಗಮ ಬಿಜೆಪಿಯ ಈ ಸರ್ಕಾರ !.

ಯಡಿಯೂರಪ್ಪನವರ ಸರ್ಕಾರ ಎಷ್ಟೊಂದು ಲಜ್ಜೆಗೆಟ್ಟಿದೆ, ಭ್ರಷ್ಟರನ್ನು ರಕ್ಷಿಸಲು ಕಾನೂನು, ರೀತಿ ನೀತಿಗಳನ್ನು ಯಾವುದೇ ಅಳುಕಿಲ್ಲದೇ ಉಲ್ಲಂಘಿಸಿ ಭಂಡತನದಿಂದ ಸಮರ್ಥಿಸಿ ಕೊಳ್ಳುತ್ತಿದೆ ಎಂಬುದಕ್ಕೆ ಲೋಕಾಯುಕ್ತ ನ್ಯಾ. ಸಂತೋಷ್ ಹೆಗ್ಡೆಯವರು ಬಹಿರಂಗ ಪಡಿಸಿದ ಒಂದು ಪ್ರಕರಣವೇ ಸಾಕು. ಇತ್ತೀಚಿನ ಲೋಕಾಯುಕ್ತರ ಧಾಳಿಯಲ್ಲಿ ಕೆ.ಎ.ಎಸ್. ಅಧಿಕಾರಿ ಡಿ.ಬಿ.ನಾಯಕ ಎಂಬಾತನ ಮನೆ ಮೇಲೆ ಧಾಳಿ ನಡೆಸಿದ ಲೋಕಾಯುಕ್ತ ಅಧಿಕಾರಿಗಳು ಅಕ್ರಮ ಸಂಪತ್ತಿನ

ಪುಟ 10ಕ್ಕೆ

ಅಣು ಒಪ್ಪಂದಕ್ಕೆ ಕಾರ್ಮಿಕರ ಧಿಕ್ಕಾರ ಮಲಬಾರ್ ಸಮರಾಭ್ಯಾಸಕ್ಕೆ ವಿರೋಧ

ಭಾರತ ಅಮೆರಿಕಾ ನಾಗರಿಕ ಪರಮಾಣು ಒಪ್ಪಂದ ಮಾಡಿ ದೇಶದ ಐಕ್ಯತೆ, ಸಮಗ್ರತೆ ಸಾರ್ವಭೌಮತೆಗೆ ಧಕ್ಕೆ ತರಬೇಡಿ ಎಂಬ ಜನರ ಮಾತು ಕೇಳದ ಕೇಂದ್ರ ಯುಪಿಎ ಸರ್ಕಾರ ಅಣು ಒಪ್ಪಂದಕ್ಕೆ ಸಹಿ ಹಾಕಿತು. ಇದೀಗ ಭಾರತದ ರಕ್ಷಣಾ ವ್ಯವಸ್ಥೆಯನ್ನೇ ಅಮೆರಿಕಾ ಜೊತೆಗೆ ಹಂಚಿಕೊಳ್ಳುವ ಉದ್ದೇಶ ಹೊಂದಿದ ಭಾರತ ಅಮೆರಿಕಾ ಜಂಟಿ ನೌಕಾಪಡೆ ಸಮರಾಭ್ಯಾಸವನ್ನು ಅರಬ್ಬೀ ಸಮುದ್ರ ತೀರದಲ್ಲಿ ನಡೆಸಲು ಸರ್ಕಾರ ತೀರ್ಮಾನಿಸಿದೆ.

ಈ ಸಮರಾಭ್ಯಾಸವನ್ನು ಖಂಡಿಸಿ, ಪರಮಾಣು ಒಪ್ಪಂದಕ್ಕೆ ಧಿಕ್ಕಾರ ಹಾಕುತ್ತಾ ಸಿಪಿಐ(ಎಂ) ಬೆಳ್ತಂಗಡಿ ತಾಲ್ಲೂಕ ಸಮಿತಿ ನೇತೃತ್ವದಲ್ಲಿ ಬೆಳ್ತಂಗಡಿಯಲ್ಲಿ ಬೃಹತ್ ಪ್ರತಿಭಟನಾ ಜಾಥಾ ಹಾಗೂ ಪ್ರತಿಭಟನಾ ಸಭೆ ಅಕ್ಟೋಬರ್ 20 ರಂದು ನಡೆಯಿತು. ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಸಿಪಿಐ(ಎಂ) ಪಕ್ಷದ ದ.ಕ. ಜಿಲ್ಲಾ ಕಾರ್ಯದರ್ಶಿ ಬಿ.ಮಾಧವ ಮಾತನಾಡುತ್ತಾ ಅಣು ಒಪ್ಪಂದದ ಮೂಲ ಉದ್ದೇಶವು ರಣನೀತಿ ಮೈತ್ರಿ ಎಂದು ಸಿಪಿಐ(ಎಂ) ಈ ಮೊದಲೇ ಸ್ಪಷ್ಟಪಡಿಸಿತ್ತು. ಉಭಯ ದೇಶಗಳ ಪಡೆಗಳು ಉಪಯೋಗಿಸುವ ಶಸ್ತ್ರಾಸ್ತ್ರಗಳಲ್ಲಿ ಸಾಮಾನ್ಯತೆ ಸಾಧಿಸುವ ಮೂಲಕ ಮುಂದಿನ ದಿನಗಳಲ್ಲಿ ಅಮೆರಿಕಾ ಬಯಸುವ ಯಾವುದೇ ತೃತೀಯ ದೇಶದ ಮೇಲೆ ಶಸ್ತ್ರಾಸ್ತ್ರ ದಾಳಿ ಮಾಡುವುದೇ ಈ ಸಮರಾಭ್ಯಾಸದ ದುರುದ್ದೇಶ ಎನ್ನುವುದು ಅಣು ಒಪ್ಪಂದದ ಭಾಗವಾದ ಹೈಡ ಆಕ್ಟ್ ಅಭ್ಯಾಸ ಮಾಡಿದರೆ ಗೊತ್ತಾಗುತ್ತದೆ ಎಂದರು. ಅಣು ಅಸ್ತ್ರ ತಯಾರಿಸದಂತೆ ಇರಾನ್‌ನ್ನು ತಡೆಯುವ ಅಮೆರಿಕಾದ ಕೆಲಸದಲ್ಲಿ ಭಾರತ ಭಾಗಿಯಾಗಬೇಕೆಂಬುದು ಹೈಡ್ ಆಕ್ಟ್‌ನ ಪರಿಣಾಮದಿಂದಾದ ಒತ್ತಡವಾಗಿದೆ. ಅಮೆರಿಕಾ ತನ್ನ ಶತ್ರುಗಳೆಂದು ಪರಿಗಣಿಸುವ ಇರಾನ್ ಮತ್ತು ಇತರ ದೇಶಗಳ ಮೇಲೆ ಮಿಲಿಟರಿ ಆಕ್ರಮಣ ಮಾಡಲು ಭಾರತದ ಪಡೆಗಳನ್ನು, ನೌಕಾಪಡೆಗಳನ್ನು ಉಪಯೋಗಿಸುವ ಸಿದ್ಧತೆಯೇ ಈ ಜಂಟಿ ಸಮರಾಭ್ಯಾಸ ಎಂದು ಹೇಳಿದರು.

ಭಾರತದ ರಕ್ಷಣಾ ಗೌಪ್ಯತೆಗಳನ್ನು ಅಮೆರಿಕಾಕ್ಕೆ ತೆರೆದಿಡುವ ಈ ಪ್ರವೃತ್ತಿಯು ರಾಷ್ಟ್ರೀಯ ಸಾರ್ವಭೌಮತೆಗೆ ಅಪಾಯಕಾರಿಯಾಗಿದೆ. ಆದುದರಿಂದ ಮಲಬಾರ್ ಎಕ್ಸರ್‌ಸೈಸ್ ಎಂದು ಕರೆಯಲ್ಪಡುವ ಈ ಜಂಟಿ ಸಮರಾಭ್ಯಾಸವನ್ನು ಸಿಪಿಐ(ಎಂ) ಖಂಡಿಸುತ್ತದೆ. ಭಾರತ ಅಮೆರಿಕಾ ಪರಮಾಣು ಒಪ್ಪಂದ ದೇಶಕ್ಕೆ, ದೇಶದ ಜನತೆಗೆ ಎಷ್ಟು ಅಪಾಯಕಾರಿ ಎಂದು ಬಿ.ಮಾಧವ ವಿವರಿಸಿದರು. ಬೆಳ್ತಂಗಡಿಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ನೂರಾರು ಕಾರ್ಮಿಕರು ಪಾಲ್ಗೊಂಡಿದ್ದರು. ಚರ್ಚ್ ಮೇಲೆ ದಾಳಿಯನ್ನು ಖಂಡಿಸುತ್ತಾ ಸಮರಾಭ್ಯಾಸವನ್ನು ವಿರೋಧಿಸುತ್ತಾ, ಅಣು ಒಪ್ಪಂದಕ್ಕೆ ದಿಕ್ಕಾರ ಕೂಗುತ್ತಾ ಸಾಗಿದ ಈ ಪ್ರತಿಭಟನಾ ಮೆರವಣಿಗೆಯಲ್ಲಿ ಕಾರ್ಮಿಕರ ಆಕ್ರೋಶ ಎದ್ದು ಕಾಣುತ್ತಿತ್ತು.

ಸಭೆಯನ್ನುದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ತಾಲ್ಲೂಕು ಮುಖಂಡ ಬಿ.ಎಂ.ಭಟ್ ಅವರು ಅಮೆರಿಕಕ್ಕೆ ಸಂತಸವಾಗಿದೆ ಎನ್ನುವ ಬದಲು ಮನಮೋಹನ್ ಸಿಂಗ್ ಭಾರತದ ಜನರಿಗೆ ಖುಷಿಯಾಗಿದೆ ಎಂದು ಬುಶ್‌ರಲ್ಲಿ ಹೇಳಿದರಂತೆ. ಕರ್ನಾಟಕದಲ್ಲಿ ನೀರು ಕೇಳಿದರೆ ಲಾಠಿ, ನ್ಯಾಯ ಕೇಳಿದರೆ ಲಾಠಿ, ಗೊಬ್ಬರ ಕೇಳಿದರೆ ಗುಂಡು, ಪ್ರಾರ್ಥನೆ ಮಾಡಲು ಹೋದರೆ ಪ್ರಾರ್ಥನಾ ಮಂದಿರ ನಾಶ, ಕೃಷಿ ಮಾಡಿದರೆ ಬೆಳೆದ ಕೃಷಿಯನ್ನೇ ನಾಶ ಮಾಡುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಇದು ಖುಷಿ ಆದ ವಿಚಾರವೇ? ಅಣು ಒಪ್ಪಂದದಿಂದ ಬರಲಿರುವ ಅಪಾಯವನ್ನು ಎದುರಿಸಲು ಕಾರ್ಮಿಕ ವರ್ಗ ತಯಾರಾಗಬೇಕು ಎಂದು ಅವರು ಆ ಮೂಲಕ ಕಾಂಗ್ರೆಸ್, ಬಿಜೆಪಿಗಳಿಗೆ ಸೂಕ್ತ ಉತ್ತರನೀಡಲು ಕಾರ್ಮಿಕರು ಸಿದ್ಧರಾಗಬೇಕು ಎಂದರು. ಸಾಮ್ರಾಜ್ಯಶಾಹಿಗಳ ಬಂಡವಾಳಿಗರ ಬಾಲಬಡುಕ ಕಾಂಗ್ರೆಸ್, ಬಿಜೆಪಿ ಸರ್ಕಾರಗಳು ಕಾರ್ಮಿಕರ ಮೇಲೆ ನಡೆಸುತ್ತಿರುವ ದಾಳಿಗಳನ್ನು ಹಿಮ್ಮೆಟ್ಟಿಸಲು ಸಿಪಿಐ(ಎಂ) ಪಕ್ಷದಿಂದ ಮಾತ್ರ ಸಾಧ್ಯ ಎಂದರು.

ಪಕ್ಷದ ತಾಲ್ಲೂಕು ಕಾರ್ಯದರ್ಶಿ ಶಿವಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿ ಸುಡುರಸ್ತೆಯಲ್ಲಿ ಮೆರವಣಿಗೆ ನಡೆಸಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದ ರೈತ ಕಾರ್ಮಿಕರನ್ನು ಅಭಿನಂದಿಸಿದರು. ಮೊದಲಿಗೆ ಶಿವಕುಮಾರ್ ಸ್ವಾಗತಿಸಿ, ಕೊನೆಗೆ ಶೇಖರ್ ಲ ವಂದಿಸಿದರು. ಪ್ರತಿಭಟನೆಯಲ್ಲಿ ಶ್ಯಾಂರಾಜ ಜಯರಾಂ, ಗೀತ, ಯಶೋಧ, ನೀಲೇಶ್, ಈಶ್ವ ಲೋಕೇಶ್, ಜುಬೇದ, ಕವಿತ, ಸುಮಲತ ನೆಬಿಸ, ಸಂಜೀವ ನ್ಯಾಕ್, ರವಿನಾಥ ರೈ ಪುತ್ತೂ ಮೊದಲಾದವರು ನೇತೃತ್ವ ವಹಿ ಯಶಸ್ವಿಗೊಳಿಸಿದರು. ○

ಅಕ್ಟೋಬರ್ 24, 2008 ರಂದು ಮಂಗಳೂರು ನಗರದ ಅಮೆರಿಕಾ-ಭಾರತ ನೌಕಾಪಡೆ ಜಂಟಿ ನೌಕಾ ಕವಾಯತನ್ನು ವಿರೋ ಸಿಪಿಐ(ಎಂ) ನೇತೃತ್ವದಲ್ಲಿ ನಡೆದ ಪ್ರತಿಭಟನೆಯ ಚಿತ್ರಗಳು







ಚಂದ್ರಲೋಕಕ್ಕೆ ನೀನೂ ಓಗಬೇಕಾಗಿತ್ತು....

'ಏನ್ಲ ಚಡ್ಡಿ ಚಿಕ್ಕ, ಇನ್ನೂ ಇಲ್ಲೇ ಇದೀಯ?'

'ಮತ್ತಿನ್ನೆಲ್ಲಿಗೆ ಓಗ್ ಬೇಕಾಗಿತ್ತು ಅಂತೀಯಪ್ಪ ಎಣ್ಣೆ ತಮ್ಮಣ್ಣ?'

'ಚಂದ್ರಲೋಕಕ್ಕೆ ರಾಕೆಟ್ ಕಳ್ಸವ್ರಂತಲ್ಲ, ನೀನೂ ಓಗ್ ಬೇಕಾಗಿತ್ತು ಅನಿಮೂನು'.

'ಅನಿಮೂನಲ್ಲಿ ಅನಿ ಅಲ್ಲ ಕಣಲಾ, ಪೆಟ್ರೋಲ್ ತರಕ್ಕೆ ಓಗವ್ರಂತೆ'.

'ಅಲ್ಲಿಂದ ಪೆಟ್ರೋಲ್ ಎಂಗಲಾ ತರಕ್ಕಾಯ್ತುದೆ? ಸುಮ್ ಸುಮ್ಕೆ ರೀಲ್ ಬುಡಬೇಡ.'

'ಪೆಟ್ರೋಲು ಅಂದ್ರೆ ಅದೇನೋ ಅಂತರಲ್ಲ, ಇಂದನ ಊಂ., ಇಂದನ ತರಕ್ಕೋಗವರಂತೆ.'

'ಓ ನಿಮ್ಮ ಈಸ್ಪರಣ್ಣನ ಕಾತೆ, ಇಂದನ. ಅಲ್ಲ ಕಣಲಾ, ಇರಾಕಿಂದ ಪೆಟ್ರೋಲ್ ತರಾಕೇ ಬುಡದೆ ಕಡ್ಡಿ ಆಡಿಸಿ, ನಮ್ಮ ದೇಸದ ತಲೆಗೆ ಹಣು ಒಪ್ಪಂದ ಕಟ್ಟುದ್ರು, ಆ ಅಮೆರಿಕಾ ದೇಸದೋರು . ಇನ್ನು ಚಂದ್ರನಿಂದ ತರಕ್ಕೆ ಬುಡ್ತರೇನ್ಲಾ?'

'ಏ ಅಂಗೆಲ್ಲ ಮಲತಾಯಿ ದೋರಣೆ ಮಾಡಿದ್ರೆ ಸುಮ್ನೆ ಬುಡಕಿಲ್ಲ ನಮ್ಮ ಯಡೂರಪ್ಪ, ಆವಾಜ್ ಆಕ್ಬುಡ್ತರೆ'.

'ನಿಮ್ಮ ಯಡೂರಪ್ಪನ ಆವಜಾಜೇನಿದ್ರೂ ಕೇಂದ್ರ ಸರಕಾರದ ಮೇಲೆ ಮಾತ್ರ, ಅಮೆರಿಕಾ ಅಂದ್ರೆ ಅವರಿಗೆ ಬೋ ಪ್ರೀತಿ...., ಅದಿರ್ಲಿ, ಯಡೂರಪ್ಪ ಮಲತಾಯಿ ದೋರಣೆ ಅಂತ ಆವಾಜ್ ಆಕಿದ್ದಕ್ಕೆ, ಆ ದತ್ತ ಅಂಬೋನು ಒಂದು ಡಜನ್ ಪ್ರಸ್ನೆಗಳನ್ನ ಇಕ್ಕಿದಾನಲ್ಲ, ನಿಮ್ಮ ಸೋಂತ ತಾಯಿ ಕೇಂದ್ರ ಸರಕಾರದಲ್ಲಿದ್ದಾಗ ಏನೇನು ಗನ ಕಾರ್ಯ ಮಾಡವರೆ ಅಂತ.'

'ಏ ಅವೆಲ್ಲ ಏನೂ ಲೆಕ್ಕಕ್ಕಿಲ್ಲ ಬುಡ್ಲ, ಅ ಇಸ್ಯ ಬುಡು, ಏನು ದೀಪಾವಳಿ ಅಬ್ಬ ಜೋರಾ? ಅಳಿಯ ಬತ್ತನಾ? ಅಬ್ಬಕ್ಕೆ?'

'ಈ ಅಬ್ಬಗಳು ಮೂರು ನಾಕು ದಿನ ರಜ ಬಂತು ಅಂದ್ರೆ ಬಯ ಆಗುತ್ತೆ ಕಣ್ಲಾ, ನಿಮ್ಮ ಬಯೋತ್ಪಾದಕ ಸರಕಾರದಿಂದ, ಅಳಿಯ ಯಾಕೆ ಇವರೇ ಇದಾರಲ್ಲ ಮನೆ ತೊಳಿಯಾಕೆ '

'ಏನ್ಲಾ ಅಂಗಂತಿ?'

'ಮತ್ತಿನ್ನೇನು, ಅಬ್ಬ, ಅರಿದಿನ ಅನ್ನಂಗಿಲ್ಲ, ರಜಗಳು ಬಂದ್ರೆ ಸಾಕು, ಎಲ್ಲಿ ರಸ್ತೆ ಅಗಲ ಅಂತ ಬಿಲ್ಡಿಂಗುಗಳನ್ನೆಲ್ಲ ದಾಳಿ ಮಾಡಿ ಕೆಡಗಿ ಹಾಕ್ತಾರೋ ಅಂತ...,'

'ಏನ್ಲಾ ಅಂಗಂತೀ.., ರಸ್ತೆ ಸಂದಾಕಿ ಮಾಡಿ ಅಬಿರುದ್ದಿ ಮಾಡಕೆ ಒಂಟ್ರೆ, ನೀನು ಅದನ್ನೇ ಬಯೋತ್ಪಾದನೆ ಅಂತೀಯಲ್ಲ.'

'ಊ ಕನ್ಲಾ, ಅದುಕ್ಕು ಒಂದು ನೀತಿ ನೇಮ ಅಂತಿರಾಕಿಲ್ವಾ, ನಿಮ್ಮ ಸರಕಾರ ಬಂದಾಗಿಂದ ಒಂದಲ್ಲ ಒಂದು ದಾಳಿ, ಬಯೋತ್ಪಾದನೆ. ಸುರುವಾಗುತ್ತಿದ್ದಂಗೇ ರೈತರ ಮೇಲೆ ದಾಳಿ, ಆಮೇಲೆ ಇರೋದ ಪಕ್ಷದೋರ ಮೇಲೆ ಆಪ್ಲೇಸನ್ ದಾಳಿ, ಆಮೇಲೆ ಚರುಚುಗಳ ಮೇಲೆ ದಾಳಿ, ಈಗ ರಸ್ತೆ ಬದಿ ಬಿಲ್ಡಿಂಗುಗಳ ಮೇಲೆ ದಾಳಿ, ಒಟ್ನಲ್ಲಿ ಒಂದಲ್ಲಾ ಒಂದು ಬಯ ಉಟ್ಟುಸ್ತನೇ ಇರೋ ಸರಕಾರ ಬಯೋತ್ಪಾದಕ ಸರಕಾರ ಅನ್ನದೇ ಇನ್ನೇನ್ನಬೇಕು?'

'ನಿಂಗೆಲ್ಲೋ ಎಣ್ಣೆ ಜಾಸ್ತಿ ಆಗದೆ ಬುಡು, ಅನಂತ್ಮೂರ್ತಿ ತರ ಏನೇನೋ ಏಳ್ತೀಯ'.

'ಅನಂತ್ಮೂರ್ತಿ ಏನಂದ್ರೂ?'.

'ನಮ್ಮ ಪಕ್ಸ ಆ ಉಚ್ಚು ನಾಯಿ ಕಾಯ್ಲೆ ಇದ್ದಂಗೆ ಅಂದಿದ್ರು.'

'ಏ ಅವ್ರು ಅಂಗಂದಿದ್ದು ತಪ್ಪು ಬುಡು'.

'ನೋಡು, ಎಣ್ಣೆ ತಮ್ಮಣ್ಣ, ನೀನೇ ಅದನ್ನ ತಪ್ಪು ಅಂತಿಯ, ಆದ್ರೆ ಅವ್ರು ಅಂಗಂದಿದ್ರು.'

'ಏ ತಪ್ಪು ಬುಡು, ಆ ಉಚ್ಚು ನಾಯಿ ಕಾಯಿಲೆ ಕಚ್ಚಿದೋರಿಗೆ ಮಾತ್ರ ಹತ್ಕೋತದೆ, ಇದೂ, ನಿಮ್ಮ ಸಂಗ ಪರಿವಾರ ಈ ಪ್ಲೇಗು ಇರುತ್ತಲ್ಲ, ಪ್ಲೇಗು ಆ ತರ, ಬಲೇ ಪಾಸ್ಟಾಗಿ ಎಲ್ರಿಗೂ ಕಾಯ್ಲೆ ಅರಡುತ್ತೆ.'

'ಊ ಏಳು ಇನ್ನೂ ಏನೇನು ಏಳ್ತಿಯೋ.., ಏಳು.'

'ಪ್ಲೇಗು ರೋಗಾಣು ಅರಡಕ್ಕೆ ಇಲಿ ಎಗ್ಗಣ ಬೇಕಂತೆ, ಅಂಗೆ ಸಂಗ ಪರಿವಾರದ ಕೋಮುವಾದ ಅನ್ನೋ ಪ್ಲೇಗು ಅರಡಕ್ಕೆ ಸಾಯಿತಿ, ಸಂಸೋದಕ, ಕೆಲವು ರದ್ದಿ ಪೇಪರುಗಳೂ, ಇನ್ನೂ ಕೆಲವು ಪಾಳೇಗಾರೀ ಸಾಮೀಜಿಗಳೂ, ಇಲಿ ಎಗ್ಣಗಳಂಗೆ ಚನ್ನಾಗಿ ಅರಡಿ ಗೃಹ ಬಂಗ ಮಾಡ್ತಾವ್ರೆ.'.

'ಲೇ ತಮ್ಮಣ್ಣ, ನಿಂಗೆ ನಿಜವಾಗ್ಲೂ, ಎಣ್ಣೆ ಜಾಸ್ತಿ ಆಗಿರಂಗಿದೆ, ಒಂದ್ಕೊಂದು ಸಂಮಂದ ಇಲ್ದಂಗೆ ಮಾತಾಡ್ತಿದೀಯ ಗೃಹ ಬಂಗ ಅಂದ್ರೇನ್ಲಾ? .'

'ನಿಂಗೆ ಅರ್ತ ಆಗಾಕಿಲ್ಲ ಬುಡು, ಮನೆ ಆಳು ಮಾಡಾದು ಅಂತ, ಆ ನಿಮ್ಮ ಸಾಯಿತಿ, ಸಂಸೋದಕರನ್ನ ಕೇಳು ಒಳ್ಳೆ ಕತೆ ಕಟ್ಟಿ ಏಳ್ತರೆ....' ○

ಶ್ರೀ

ರ್ನಾಟಕದಲ್ಲಿ ಮೊಟ್ಟ ಮೊದಲ ಬಾರಿಗೆ ಕಾರಕ್ಕೆ ಬಂದ ಬಿಜೆಪಿ ಬೇರೆ ಪಕ್ಷಗಳ ಾಯಿತ ಸದಸ್ಯರಿಗೆ ಹಣ ಮತ್ತು ಅಧಿಕಾರದ ಆಮಿಷವೊಡ್ಡಿ ಅವರ ಚುನಾಯಿತ ಸ್ಥಾನಗಳಿಗೆ ಜೀನಾಮೆ ಕೊಡಿಸಿ, ಆಳುವ ಪಕ್ಷಕ್ಕೆ ಪಕ್ಷಾಂತರ ಡಿಸುವ ಒಂದು ಅನಿಷ್ಠ ರಾಜಕೀಯ ಂಪರೆಯನ್ನು ಹುಟ್ಟು ಹಾಕಿದೆ. 'ಆಪರೇಷನ್ ಮಲ' ಎಂಬ ಹೆಸರಿನಲ್ಲಿ ನಡೆಸಲಾದ ಈ ರ್ನಾಚರಣೆಯಿಂದ ನಮ್ಮ ಪ್ರಜಾಪ್ರಭುತ್ವವೇ ಹಾಸ್ಯಕ್ಕೀಡಾಗಿದೆ. ಇದು ಕೇವಲ ವಿಧಾನಸಭಾ ನಗಳ ಮಟ್ಟದಲ್ಲಿ ಉಳಿದಿಲ್ಲ. ಜಿಲ್ಲಾ ಚಾಯಿತ್, ತಾಲೂಕು ಪಂಚಾಯತ್, ಗ್ರಾಮ ಚಾಯತ್ ಮಟ್ಟಕ್ಕೂ ಪಕ್ಷಾಂತರದ ಹೊಸ ಬಗನ್ನು ಹರಡಲಾಗಿದೆ. ಜೆಡಿ(ಎಸ್)ನ 4 ಜನ ತ್ತು ಕಾಂಗ್ರೆಸಿನ 3 ಜನ ಶಾಸಕರನ್ನು ಅವರ ನಾಯಿತ ಸ್ಥಾನಗಳಿಗೆ ರಾಜೀನಾಮೆ ಕೊಡಿಸಿ ಪಿಗೆ ಸೇರಿಸಿಕೊಂಡ ನಂತರವೂ ಬಿಜೆಪಿಗೆ ತ್ರಿಯಾಗಿಲ್ಲ. ಈಗ ಕಾಂಗ್ರೆಸ್ಸಿನಲ್ಲಿರುವ ರಾಮಯ್ಯನವರನ್ನು ಬಿಜೆಪಿಗೆ ಸೆಳೆಯುವ ುತ್ತ ನಡೆಯುತ್ತಿದೆ. ಇದು ಅತ್ಯಂತ ಕೀಳು ಸ್ತರದ ರಾಜಕೀಯವಾಗಿದೆ.

ಫಿಯಾಗಳ ಹಿಡಿತದಲ್ಲಿ ಸರ್ಕಾರ

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ವಂತೆ ಮಾಡುವಲ್ಲಿ ರಾಜ್ಯದ ಗಣಿ ಮಾಫಿಯ, ಮಾಫಿಯ, ಸರಾಯಿ ಲಾಬಿ, ಶಿಕ್ಷಣ ಲಾಬಿಗಳು ಖ್ಯ ಪಾತ್ರವನ್ನು ವಹಿಸಿ, ಚುನಾವಣೆಯ ನಂತರ ಂತ್ರಿಗಳ ಖಾತೆ ಹಂಚಿಕೆ, ಅಧಿಕಾರಗಳ ರ್ಗಾವಣೆ ಮತ್ತು ಸರ್ಕಾರದ ಒಟ್ಟು ರ್ಯನಿರ್ವಹಣೆಯನ್ನು ನಿಯಂತ್ರಿಸುತ್ತಾ ಬಂದಿವೆ. ಮಾಫಿಯಾಗಳ ಕಪಿಮುಷ್ಟಿಯಲ್ಲಿ ಸಿಕ್ಕಿ ಕೊಂಡಿರುವ ಸರ್ಕಾರವು ಅದನ್ನು ಮಾಚಲು ಜನತೆಗೆ ಸುಳ್ಳು ಭರವಸೆಗಳನ್ನು ತ್ತಾ, ಕೆಲವು ಜನಾಕರ್ಷಕ ಕಾರ್ಯಕ್ರಮಗಳನ್ನು ಷಿಸುತ್ತಾ ರಾಜ್ಯದ ನೈಜ ಅಭಿವೃದ್ಧಿಯತ್ತ ನಕೊಡಲಾಗದ ಸ್ಥಿತಿಯಲ್ಲಿದೆ.

ನ ರಾಜಕೀಯ

ತಾವು ಯಾವುದೇ ಸೇಡಿನ ಮನೋಭಾವದಿಂದ ನ ಮಾಡುವುದಿಲ್ಲ ಎಂದು ಆರಂಭದಲ್ಲಿ ುತ್ತಿದ್ದ ಮುಖ್ಯ ಮಂತ್ರಿ ಯಡಿಯೂರಪ್ಪ ಈಗ ರೋಧ ಪಕ್ಷಗಳ ನಿರ್ದಿಷ್ಟ ವ್ಯಕ್ತಿಗಳ ವಿರುದ್ಧ ಸೇಡಿನ ಂಗಳನ್ನು ಕೈಗೊಳ್ಳುತ್ತಿದ್ದಾರೆ. ಪೊಲೀಸ್ ಾಖೆಯನ್ನು ದುರ್ಬಳಕೆ ಮಾಡಲಾಗುತ್ತಿದೆ. ್ಳಾರಿ ಜಿಲ್ಲೆಯಲ್ಲಿ ಎಂ.ಪಿ.ಪ್ರಕಾಶ್ ಅವರು ಂತ್ರಿಯಾಗಿದ್ದ ಅವಧಿಗೆ ಸೀಮಿತವಾಗಿ ಭ್ರಷ್ಟಾಚಾರದ ತನಿಖೆಗೆ ಕ್ರಮಕೈಗೊಳ್ಳಲಾಗಿದೆ. ವಿನಹಡಗಲಿಯಲ್ಲಿದ್ದ ಸರ್ಕಾರಿ ಜನಿಯರಿಂಗ್ ಕಾಲೇಜನ್ನು ಬಳ್ಳಾರಿಗೆ ರ್ಗಾಯಿಸಲು ನಿರ್ಧರಿಸಲಾಗಿದೆ. ಬಳ್ಳಾರಿಯ ಜಿ ಮಂತ್ರಿ ದಿವಾಕರಬಾಬು ಅವರನ್ನು ಧಿಸುವ ಕ್ರಮಕೈಗೊಳ್ಳಲಾಗಿದೆ. ಒರಿಸ್ಸಾ ್ಯದಲ್ಲಿ ಕ್ರೈಸ್ತರ ಮೇಲೆ ನಡೆದ ದೌರ್ಜನ್ಯಗಳನ್ನು ಭಟಿಸಿ ರಾಜ್ಯದಲ್ಲಿ ಬಂದ್ ಆಚರಿಸಿದ ಕ್ರೈಸ್ತ ಸಂಸ್ಥೆಗಳ ಮೇಲೆ ಕ್ರಮಕೈಗೊಳ್ಳುವ ಸರ್ಕಾರದ ರಿಕೆಯೂ ಸರ್ಕಾರದ ಸೇಡಿನ ನೋಭಾವವನ್ನೇ ಎತ್ತಿ ತೋರಿಸುತ್ತದೆ.

ವಣೆಯ ಹಗರಣ

ಸಾವಿರಕ್ಕೂ ಹೆಚ್ಚು ಪೊಲೀಸ್ ಅಧಿಕಾರಿಗಳನ್ನು ರಾತ್ರೋರಾತ್ರಿ ಎಂಬಂತೆ ವರ್ಗಾಯಿಸಲಾಗಿದೆ. ಖ್ಯಮಂತ್ರಿ ಅನುಮತಿ ಇಲ್ಲದೆ ಯಾವುದೇ

ಕರ್ನಾಟಕದ ಜನರನ್ನು ಕಾಡುತ್ತಿರುವ ಜ್ವಲಂತ ಸಮಸ್ಯೆಗಳ ಕುರಿತು ಜಾಗೃತಿ ಮೂಡಿಸುವ, ಆಂದೋಲನ ತೀವ್ರಗೊಳಿಸುವ ತುರ್ತು ನಮ್ಮ ಮುಂದಿದೆ.

ಅಪಹಾಸ್ಯಕ್ಕೀಡಾದ ಪ್ರಜಾಪ್ರಭುತ್ವ ಮತ್ತು ಜನರ ಮುಂದಿನ ಸವಾಲುಗಳು

ಇಲಾಖೆಯ ಒಬ್ಬ ಸಾಮಾನ್ಯ ನೌಕರನ ವರ್ಗಾವಣೆ ಸಹ ನಡೆಯದಂತೆ ನಿರ್ಬಂಧಿಸಲಾಗಿದೆ. ಈ ವರ್ಗಾವಣೆಗಳಲ್ಲಿ ಕೋಟಿಗಟ್ಟಲೆ ರೂಪಾಯಿಗಳ ವಿನಿಮಯ ನಡೆಯುತ್ತಿದೆ. ಇಷ್ಟು ಭ್ರಷ್ಟ ಸರ್ಕಾರ ತಾವು ಈ ಹಿಂದೆ ಕಂಡಿರಲಿಲ್ಲ ಎಂದು ಅಧಿಕಾರಿಗಳು ಖಾಸಗಿಯಾಗಿ ಮಾತನಾಡಿಕೊಳ್ಳುತ್ತಿದ್ದಾರೆ.

ಕೃಷಿ ಭೂಮಿ ಕಿತ್ತುಕೊಳ್ಳಲು ಕ್ರಮ

ರಾಜ್ಯದಲ್ಲಿ ಭೂಸ್ವಾಧೀನ ಕ್ರಮಗಳನ್ನು ಸಡಿಲಗೊಳಿಸಿ ರೈತರ ಕೃಷಿ ಭೂಮಿಯನ್ನು ಕಿತ್ತುಕೊಳ್ಳುವ ಹುನ್ನಾರ ನಡೆದಿದೆ. ರೈತರಿಂದ ಸ್ವಾಧೀನ ಪಡಿಸಿಕೊಂಡ ಭೂಮಿಯನ್ನು ಇಟ್ಟುಕೊಳ್ಳಲು 'ಲ್ಯಾಂಡ್ ಬ್ಯಾಂಕ್' ಮಾಡುವ ತೀರ್ಮಾನ ಮಾಡಲಾಗಿದೆ. ಹೀಗೆ ಜಮಾ ಮಾಡಲಾಗುವ ಭೂಮಿಯನ್ನು ತಮಗೆ ಬೇಕಾದ ಕೈಗಾರಿಕೋದ್ಯಮಿಗಳಿಗೆ ನೀಡಲು ಸರ್ಕಾರ ದಾರಿ ಸುಗಮ ಮಾಡಿಕೊಳ್ಳಲು ಹೊರಟಿದೆ. ಜನತೆಯ ತೀವ್ರ ವಿರೋಧದ ನಡುವೆಯೂ ಈಗಾಗಲೇ ಬೆಂಗಳೂರು ಸುತ್ತಾಮುತ್ತ ಭೂಗಳ್ಳರು ಕಬಳಿಸಿದ್ದ ಸಾವಿರಾರು ಎಕರೆ ಸರ್ಕಾರಿ ಭೂಮಿಯನ್ನು ಹರಾಜು ಮಾಡುವ ಕ್ರಮವನ್ನು ಸರ್ಕಾರ ಮುಂದುವರೆಸುತ್ತಿದೆ.

ರೈತರ ಹೆಸರಿನಲ್ಲಿ ಪ್ರಮಾಣ ಮಾಡಿ ಅಧಿಕಾರ ವಹಿಸಿಕೊಂಡ ಯಡಿಯೂರಪ್ಪ ಸರಕಾರವು ರಾಜ್ಯದ ರೈತರನ್ನು ಕೃಷಿ ಚಟುವಟಿಕೆಗಳಿಂದ ಒಕ್ಕಲೆಬ್ಬಿಸಲು ಅನುಕೂಲವಾಗುವಂತೆ ಕರ್ನಾಟಕ ಭೂಕಂದಾಯ ಕಾನೂನಿಗೆ ತಿದ್ದುಪಡಿ ತರಲು ಮುಂದಾಗುತ್ತಿದೆ. ಕೃಷಿಕರಲ್ಲದವರು ಕೃಷಿ ಭೂಮಿ ಖರೀದಿಸಲು ಇದುವರೆಗೆ ಜಾರಿಯಲ್ಲಿರುವ ನಿರ್ಬಂಧವನ್ನು ಕಿತ್ತು ಹಾಕಿ ರೈತರು ಹಾಗೂ ಜನ ಸಾಮಾನ್ಯರು ಭೂಮಾಫಿಯ ಹಾಗೂ ದೊಡ್ಡ ಬಂಡವಾಳಗಾರರ ಕಪಿಮುಷ್ಟಿಗೆ ಸಿಲುಕುವಂತಹ ಆತಂಕಕಾರಿ ಪರಿಸ್ಥಿತಿ ನಿರ್ಮಾಣ ಮಾಡಲಾಗುತ್ತಿದೆ. ಇಂತಹ ಕ್ರಮವನ್ನು ವಿರೋಧಿಸಬೇಕಾಗಿದೆ.

ಕ್ರೈಸ್ತರ ಮೇಲಿನ ದಾಳಿಯ ಸಮರ್ಥನೆ

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಹಿಂದುತ್ವ ಶಕ್ತಿಗಳಿಗೆ ಬಾರೀ ಕುಮ್ಮಕ್ಕು ಸಿಕ್ಕಂತಾಗಿದೆ. ಇದರ ಪರಿಣಾಮವಾಗಿ ಬಾಬಾಬುಡನ್ ಗಿರಿಯಲ್ಲಿ ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿದ್ದ ಹಿಂದು-ಮುಸ್ಲಿಂ ಸಾಮರಸ್ಯದ ದ್ಯೋತಕವಾಗಿದ್ದ ಸೂಫಿ ಪರಂಪರೆಯನ್ನು ನಾಶಮಾಡುವ ಪ್ರಯತ್ನ ತೀವ್ರಗೊಂಡಿದೆ. ಕರಾವಳಿ ಜಿಲ್ಲೆಗಳಲ್ಲಿ ದನದ ಮಾಂಸದ ವ್ಯಾಪಾರದಲ್ಲಿ ತೊಡಗಿರುವ ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ಸಂಘಪರಿವಾರದವರ ದಾಳಿಗಳು ಹೆಚ್ಚಾಗಿವೆ. ಬಲವಂತದ ಮತಾಂತರ ನಡೆಯುತ್ತಿದೆ ಎಂದು ಗುಲ್ಲೆಬ್ಬಿಸಿ ಇತ್ತೀಚೆಗೆ ರಾಜ್ಯದ ಹಲವು ಕಡೆ, ವಿಶೇಷವಾಗಿ ಮಂಗಳೂರಿನಲ್ಲಿ ಕ್ರೈಸ್ತ ಚರ್ಚುಗಳ ಮೇಲೆ ವ್ಯವಸ್ಥಿತವಾಗಿ ದಾಳಿಮಾಡಲಾಗಿದೆ. ಮಂಗಳೂರಿನ ಪೊಲೀಸರು ಅವರ ಅಧಿಕಾರಿಗಳ ಆದೇಶಕ್ಕೆ ಅನುಗುಣವಾಗಿ ಗಲಭೆಕೋರ ಬಜರಂಗದಳದ ಪುಂಡರ ವಿರುದ್ಧ ಕ್ರಮಕೈಗೊಳ್ಳುವ ಬದಲು ತಮ್ಮ ಚರ್ಚ್‌ಗಳ ರಕ್ಷಣೆಗೆ ಧಾವಿಸಿದ ಅಮಾಯಕ ಕ್ರೈಸ್ತರ ಮೇಲೆ ಹಲ್ಲೆ ಮಾಡಿ, ಅವರನ್ನೆ ಬಂಧಿಸಿದ್ದಾರೆ. ಚರ್ಚ್‌ಗಳಿಗೆ ನುಗ್ಗಿದ ಪೊಲೀಸರು ಅಲ್ಲಿನ ಪಿಠೋಪಕರಣಗಳನ್ನು ಹಾಗೂ ಪ್ರತಿಮೆಗಳನ್ನು ಭಗ್ನಮಾಡುವ ಮೂಲಕ ಬಜರಂಗದಳದ ಪುಂಡರಂತೆ ವರ್ತಿಸಿದ್ದಾರೆ. ಪೊಲೀಸರ ಈ ದುಷ್ಕೃತ್ಯದ ಹಿಂದೆ ಗೃಹಮಂತ್ರಿ ವಿ.ಎಸ್.ಆಚಾರ್ಯ ಅವರ ಕುಮ್ಮಕ್ಕು ಎದ್ದು ಕಾಣುತ್ತಿತ್ತು. ಮುಖ್ಯಮಂತ್ರಿ ಯಡಿಯೂರಪ್ಪ ಈ ಅವಧಿಯಲ್ಲಿ ಎರಡು ಬಾರಿ ಮಂಗಳೂರಿಗೆ ಭೇಟಿ ಕೊಟ್ಟರೂ ಗಲಭೆಗಳಿಂದ ಹಾನಿಗೀಡಾದ ಚರ್ಚ್‌ಗಳಿಗೆ ಅವರು ಭೇಟಿ ಕೊಡಲಿಲ್ಲ ಮಾತ್ರವಲ್ಲ ನೊಂದ ಕ್ರೈಸ್ತ ಸಮುದಾಯದವರನ್ನು ಕಂಡು ಮಾತನಾಡಲಿಲ್ಲ. ಬದಲಿಗೆ ಬಲವಂತದ ಮತಾಂತರವೇ ಗಲಭೆಗೆ ಕಾರಣ ಎಂದು ಹೇಳಿಕೆ ನೀಡುವ ಮೂಲಕ ಗಲಭೆಕೋರರಿಗೆ ಕುಮ್ಮಕ್ಕು ಕೊಟ್ಟಿದ್ದಾರೆ.

ಸೌಹಾರ್ದ ಕರ್ನಾಟಕ ರಾಜ್ಯೋತ್ಸವ

ರಾಜ್ಯದಲ್ಲಿ ಮತಾಂಧತೆ ಹಾಗೂ ಭಾಷಾಂಧತೆಯನ್ನು ಕೆರಳಿಸಿ ಮುಗ್ಧ ಜನರನ್ನು ದಾರಿ ತಪ್ಪಿಸುವ ಕೆಲಸವನ್ನು ವ್ಯವಸ್ಥಿತವಾಗಿ ಮಾಡಲಾಗುತ್ತಿದೆ. ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ. ದುಡಿಯುವ ಜನರ ಐಕ್ಯತೆಯನ್ನು ನಾಶಮಾಡುವ ಉದ್ದೇಶದ ಈ ಪ್ರವೃತ್ತಿಯ ವಿರುದ್ಧ ಜನ ಜಾಗೃತಿಯನ್ನು ಉಂಟು ಮಾಡಲು ಪಕ್ಷ ಇನ್ನೂ ಹೆಚ್ಚು ಶ್ರಮಿಸಬೇಕು.

ಇತ್ತೀಚೆಗೆ ಮಂಗಳೂರು, ಬೆಂಗಳೂರು, ದಾವಣಗೆರೆ, ತಿಪಟೂರು ಮೊದಲಾದ ಕಡೆ ಕೋಮು ಸಾಮರಸ್ಯವನ್ನು ಕಾಪಾಡಲು ಪರಿಣಾಮಕಾರಿಯಾಗಿ ಮಧ್ಯಪ್ರವೇಶ ಮಾಡಿದ ಸಿಪಿಐ(ಎಂ) ಪಕ್ಷದ ಸ್ಥಳೀಯ ಹಾಗೂ ಜಿಲ್ಲಾ ಘಟಕಗಳನ್ನು ಪಕ್ಷದ ರಾಜ್ಯ ಸಮಿತಿ ಶ್ಲಾಘಿಸಿದೆ. ಪಕ್ಷದ ಈ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಬೇಕು ಎಂದು ಕರೆ ನೀಡಿರುವ ಪಕ್ಷದ ರಾಜ್ಯ ಸಮಿತಿಯು ಮುಂಬರುವ ನವೆಂಬರ್ ತಿಂಗಳಾದ್ಯಂತ ರಾಜ್ಯದೆಲ್ಲೆಡೆ ಸಮಾವೇಶ, ವಿಚಾರ ಸಂಕಿರಣ, ಬಹುಭಾಷಾ ಕವಿಗೋಷ್ಠಿ, ಸಂವಾದ, ಸಹಭೋಜನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ 'ಸೌಹಾರ್ದ ಕರ್ನಾಟಕ ರಾಜ್ಯೋತ್ಸವ' ಆಚರಿಸಬೇಕೆಂದು ನಿರ್ಧರಿಸಿದೆ. ಈ ಅವಧಿಯಲ್ಲಿ ರಾಷ್ಟ್ರ ಕವಿ ಕುವೆಂಪು ಅವರ ನಾಡಗೀತೆಯ 'ಸರ್ವ ಜನಾಂಗದ ಶಾಂತಿಯ ತೋಟ' ಎಂಬ ಸಂದೇಶವನ್ನು ಜನ ಮನಗಳಿಗೆ ತಲುಪಿಸುವ ಪ್ರಯತ್ನ ಮಾಡಲಾಗುವುದು.

ಸೌಹಾರ್ದ ಕರ್ನಾಟಕದ ಸಂದೇಶವನ್ನು ರಾಜ್ಯದ ಮೂಲೆ ಮೂಲೆಗಳಿಗೆ ಪಸರಿಸುವ ಉದ್ದೇಶದಿಂದ ಡಿಸೆಂಬರ್ ತಿಂಗಳಲ್ಲಿ 3 ಜಾಥಾಗಳನ್ನು ನಡೆಸಲು ಸಿಪಿಐ(ಎಂ) ರಾಜ್ಯ ಸಮಿತಿ ನಿರ್ಧರಿಸಿದೆ. ಬಸವಕಲ್ಯಾಣ. ಕಾರವಾರ ಮತ್ತು ಬಾಬಾಬುಡನ್‌ಗಿರಿಯಿಂದ ಹೊರಡಿಸಲಾಗುವ ಈ ಜಾಥಾಗಳು ವಿವಿಧ ಜಿಲ್ಲೆಗಳಲ್ಲಿ ಸಂಚರಿಸಿ ಡಿಸೆಂಬರ್ 22 ರಂದು ಬೆಂಗಳೂರಿನಲ್ಲಿ ಸಮಾವೇಶಗೊಳ್ಳಲಿವೆ. ಅಂದು ಬೆಂಗಳೂರಿನಲ್ಲಿ ಜನರ ಬೃಹತ್ ರ್ಯಾಲಿಯನ್ನು ಸಂಘಟಿಸಲು ನಿರ್ಧರಿಸಲಾಗಿದೆ.



ಇತ್ತೀಚೆಗೆ ಚಿಕ್ಕಬಳ್ಳಾಪುರ ಲೋಕಸಭಾ ವ್ಯಾಪ್ತಿಯುದ್ದಕ್ಕೂ ಸಂಚರಿಸಿ ಜನಜಾಗೃತಿಗಾಗಿ ಶ್ರಮಿಸಿದ ಜಾಥಾ ದೊಡ್ಡಬಳ್ಳಾಪುರಕ್ಕೆ ಬಂದಾಗ ನಡೆದ ಬಹಿರಂಗ ಸಭೆಯ ಚಿತ್ರ ಮತ್ತು ಜಾಥಾ ವಾಹನ.

‘ಮತ ಪ್ರಚಾರ - ಮತಾಂತರ ಸಂವಿಧಾನಬದ್ಧ ಹಕ್ಕು’ - ಬೃಂದಾ ಕಾರಟ್

ಅದು ಪೊಲೀಸರ ದಂಡು. ಜಾಗ ಮಂಗಳೂರಿನ ಚರ್ಚು. ಕೈಯಲ್ಲಿ ಲಾಠಿ, ಆ ದಂಡು ಅದು ಒಂದು ಸಮುದಾಯದ ಪ್ರಾರ್ಥನಾ ಮಂದಿರ, ಶ್ರದ್ಧಾ ಕೇಂದ್ರ ಎಂಬುದನ್ನೂ ಪರಿಗಣಿಸದೆ ಒಳಗೆ ನುಗ್ಗುತ್ತದೆ. ಲಾಠಿ ಇರುವುದೇ ಎದುರಿಗೆ ಸಿಕ್ಕವರನ್ನು ಬಡಿಯುವುದಕ್ಕೆ ಅಲ್ಲವೇ? ಸರಿ ಶುರು ಲಾಠಿ ಪ್ರಹಾರ, ಪುರುಷರು, ಮಹಿಳೆಯರು, ನನ್‌ಗಳು ಉಹೂಂ ಯಾವ ವ್ಯತ್ಯಾಸವೂ ಇಲ್ಲ. ಸಿಕ್ಕ ಸಿಕ್ಕವರಿಗೆಲ್ಲಾ ಬಡಿತ. ನಿರ್ದಯ ಲಾಠಿ ಕುಣಿತ. ಓಡಿದರೂ ಬಿಡದೆ ಅಟ್ಟಾಡಿಸಿಕೊಂಡು ಬಡಿಯುತ್ತಾರೆ.... ಬೆಂಗಳೂರಿನ ಎನ್‌ಜಿಓ ಸಭಾಂಗಣದಲ್ಲಿ ಅಂದು ನೆರೆದಿದ್ದ ಆ ಜನ ಈ ದೃಶ್ಯಗಳನ್ನು ನೋಡಿದರು. ಬೆಚ್ಚಿ ಬಿದ್ದರು. ಹಾಗಿದ್ದರೆ ಚರ್ಚಿನ ಒಳಗಿದ್ದವರೇನು ಭಯೋತ್ಪಾದಕರೇ? ಚರ್ಚ್‌ಗಳ ಮೇಲೆ ದಾಳಿ ಮಾಡಲು ಚರ್ಚ್‌ಗೆ ನುಗ್ಗಿದ್ದ ಪುಂಡರೇ? ಅಲ್ಲ ಇದೇ ಪೊಲೀಸರು, ಸರ್ಕಾರ ಚರ್ಚ್‌ಗಳ ಮೇಲಿನ ದಾಳಿಯನ್ನು ತಡೆಯುವಲ್ಲಿ ಹಾಗೂ ಚರ್ಚುಗಳಿಗೆ ರಕ್ಷಣೆ ಕೊಡುವ ವಿಚಾರದಲ್ಲಿ ವಿಫಲವಾಗಿದ್ದರಲ್ಲ. ಆ ವೈಫಲ್ಯವನ್ನು ಪ್ರತಿಭಟಿಸಲು ಸೇರಿದ್ದ ಕ್ರಿಶ್ಚಿಯನ್ ಯುವಕರು ಅಲ್ಲಿದ್ದ ಹಲವರು.

ಸಭಾಂಗಣದಲ್ಲಿ ತೆರೆಯ ಮೇಲೆ ಕಂಡ ನೈಜ ಘಟನೆಗಳ ವಿಡಿಯೋ ದೃಶ್ಯಾವಳಿಗಳಿಗೆ ಸಾಕ್ಷಿಯಾದ ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯೆ ಬೃಂದಾ ಕಾರಟ್ ಏನು ಹೇಳಿದರು. ದಕ್ಷಿಣ ಕನ್ನಡ ಜಿಲ್ಲಾ ಸೂಪರಿಟೆಂಡೆಂಟ್ ಆಫ್ ಪೊಲೀಸ್(ಎಸ್‌ಪಿ) ಸತೀಶ್‌ಕುಮಾರ್‌ರನ್ನು ತತ್‌ಕ್ಷಣ ಬಂಧಿಸಬೇಕು ಮತ್ತು ಲಾಠಿಪ್ರಹಾರ ನಡೆಸಿದ ಪೊಲೀಸರ ವಿರುದ್ಧ ತತ್‌ಕ್ಷಣ ಮೊಕದ್ದಮೆ ಹೂಡಿ ಎಫ್‌ಐಆರ್ ದಾಖಲಿಸಬೇಕು.

ಭಯೋತ್ಪಾದನೆ ಮತ್ತು ಮತಾಂತರ ಎರಡನ್ನೂ ಒಂದಕ್ಕೊಂದು ಸಮ ಎನ್ನುವಂತೆ ಮಾತನಾಡಿರುವ ರಾಜ್ಯದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಹೇಳಿಕೆಯನ್ನು ಖಂಡಿಸಿದ ಅವರು ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಗೆ ಕಟ್ಟಬದ್ಧರಾಗುವಂತೆ ಸಿಪಿಐ(ಎಂ) ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದರು. ಅಕ್ಟೋಬರ್ 6, 2008ರಂದು ಬೆಂಗಳೂರಿನ ಎನ್.ಜಿ.ಓ. ಸಭಾಂಗಣದಲ್ಲಿ ಕೋಮುವಾದ ವಿರೋಧಿ ಅಲ್ಪಸಂಖ್ಯಾತರ ಸಮಾವೇಶದಲ್ಲಿ ಬೃಂದಾಕಾರಟ್ ಈ ರೀತಿ ಕರೆ ನೀಡಿದರು.

ಧಾರ್ಮಿಕ ಸ್ವಾತಂತ್ರ್ಯ-ಸಂವಿಧಾನ ಬದ್ಧ ಹಕ್ಕು

ಭಾರತದ ಪ್ರಜೆಗಳಾದವರಿಗೆ ಯಾವುದೇ ಧರ್ಮವನ್ನು ನಂಬುವ, ಯಾವುದೇ ಧರ್ಮವನ್ನು ಆಚರಿಸುವ ಮತ್ತು ಆ ಧರ್ಮ ಕುರಿತು ಪ್ರಚಾರ ಮಾಡುವ ಹಕ್ಕಿದೆ ಮತ್ತು ಮತಾಂತರದ ಹಕ್ಕು ಕೂಡ ಇದೆ. ಈ ಹಕ್ಕುಗಳು ಸಂವಿಧಾನ ಬದ್ಧವಾದದ್ದು. ಸಂವಿಧಾನ 25ನೇ ವಿಧಿಯು ಈ ಹಕ್ಕನ್ನು ನೀಡುತ್ತದೆ. ಸಂವಿಧಾನ ರಚನಾ ಸಭೆಯಲ್ಲಿ ಕೂಡ ಈ ಕುರಿತು ಗಂಭೀರ ಚರ್ಚೆ ನಡೆದಿತ್ತು. ಭಾರತವು ಒಂದು ಜಾತ್ಯಾತೀತ, ಧರ್ಮ ನಿರಪೇಕ್ಷ ರಾಷ್ಟ್ರವಾಗಿದೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಹಿಂದೂ


ಮತಾಂತರ ಎಂಬ ಶಬ್ದ ಕೇಳಿದರೇ ಸಾಕು ಉರಿದು ಬೀಳುವ ಸಂಘ ಪರಿವಾರಗಳು ಅರ್ಥ ಮಾಡಿಕೊಳ್ಳಬೇಕಾದ್ದದ್ದೇನೆಂದರೆ ಮತದ ಆಚರಣೆ, ನಂಬಿಕೆ, ಪ್ರಚಾರ, ಮತಾಂತರ ಇವೆಲ್ಲಾ ಧಾರ್ಮಿಕ ಸ್ವಾತಂತ್ರ್ಯದ ಅವಿಭಾಜ್ಯ ಅಂಶಗಳು ಮತ್ತು ಸಂವಿಧಾನಬದ್ಧವಾದ ಹಕ್ಕುಗಳು.

ಧರ್ಮವನ್ನು ನಿರಾಕರಿಸಿ ಬೌದ್ಧ ಧರ್ಮಕ್ಕೆ ಮತಾಂತರ ಹೊಂದಿದರು. ಹಿಂದೂ ಧರ್ಮದೊಳಗಿನ ಜಾತಿ ವ್ಯವಸ್ಥೆ ಅಸಮಾನತೆ ಅಮಾನವೀಯ ಮತ್ತು ಮನುಷ್ಯತ್ವದ ಘನತೆಗೆ ಅಪಮಾನಕರ ಎಂದೂ ಬೃಂದಾಕಾರಟ್ ಹೇಳಿದರು.

ಒರಿಸ್ಸಾ ‘ಮಾದರಿ’ ಸಂವಿಧಾನ ವಿರೋಧಿ

1977ರಲ್ಲಿ ಒರಿಸ್ಸಾ ರಾಜ್ಯದಲ್ಲಿ ‘ಒರಿಸ್ಸಾ ಮತಾಂತರ ನಿಷೇಧ ಕಾಯ್ದೆ’ಯನ್ನು ಅಂಗೀಕರಿಸಲಾಯ್ತು. ಆ ನಂತರ ಇದನ್ನು ಇತರ ರಾಜ್ಯಗಳಿಗೆ ಮಾದರಿಯನ್ನಾಗಿ ಪರಿಗಣಿಸಲಾಗುತ್ತಿದೆ. ಎಂ.ಎನ್.ರಾಯ್ ಆಗ ಮುಖ್ಯನ್ಯಾಯಾಧೀಶರಾಗಿದ್ದರು. ತುರ್ತು ಪರಿಸ್ಥಿತಿಯಲ್ಲಿ ಸಮಾವೇಶದಲ್ಲಿ ಇಂತಹದೊಂದು ಕಾಯ್ದೆ ಅಂಗೀಕರಿಸಲಾಯ್ತು. ಈ ಕಾಯ್ದೆ ಸಂವಿಧಾನ 25 ವಿಧಿಗೆ ವಿರುದ್ಧವಾಗಿದೆ.

ಕಂದಮಾಲ್‌ನ ದಲಿತರು, ಬುಡಕಟ್ಟು ಜನರು ಮತಾಂತರ ಹೊಂದಿದ್ದಾರೆ ಎಂದರೆ ಅವರು ತಮ್ಮ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಚಲಾಯಿಸಿದ್ದಾರೆ ಎಂದು ಅರ್ಥ. ಒರಿಸ್ಸಾದ ಮತಾಂತರ ನಿಷೇಧ ಕಾಯ್ದೆಯು ಸಂವಿಧಾನಕ್ಕೆ ಸಂವಿಧಾನದ ಆಶಯಕ್ಕೆ ವಿರೋಧಿ ಎಂದು ಹಲವು ಚಿಂತಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದ ಬೃಂದಾಕಾರಟ್ ಛತ್ತೀಸ್‌ಗಡ, ಮಧ್ಯಪ್ರದೇಶ ಮುಂತಾದ ರಾಜ್ಯಗಳಲ್ಲಿ ‘ಮರು ಮತಾಂತರ’ ನಡೆಸಲಾಗುತ್ತಿದೆ. ಇದಕ್ಕೆ ಮತಾಂತರ ನಿಷೇಧ ಕಾಯ್ದೆ ಅನ್ವಯವಾಗುವುದಿಲ್ಲವೇ? ಎಂದು ಪ್ರಶ್ನಿಸಿದರು. ಕಂದಮಾಲ್‌ನಲ್ಲಿ ಮರು ಮತಾಂತರಕ್ಕೆ ಒತ್ತಾಯಿಸಲಾಗುತ್ತಿದೆ. ಆರೆಸ್ಸೆಸ್, ಭಜರಂಗದಳ ಜನರಿಗೆ ಸುರಕ್ಷತೆ ಭದ್ರತೆ ಬೇಕಾದರೆ ಮರು ಮತಾಂತರಗೊಳ್ಳಬೇಕು ಎಂಬ




ಇವರೇನು ಪೊಲಿಸರಾ ಇಲ್ಲಾ ?

ಷರತ್ತು ವಿಧಿಸುತ್ತಿವೆ ಎಂದರು.

ಜನಸಂಖ್ಯೆ ಹೆಚ್ಚಳ ಎಂಬ ಸುಳ್ಳು

ಮತಾಂತರದ ಮೂಲಕ ಕ್ರಿಶ್ಚಿಯನ್ ಸಂಖ್ಯೆಯು ಹೆಚ್ಚಳವಾಗುತ್ತಿದೆ ಎಂದು ವ್ಯಾಪಕವಾಗಿ ಪ್ರಚಾರ ಮಾಡಲಾಗುತ್ತಿದೆ. ಆದರೆ 1991-2001ರ ನಡುವಿನ ಅವಧಿಯಲ್ಲಿ ಕ್ರಿಶ್ಚಿಯನ್ನರ ಸಂಖ್ಯೆಯು ವಾಸ್ತವವಾಗಿ ಇಳಿದಿದೆ. ಕ್ರಿಶ್ಚಿಯನ್ನರ ಜನಸಂಖ್ಯೆ ಶೇ.2 ಮಾತ್ರ ಇದೆ.

ದೇಶ ಭಯೋತ್ಪಾದನೆಯ ವಿರುದ್ಧ ಇದೆ: ಭಯೋತ್ಪಾದನೆ ಖಂಡನಾರ್ಹ. ದೇಶವು ಭಯೋತ್ಪಾದನೆಯ ವಿರುದ್ಧ ಇದೆ. ಭಜರಂಗದಳ, ವಿಹೆಚ್‌ಪಿಗಳು ಭಯೋತ್ಪಾದಕ ಕೆಲಸಗಳಲ್ಲಿ ನಿರತವಾಗಿವೆ. ಮಹಾರಾಷ್ಟ್ರದ ನಾಂದೇಡ್, ಥಾಣೆ, ತಮಿಳುನಾಡಿನ ತೆಂಕೇಸಿ, ಉತ್ತರ ಪ್ರದೇಶ ಲಕ್ನೋ ಮುಂತಾದ ಕಡೆಗಳಲ್ಲಿ ಆದ ಬಾಂಬ್ ಸ್ಫೋಟಗಳ ಹಿಂದೆ. ಭಜರಂಗದಳ ಮುಂತಾದ ಸಂಘಟನೆಗಳಿವೆ. ಇದೊಂದು ಅಪಾಯಕಾರಿ ಬೆಳವಣಿಗೆ. ಆಗಸ್ಟ್ 29 ರಂದು ಭುವನೇಶ್ವರದಲ್ಲಿ ಬಿಜೆಪಿ ಮುಖಂಡರ ಒಬ್ಬರ ಸಂಬಂಧಿ ಸತ್ತು, ಮತ್ತೊಬ್ಬರು ಗಾಯಗೊಂಡರು. ಇದು ಬಾಂಬ್ ತಯಾರಿಸುವಾಗ ನಡೆದ ಸ್ಫೋಟ, ಲಕ್ನೋ ಮುಂತಾದ ಕಡೆಯೂ ಹೀಗೆ ಆಗಿರುವುದು. ಕೇಂದ್ರ ಸರ್ಕಾರ ಇದರ ಬಗೆಗೆ ಯಾಕೆ ಕ್ರಮವಹಿಸುತ್ತಿಲ್ಲ ಎಂದೂ ಅವರು ಪ್ರಶ್ನಿಸಿದರು.



ಅಕ್ಟೋಬರ್ 6 ರಂದು ಬೆಂಗಳೂರಿನಲ್ಲಿ ಚರ್ಚ್‌ಗಳ ಮೇಲಿನ ದಾಳಿ, ಕೋಮುವಾದ ವಿರೋಧಿಸಿ ವಿವಿಧ ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ ನಡೆದ ಬೃಹತ್ ರ್‍ಯಾಲಿ ಚಿತ್ರ

ಅಖಿಲ ಭಾರತ ಕ್ರಿಶ್ಚಿಯನ್ ಕೌನ್ಸಿಲ್‌ನ ಅಧ್ಯಕ್ಷರು, ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸದಸ್ಯರೂ ಆದ ಜಾಂದ್ ದಯಾಳ್ ಮಾತನಾಡಿದರು. ಕೋಮುವಾದದ ವಿಚಾರದಲ್ಲಿ ಬಿಜೆಪಿ, ಕಾಂಗ್ರೆಸ್‌ಗಳು ಎ ಮತ್ತು ಬಿ ತಂಡಗಳಿದ್ದಂತೆ. 1984ರಲ್ಲಿ ಸು. 5000 ಸಿಖ್‌ರ ಮಾರಣ ಹೋಮ ನಡೆಸಲಾಯಿತು. ದೇಶದಲ್ಲಿ ಇಂದು ಅಲ್ಪಸಂಖ್ಯಾತರು ಏನಾದರೂ ಒಂದಷ್ಟು ಕ್ಷೇಮವಾಗಿದ್ದರೆ ಅದಕ್ಕೆ ಕಾರಣ ಮಾರ್ಕ್ಸ್‌ವಾದಿಗಳು ಮತ್ತು ಪ್ರಜ್ಞಾವಂತ ಹಿಂದೂಗಳು ಎಂದರು.

ಕಂದಮಾಲ್, ದಕ್ಷಿಣ ಕನ್ನಡ ಮುಂತ ಕಡೆಗಳಲ್ಲಿ ಚರ್ಚ್‌ಗಳ ಮೇಲೆ ದಾಳಿ ನಡೆಯುವ ನಾಪತ್ತೆಯಾಗಿರುತ್ತಿದ್ದ ಪೊಲೀಸರು ದಾಳಿ ನ ಕೆಲವೇ ನಿಮಿಷಗಳಲ್ಲಿ ಸ್ಥಳೀಯ ಮಾಧ್ಯ ದವರೊಂದಿಗೆ ಹಾಜರಿರುತ್ತಿದ್ದರು. ಜನರಿಗೆ ನಿ ಸೇವೆ ಬೇಕಿಲ್ಲ. ನಿಮ್ಮ ಭದ್ರತೆಗೆ ನೀವೇ ವ್ಯ ಮಾಡಿಕೊಳ್ಳಿ, ಪ್ರಾರ್ಥನೆ ನಡೆಸಬೇಡಿ ಎಂ ತಾಕೀತು ಮಾಡಿದ್ದಾರೆ. ದಾಳಿ ನಡೆಸಲ ಚರ್ಚ್‌ನಲ್ಲಿ ಪಾಸ್ಟರ್‌ಗೆ ‘ಸೀಮೆಎಣ್ಣೆ’ ಒರೆಸಿತ ಎಂದು ಒತ್ತಾಯಿಸಿ ಸಾಕ್ಷಿ ಇಲ್ಲದಂತೆ ಮಾಡ ಪ್ರಯತ್ನ ಮಾಡಿದ್ದಾರೆ. ದಾಳಿ ಬಗೆಗೆ ಕ್ರ ತೆಗೆದುಕೊಳ್ಳುವುದು ಬಿಟ್ಟು ಚರ್ಚ್‌ನ ಲೈಸೆ ಕೇಳುತ್ತಿದ್ದಾರೆಂದರು. ದೇವಸ್ಥಾನಗಳಿಗೆ ಲೈಸ ಕೇಳಲಾಗುತ್ತಿಲ್ಲ. ಚರ್ಚ್ ದಾಳಿ ಬಗೆಗೆ ದೂ ನೀಡದರೆ ಪ್ರಕರಣ ದಾಖಲಿಸುವುದಿಲ್ಲ. ಆ ಚರ್ಚ್‌ನಲ್ಲಿ ಯಾರಿದ್ದಾರೆ ಏನು ಎತ್ತ ಎ ಮಾಹಿತಿ ಮತ್ತು ಪಟ್ಟಿ ಕೇಳುತ್ತಿದ್ದಾರೆ. ನಂತರ ಪಟ್ಟಿ ಆರೆಸ್ಸೆಸ್ ಕೈ ಸೇರುತ್ತದೆ ಎಂದರು.

ಒರಿಸ್ಸಾದ ಕಂದಮಾಲ್ 42 ದಿನಗಳ ಕ ದೇಶದ ಇತರ ಭಾಗದಿಂದ ಸಂಪರ್ಕ ಕಡಿದುಕೊಂ ಈ ದೇಶದ ಭಾಗವೇ ಅಲ್ಲ ಎಂಬುದಾಗಿ ಹೆಲಿಕಾಪ್ಟರ್‌ಗಳನ್ನು ವೈಮಾನಿಕ ಸರ್ವೆಗೆ ಮ ಬಳಸಲಾಯಿತು. 200 ಕಿ.ಮೀ. ಉದ್ದ 80 ಕಿ.ಮ ಅಗಲದ ಕಂದಮಾಲ್‌ಅನ್ನೇ ರಕ್ಷಣೆ ಮಾಡಲಾ ಕೇಂದ್ರ ಸರ್ಕಾರ ದೇಶವನ್ನು ಹೇಗೆ ರಕ್ಷಿಸೀತು ಎಂ ಅವರು ಪ್ರಶ್ನಿಸಿದರು. ಅಲ್ಪಸಂಖ್ಯಾತರ ಆಯೋ ಮಾಜಿ ಅಧ್ಯಕ್ಷರಾದ ಸೈಯ್ಯದ್ ಬಷೀರ್ ಅಹಮ ಮಾತನಾಡಿ ಕೇವಲ ಹಣಕ್ಕಾಗಿ ಯಾರ ಮತಾಂತರ ಹೊಂದುವುದಿಲ್ಲ. ಧಾಮಿ ಸಾಂಸ್ಕೃತಿಕ ವೈವಿಧ್ಯತೆಯ ಈ ದೇಶ ಮಹಾ ಎಂದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂ ಸದಸ್ಯರು, ಮಾಜಿ ಶಾಸಕರು ಆದ ಕಾ ಜಿ.ವಿ.ಶ್ರೀರಾಮರೆಡ್ಡಿ ಮಾತನಾಡಿ ಸಂ ಪರಿವಾರದ ವಕಾಲತ್ ವಹಿಸಿ ಮತಾಂತರ ನಿಷ ಮಾಡಬೇಕೆಂದು ರಾಜ್ಯಪಾಲರಿಗೆ ಮನವಿ ನೀಡ ಪೇಜಾವರ ಶ್ರೀಗಳು, ದಾಳಿಗೆ ತುತ್ತಾ ಚರ್ಚ್‌ಗಳಿಗೆ ಭೇಟಿ ನೀಡಿ, ನೊಂದವರಿಗೆ ಸಾಂತ್ವನ ಹೇಳಲಿಲ್ಲ ಎಂದು ಪ್ರಶ್ನಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಿಪಿಐ(ಎ ರಾಜ್ಯ ಕಾರ್ಯದರ್ಶಿ ಕಾಂ: ವಿ.ಜೆ. ನಾಯರ್‌ರವರು ಮಾತನಾಡಿ ಅಂತರರಾಷ್ಟ್ರೀ ದೃಷ್ಟಿಕೋನ ಹೊಂದಿರುವ ಕಮ್ಯೂನಿಸ್ಟರಿಂದ ಮ ಅಲ್ಪಸಂಖ್ಯಾತರ ರಕ್ಷಣೆ ಸಾಧ್ಯ ಎಂದರು. ದೇ ಬಲವಂತದ ಮತಾಂತರ ನಡೆಯುತ್ತಿದೆ ಎ ಪ್ರಚಾರ ನಡೆಯುತ್ತಿದೆ. ಆದರೆ ಇ ನಡೆಯುತ್ತಿರುವುದು ಬಲವಂತದಿಂದ ಮತ ದ್ವೇ ಹರಡುವ ಕೆಲಸ. ಅದನ್ನು ಸಂಘ ಪರಿವಾ ನಡೆಸುತ್ತಿದೆ ಎಂದರು ಮತ್ತು ಈ ಕೋಮುವಾ ದಾಳಿಗಳು, ಕೋಮುದ್ವೇಷಗಳ ವಿರುದ್ಧ ಸೌಹಾ ಕರ್ನಾಟಕವನ್ನು ಉಳಿಸಲು ಸೌಹಾರ್ದ ಕರ್ನಾ ರಾಜ್ಯೋತ್ಸವ ಸೇರಿದಂತೆ ವಿವಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವು ಎಂದರು.

ಭಾಷೆ, ಪ್ರಾಂತ್ಯಗಳ ಹೆಸರಿನಲ್ಲಿ ದ್ವೇಷವನ್ನು ಕೆರಳಿಸಿ ರಾಜಕೀಯ ಮಾಡಿಕೊಳ್ಳುವ ಯತ್ನ ಮಹಾರಾಷ್ಟ್ರದಲ್ಲಿ ತೀವ್ರಗೊಂಡಿದೆ. ರಾಜ್ ಠಾಕ್ರೆ ತಾನು ಒಬ್ಬ ಬಾಳಾಠಾಕ್ರೆಯಾಗಬೇಕೆಂದು ಹೊರಟಿದ್ದಾರೆ.

'ನವ ನಿರ್ಮಾಣ' ಎಂಬ ಛಿದ್ರಕಾರಿ ಚಟುವಟಿಕೆ

ಸ್ವಲ್ಪ ಹಿರಿಯರೆನಿಸಿಕೊಂಡವರಿಗೆ ಕಳೆದ ನಾಲ್ಕೈದು ದಶಕಗಳ ಮುಂಬೈನ ಹಾಗೂ ಮಹಾರಾಷ್ಟ್ರದ ಚರಿತ್ರೆಯನ್ನು ಕಂಡವರಿಗೆ ಈಗ ಮತ್ತೊಮ್ಮೆ 60 ದಶಕದ ಮುಂಬೈ ನೆನಪಾಗುತ್ತಿದೆ.

ಆಗಿನಂತೆ ಈಗಲೂ ಮುಂಬೈ ಹೊತ್ತಿ ಉರಿಯುತ್ತಿದೆ. ಅಲ್ಲ ಕ್ಷಮಿಸಿ ಹೊತ್ತಿ ಉರಿಸಲು ಪ್ರಯತ್ನಿಸಲಾಗುತ್ತಿದೆ. ನನ್ನನ್ನು ಬಂಧಿಸಿದರೆ ಮಹಾರಾಷ್ಟ್ರ ಹೊತ್ತಿ ಉರಿಯುತ್ತದೆ ಅಂತ ರಾಜ್ ಠಾಕ್ರೆ ಬೆದರಿಕೆ ಹಾಕಿದ್ದರು. ಮುಂಬೈ, ಮಹಾರಾಷ್ಟ್ರ ತಾನಾಗೇ ಹೊತ್ತಿ ಉರಿಯುತ್ತಿದ್ದರೂ ರಾಜ್ ಠಾಕ್ರೆ ನೇತೃತ್ವದ ಮಹಾರಾಷ್ಟ್ರ ನವ ನಿರ್ಮಾಣ ಸಮಿತಿ (ಎಂಎನ್‌ಎಸ್) ನಡೆಸುತ್ತಿರುವ ಹಿಂಸಾಚಾರದಲ್ಲಿ ಮೂವರು ಪ್ರಾಣ ಕಳೆದುಕೊಂಡಿದ್ದರೆ, ಸುಮಾರು 300ಕ್ಕೂ ಹೆಚ್ಚು ಬಸ್ಸುಗಳಿಗೆ ಹಾನಿ ಮಾಡಲಾಗಿದೆ. ಅದರಲ್ಲಿ ಹಲವು ಬಸ್‌ಗಳನ್ನು ಸುಡಲಾಗಿದೆ. ಮುಂಬೈನ ಜೀವನಾಡಿಯಾದ ಸ್ಥಳೀಯ ರೈಲುಗಳ ಓಡಾಟಗಳಿಗೆ ಸಹ ತಡೆ ಹಿಡಿಯಲಾಗಿತ್ತು. ಮುಂಬೈ ಮಾತ್ರವಲ್ಲದೆ, ಮುಂಬೈ ಹೊರವಲಯ, ಕಲ್ಯಾಣ ಮತ್ತು ಅಹ್ಮದ್‌ನಗರ ಮುಂತಾದ ಕಡೆಗಳಲ್ಲೂ ವ್ಯಾಪಕ ಹಿಂಸಾತ್ಮಕ ಘಟನೆಗಳು ಸಂಭವಿಸಿದ ವರದಿಗಳು ಬಂದಿವೆ.

ಏಕೆ ಈ ಗಲಭೆ

ರೈಲ್ವೆ ಪರೀಕ್ಷೆಗೆ ಹಾಜರಾಗಲು ಮಹಾರಾಷ್ಟ್ರಕ್ಕೆ ಬಂದಿದ್ದ ಬಿಹಾರಿಗಳು ಮತ್ತು ಉತ್ತರ ಭಾರತೀಯರ ಮೇಲೆ ಮಹಾರಾಷ್ಟ್ರದ ನವ ನಿರ್ಮಾಣ ವೇದಿಕೆಯುವರು ದಾಳಿ ನಡೆಸಿ ಬಡಿದರು. ಅಟ್ಟಾಡಿಸಿಕೊಂಡು ಹೊಡೆದರು.

ಮಹಾರಾಷ್ಟ್ರ ರಾಜ್ಯಕ್ಕೆ ಉದ್ಯೋಗವನ್ನು ಹುಡುಕಿಕೊಂಡು ಬೇರೆ ಯಾವ ರಾಜ್ಯದವರು ಬರಬಾರದು. ಮಹಾರಾಷ್ಟ್ರದಲ್ಲಿನ ಉದ್ಯೋಗಾವಕಾಶಗಳಿಗೆಲ್ಲ ಮರಾಠಭಾಷಿಕರು ಮಾತ್ರ ಹಕ್ಕುದಾರರು ಎಂಬ ವಾದ ಮಹಾರಾಷ್ಟ್ರ ನವ ನಿರ್ಮಾಣ ವೇದಿಕೆಯದ್ದು. ಇದು "ಮಣ್ಣಿನ ಮಕ್ಕಳ" ವಾದ. ಇಲ್ಲಿ ಮಣ್ಣಿನ ಮಕ್ಕಳು ಎಂದರೆ ರೈತನ ಮಕ್ಕಳು ಎಂಬ ಅರ್ಥ ಅಲ್ಲ. ಹೊರಗಿನವರು-ಒಳಗಿನವರು, ಮರಾಠಿಗರು- ಮರಾಠಿಯೇತರರು ಎಂಬ ಸಂಕುಚಿತ ವಾದ ಇದು. ಈ ಭಾಷಾಂಧತೆ. ಪ್ರಾದೇಶಿಕ ದುರಭಿಮಾನದ ದಾಳಿಗೆ ಗುರಿಯಾಗಿರುವವರು ಉತ್ತರ ಭಾರತೀಯರು. ಅದರಲ್ಲೂ ವಿಶೇಷವಾಗಿ ಬಿಹಾರಿಗಳು.

ಇದು ಅನುಕರಣೆ ಮತ್ತು ದುರುದ್ದೇಶಪೂರಿತ ಪುನರಾವರ್ತನೆ

1960ರ ದಶಕದಲ್ಲಿ ಹೀಗೆ ಶಿವಸೇನೆ ಎಂಬ ಸಂಘಟನೆಯು ಭಾಷಾಂಧತೆಯನ್ನು, ಪ್ರಾದೇಶಿಕ ಅಂಧಾಭಿಮಾನವನ್ನು ಪ್ರಚೋದಿಸಿತು. ಆಗ ಶಿವಸೇನೆಯ ದಾಳಿಗೆ ಗುರಿಯಾದವರು ಹೆಚ್ಚಾಗಿ ದಕ್ಷಿಣ ಭಾರತೀಯರು. ಆ ದಕ್ಷಿಣ ಭಾರತೀಯರಲ್ಲಿ ಕನ್ನಡಿಗರು ಸಹ ಬಹುದೊಡ್ಡ ವಿಭಾಗವಾಗಿದ್ದರು. ಮಂಗಳೂರು, ಉಡುಪಿಗಳಿಂದ ಮುಂಬೈ, ಮಹಾರಾಷ್ಟ್ರಗಳಿಗೆ ತೆರಳಿ ಜೀವನ ರೂಪಿಸಿಕೊಂಡವರು. ಅದರಲ್ಲೂ ಉಡುಪಿ ಹೋಟೆಲುಗಳು ಶಿವಸೇನೆಯವರು ವಿಶೇಷ ದಾಳಿಗೆ ಗುರಿಯಾದವು. ಲೂಟಿ, ದಾಳಿ, ಹತ್ಯೆ ವಿಧ್ವಂಸಕ ಕೃತ್ಯಗಳು ಎಗ್ಗಿಲ್ಲದೆ ನಡೆದವು. ಎಷ್ಟೋ ಜನ ಮುಂಬೈ ತೊರೆದು ಸ್ವಂತ ಊರುಗಳಿಗೆ ವಾಪಸ್ಸಾದರು. ಮರಾಠಿ ಯುವಜನರ ನಡುವೆ ರಾಜಕೀಯ ನೆಲೆ ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಶಿವಸೇನೆಯ ಮುಖ್ಯಸ್ಥ ಬಾಳಾಠಾಕ್ರೆ ಭಾಷಾಂಧತೆಯ ವಿಷ ಬೀಜ ಬಿತ್ತಿದರು. ಇಂತಹ ವಿಭಜಕ ರಾಜಕೀಯದ ಮೂಲಕವೇ ಶಿವಸೇನೆಯ ಮಹಾರಾಷ್ಟ್ರದಲ್ಲಿ ಒಂದು ರಾಜಕೀಯ ಶಕ್ತಿಯಾಗಿ ಬೆಳೆಯಿತು. ನಂತರ ಹಿಂದುತ್ವವಾದಿ ಕೋಮುವಾದಿಗಳೊಂದಿಗೆ ಕೈ ಜೋಡಿಸಲಾರಂಭಿಸಿದ ಶಿವಸೇನೆ ಹಲವಾರು ಬಾರಿ ಬಿಜೆಪಿಯನ್ನು ಮೀರಿದ ಅತಿರೇಕದ ನಿಲುವುಗಳನ್ನು ತೆಗೆದುಕೊಳ್ಳುತ್ತಾ ಬೆಳೆದುಬಂತು.



ಮಹಾರಾಷ್ಟ್ರ ನವ ನಿಮಾಣ ಸಮಿತಿಯ ನಿರ್ಮಾಣ (ನಿರ್ನಾಮ)

ಶಿವ ಸೇನೆಯೊಂದಿಗೆ ಸ್ಪರ್ಧೆಗೆ ಬಿದ್ದಿರುವ ನವ ನಿರ್ಮಾಣ ವೇದಿಕೆಯು ಈಗ ತನಗೆ ನೆಲೆಯನ್ನು ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಅದೇ ಶಿವಸೇನೆಯ ಹಳೆಯ ಹೀನ ತಂತ್ರಕ್ಕೆ ಜೋತುಬಿದ್ದಿದೆ.

ಸಂವಿಧಾನಬದ್ಧ ಮೂಲಭೂತ ಹಕ್ಕು

ಭಾರತದ ಸಂವಿಧಾನವು ತನ್ನ ಪ್ರತಿಯೊಬ್ಬ ಪ್ರಜೆಗೆ ಕೂಡ ದೇಶದ ಯಾವುದೇ ಭಾಗದಲ್ಲಾಗಲೀ ನೆಲೆಸುವ ಜೀವನೋಪಾಯ, ಉದ್ಯೋಗ ಕಂಡುಕೊಳ್ಳುವ ಹಕ್ಕನ್ನು ಮೂಲಭೂತ ಹಕ್ಕೆಂದು ಪರಿಗಣಿಸಿದೆ. ಭಾಷೆ, ಬಣ್ಣ, ಪ್ರಾಂತ, ಧರ್ಮ, ಲಿಂಗ ಇಂತಹ ಯಾವುದೇ ಪ್ರಶ್ನೆಗಳ ಆಧಾರದಲ್ಲಿ ತಾರತಮ್ಯ, ಅವಕಾಶ ವಂಚನೆ ಮಾಡುವುದು ಭಾರತದ ಸಂವಿಧಾನಕ್ಕೆ ಬಗೆದ ಅಪಚಾರವೇ ಆಗುತ್ತದೆ.

ಕೈಗಾರಿಕಾ ಬೆಳವಣಿಗೆ ಮತ್ತು ವಾಣಿಜ್ಯ, ವ್ಯಾಪಾರ, ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ನೋಡಿದಲ್ಲಿ ಮಹಾರಾಷ್ಟ್ರವು ಇತರ ಹಲವು ರಾಜ್ಯಗಳಿಗಿಂತ ಮುಂದಿದೆ, ಇಂತಹ ಸನ್ನಿವೇಶದಲ್ಲಿ ದೇಶದ ವಿವಿಧ ಭಾಗದ ಜನರು ಉದ್ಯೋಗ ಅರಸಿ, ಬದುಕುವ ದಾರಿ ಹುಡುಕಿಕೊಂಡು ಮಹಾರಾಷ್ಟ್ರದಂತಹ ರಾಜ್ಯಕ್ಕೆ ಬರುವುದು ಅತ್ಯಂತ ಸಹಜವೇ ಆಗಿದೆ. ಮಹಾರಾಷ್ಟ್ರದ ಯುವಕ, ಯುವತಿ (ಮಧ್ಯ ವಯಸ್ಕರು, ವೃದ್ಧರೂ ಸಹ) ಬೇರೆ ಬೇರೆ ರಾಜ್ಯಗಳಿಗೆ ತೆರಳಿ ಉದ್ಯೋಗ ಪಡೆಯುವ ಅವಕಾಶ ಇದ್ದೇ ಇದೆ. ಅದಕ್ಕೆ ಯಾವುದೇ ನಿರ್ಬಂಧ ಇಲ್ಲದೇ ಇರುವಾಗ ಮಹಾರಾಷ್ಟ್ರಕ್ಕೆ ಬೇರೆಯವರ್‍ಯಾರೂ ಬರುವಂತಿಲ್ಲ ಎಂಬ ವಾದ ಎಷ್ಟು ಸರಿ. ಜನಸಾಮಾನ್ಯರಲ್ಲಿ ನಿಜವಾಗಿ ನೋಡಿದರೆ ಇಂತಹ ಭಾವನೆ ಇರುವುದಿಲ್ಲ. ಅವರು ಭಾಷೆ, ಬಣ್ಣ, ಜಾತಿ, ಮತಗಳ ಗಡಿಗಳನ್ನು ಮೀರಿ ಮನುಷ್ಯರಾಗಿ ಯೋಚಿಸುತ್ತಾ ಸಹಬಾಳ್ವೆಯ ಬದುಕನ್ನು ರೂಪಿಸಿಕೊಳ್ಳುತ್ತಾರೆ. ಯಾವುದೇ ಮಹದ್ ಗ್ರಂಥವನ್ನು ಓದದಿದ್ದರೂ ವಿಶ್ವ ವಿದ್ಯಾಲಯಗಳಲ್ಲಿ ಸಂಶೋಧನಾ ಪ್ರಬಂಧಗಳನ್ನು ಮಂಡಿಸದಿದ್ದರೂ, ಅವರಿಗೆ ಅದು ಒಂದು ಸಹಜ ಸಿದ್ಧಾಂತವಾಗಿ, ಅದನ್ನು ಅವರು ಸ್ವೀಕರಿಸಿರುತ್ತಾರೆ. ಆದರೆ ಸ್ಥಾಪಿತ ಹಿತಾಸಕ್ತಿಗಳು, ಪಟ್ಟಭದ್ರ ಹಿತಾಸಕ್ತಿಗಳು ದುರುದ್ದೇಶಪೂರ್ವಕವಾಗಿ ಅರೆಸತ್ಯ, ಸುಳ್ಳು, ದ್ವೇಷ ಇತ್ಯಾದಿಗಳನ್ನಾಧರಿಸಿ ವಿಕೃತ ವಿಚಾರ, ಪ್ರಚಾರಗಳನ್ನು ನಡೆಸಿ ಜನರನ್ನು ದಿಕ್ಕುತಪ್ಪಿಸುತ್ತಾರೆ. ಹಲವು ಬಾರಿ ಆಳುವ ವರ್ಗ ಪ್ರಜ್ಞಾಪೂರ್ವಕವಾಗಿ ಇಂತಹ ವಿಭಜಕ ಶಕ್ತಿಗಳಿಗೆ ಪ್ರೋತ್ಸಾಹ ನೀಡುತ್ತವೆ. ಅಥವಾ ಅವೇ ಅಂತಹ ಶಕ್ತಿಗಳನ್ನು ಹುಟ್ಟು ಹಾಕುತ್ತವೆ.


ರಾಜ್ ಠಾಕ್ರೆ

60ರ ದಶಕದಲ್ಲಿ ಶಿವಸೇನೆಯು ತನ್ನ ವಿಭಜಕವಾದ, ವಿಧ್ವಂಸಕ ಕೃತ್ಯಗಳನ್ನು ಆರಂಭಿಸಿದ ಅಂದಿನ ಆಳುವ ಪಕ್ಷವಾಗಿದ್ದ ಕಾಂಗ್ರೆಸ್ ಅದನ್ನು ದೃಢವಾಗಿ ಎದುರಿಸಲಿಲ್ಲ. ಮಾತ್ರವಲ್ಲ ಪರೋಕ್ಷವಾಗಿ ಅದಕ್ಕೆ ಸಹಕಾರ ಕೂಡ ನೀಡಿತು. ಏಕೆಂದರೆ ಆಗ ಮುಂಬೈ ಬಲಿಷ್ಟ ಎಡಪಂಥೀಯ ಕಾರ್ಮಿಕ ಚಳುವಳಿಯ ಕೇಂದ್ರವಾಗಿತ್ತು. ಕಮ್ಯೂನಿಷ್ಟರ ನಾಯಕತ್ವವನ್ನು ಈ ಕಾರ್ಮಿಕ ಚಳುವಳಿಯನ್ನು ದಮನ ಮಾಡುವ ಉದ್ದೇಶದಿಂದ ಶಿವಸೇನೆಯ ಬೆಳವಣಿಗೆಯನ್ನು ಸಹಿಸಿಕೊಳ್ಳಲಾಯಿತು ಮತ್ತು ಬೆಳೆಸಿಕೊಳ್ಳಲಾಯಿತು.

ಈಗಾದರೂ ಪರಿಸ್ಥಿತಿ ಭಿನ್ನವಾಗಿಯೇನೂ ಇಲ್ಲ. ಕಾಂಗ್ರೆಸ್ ಅನುಭವದಿಂದ ಪಾಠ ಕಲಿತಿದೆಯೇ? ಉಹುಂ ಇಲ್ಲ. ಈಗ ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಎನ್‌ಸಿಪಿ ನೇತೃತ್ವದ ಸಮ್ಮಿಶ್ರ ಸರ್ಕಾರ ಅಸ್ತಿತ್ವದಲ್ಲಿ ಏನು ಅದರ ಯೋಚನೆ.

ರಾಜ್ ಠಾಕ್ರೆಯ ಎಂ.ಎನ್.ಎಸ್. ಪ್ರಭಾವಶಾಲಿಯಾಗಿ ಬೆಳೆದು ಬಾಳಾಠಾಕ್ರೆಯ ಶಿವಸೇನೆಗೆ ಸೆಡ್ಡು ಹೊಡೆಯುವಂತಾದರೆ ಏನಾದೀತು. 'ಚುನಾವಣೆಯಲ್ಲಿ ಮತಗಳು ವಿಭಜನೆಗೊಂಡು ಕಾಂಗ್ರೆಸ್, ಎನ್‌ಸಿಪಿಗಳಿಗೆ ಒಂದಷ್ಟು ರಾಜಕೀಯವಾಗಿ ಲಾಭವಾಗಬಹುದು'. ಅಬ್ಬ ಏನು ಲೆಕ್ಕಾಚಾರ ಎಲ್ಲಾ ಚುನಾವಣಾ ಲಾಭದ ಕೂಡು ಕಳೆಯುವ ಲೆಕ್ಕ.

ಶಿವಸೇನೆ ಸಾರುವ ಪ್ರಾದೇಶಿಕ ಸಂಕುಚಿತವಾದ ಕೋಮುವಾದವನ್ನು ಎಂದೂ ಕಾಂಗ್ರೆಸ್ ದೃಢತೆಯಿಂದ ಎದುರಿಸಲಿಲ್ಲ. ಈಗಲೂ ಅಷ್ಟೇ ಕಾಂಗ್ರೆಸ್-ಎನ್‌ಸಿಪಿ ಸರ್ಕಾರ ಎಂ.ಎನ್.ಎಸ್.ರವರ ಸಂಕುಚಿತ ವಾದವನ್ನು ಆಡಳಿತಾತ್ಮಕವಾಗಿ, ರಾಜಕೀಯವಾಗಿ ಎದುರಿಸುವ ಗಟ್ಟಿತನ ತೋರುತ್ತಿಲ್ಲ. ಎಷ್ಟೆಲ್ಲಾ ಉದ್ರೇಕಕಾರಿ ಹೇಳಿಕೆ, ಚಟುವಟಿಕೆಗಳ ನಂತರವೂ ರಾಜ್ಯ ಸರ್ಕಾರ ಕ್ರಮ ವಹಿಸಿರಲಿಲ್ಲ. ರಾಷ್ಟ್ರವ್ಯಾಪಿ ಪ್ರತಿಭಟನೆ, ಪಾರ್ಲಿಮೆಂಟ್‌ನಲ್ಲಿ ಖಂಡನೆ, ಯುಪಿಎ ಅಂಗಪಕ್ಷಗಳಿಂದಲೇ ಒತ್ತಾಯ ಬಂದ ಮೇಲೆ ರಾಜ್ ಠಾಕ್ರೆಯನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ಪಂಜಾಬ್‌ನಲ್ಲಿ ಉಗ್ರಗಾಮಿ ಮತ್ತು ಛಿದ್ರಕಾರಿ ಚಳುವಳಿಯಾಗಿದ್ದ ದಾಲ್ ಕಾಲ್ಸಾವನ್ನು, ಬಿಂದ್ರನ್ ವಾಲೆಯನ್ನು ಕಾಂಗ್ರೆಸ್ ಪಕ್ಷ ಸಂಕುಚಿತ ರಾಜಕೀಯ ಲಾಭಗಳಿಗಾಗಿ ಪ್ರೋತ್ಸಾಹಿಸಿತು. ಎರಡು ದಶಕಗಳ ಪಂಜಾಬ್‌ನ ಮತ್ತು ದೇಶದ ದುಃಸ್ವಪ್ನವಾಗಿ ಕಾಡಿದ ಭಯೋತ್ಪಾದನೆ ಕಡೆಗೂ ಇಂದಿರಾ ಗಾಂಧಿಯವರ ಜೀವನವನ್ನೇ ಬಲಿ ತೆಗೆದುಕೊಂಡಿತು.

ಮಹಾರಾಷ್ಟ್ರ ಸರ್ಕಾರಕ್ಕೆ ನಿಜವಾಗಿಯೂ ಮನಸ್ಸಿದ್ದಲ್ಲಿ ಮಹಾರಾಷ್ಟ್ರ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ (MCOCA) ಯನ್ನು ಜಾರಿಗೊಳಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಬಹುದಿತ್ತು. ಆದರೆ ರಾಜ್ ಠಾಕ್ರೆಯನ್ನು ಬಂಧಿಸಿ, ಕೂಡಲೇ ಜಾಮೀನಿನ ಮೇಲೆ ಬಿಡುಗಡೆಯಾಗುವುದಕ್ಕೆ ನೀಡಿರುವ ಅವಕಾಶಗಳನ್ನು ನೋಡಿದರೆ ಸರ್ಕಾರಕ್ಕೆ ಅಂತಹ ಯಾವ ಮನಸ್ಸು ಇಲ್ಲ ಎಂಬುದು ಖಚಿತವಾಗುತ್ತದೆ. ○

ವಾಸ್ತವವೇನು?

ಮರಾಠಿ ಯುವಜನರಿಗೆ ದಕ್ಕಬೇಕಾದ ಉದ್ಯೋಗಾವಕಾಶವನ್ನೆಲ್ಲಾ ಹೊರಗಿನವರೇ ಕಬಳಿಸುತ್ತಿದ್ದಾರೆಂಬುದು ಎಂ.ಎನ್.ಎಸ್.ನ ವಾದ. ಆದರೆ ಸತ್ಯ ಏನೆಂದು ಪರಿಶೀಲಿಸಿದರೆ ಸಿಗುವ ಚಿತ್ರ ಬೇರೆಯೇ ಇದೆ. ಟಾಟಾ ಸಾಮಾಜಿಕ ಅಧ್ಯಯನ ಸಂಸ್ಥೆ ನಡೆಸಿರುವ ಅಧ್ಯಯನದ ಪ್ರಕಾರ ಮಹಾರಾಷ್ಟ್ರದಲ್ಲಿನ ಸಂಘಟಿತ ವಲಯದಲ್ಲಿ ಶೇ.75ರಿಂದ 90ರಷ್ಟು ಮರಾಠಿಗರೇ ಉದ್ಯೋಗಿಗಳಾಗಿದ್ದಾರೆ. ಈ ಪ್ರಮಾಣ ಒಂದೊಂದು ವಿಭಾಗದಲ್ಲಿ ಒಂದೊಂದು ರೀತಿ ಇದೆ. ಆದರೆ ಯಾವುದೇ ವಿಭಾಗದಲ್ಲಿ ಕೂಡ ಹೊರಗಿನವರ ಪ್ರಮಾಣ ಮರಾಠಿಗರನ್ನು ಮೀರಿಸಿಲ್ಲ. ಕಟ್ಟಡ ಮತ್ತಿತರ ನಿರ್ಮಾಣ ಕ್ಷೇತ್ರದಲ್ಲಿ ಕೂಡ ಹೊರಗಿನವರ ಪ್ರಮಾಣ ಶೇ.3.5 ಮೀರಿಲ್ಲ. ಒಮ್ಮೆ ಭಾಷಾಂಧರ ದಾಳಿ ತೀವ್ರವಾಗಿ ಹೊರಗಿನ ಕಟ್ಟಡ ಕಾರ್ಮಿಕರೆಲ್ಲಾ ವಾಪಸ್ ಹೋದಾಗ ಮುಂಬೈ ನಗರಿಯಲ್ಲಿ ಕಟ್ಟಡ ಮತ್ತಿತರ ನಿರ್ಮಾಣವೇ ನಿಂತು ಹೋಗಿತ್ತು.

ಹೀಗಾಗಿ ಮರಾಠಿಗರಿಗೆ ಅನ್ಯಾಯ ಎಂದೆಲ್ಲಾ ಹುಯಿಲೆಬ್ಬಿಸುವ ಎಂ.ಎನ್.ಎಸ್. ವಾದ ಸತ್ಯವನ್ನು ಆಧರಿಸಿಲ್ಲ. ಎಂಎನ್‌ಎಸ್‌ಗೆ ಅದು ಬೇಕಾಗೂ ಇಲ್ಲ. ತಮ್ಮ ರಾಜಕೀಯ ಗುರಿ ತಲುಪಲು ಅವರು ಆಯ್ದುಕೊಂಡಿರುವುದು ಜನರನ್ನು ಭಾಷೆ, ಪ್ರಾಂತ್ಯಗಳ ಹೆಸರಿನಲ್ಲಿ ಭಾವನಾತ್ಮಕವಾಗಿ ಕೆರಳಿಸುವ ತಂತ್ರ ಅಷ್ಟೆ.

ಕ್ರೈಸ್ತ ಅಲ್ಪಸಂಖ್ಯಾತರ ಮೇಲೆ ಒರಿಸ್ಸಾ ಮತ್ತು ಕರ್ನಾಟಕದಲ್ಲಿ ನಡೆಯುತ್ತಿರುವ ಹಿಂಸಾಚಾರ ಭಾರತೀಯ ಸಂವಿಧಾನದ ಮೂಲರಚನೆಯ ಅವಿಭಿನ್ನ ಅಂಗವಾಗಿರುವ ಜಾತ್ಯಾತೀತತೆಗೆ ಒಡ್ಡಿರುವ ಸವಾಲಷ್ಟೇ ಅಲ್ಲ, ನಾಗರಿಕ ಸಮಾಜ, ಕಾನೂನಿನ ಆಳ್ವಿಕೆ ಮತ್ತು ಪ್ರಜಾಪ್ರಭುತ್ವ ರಚನೆ ಹಾಗೂ ಆಡಳಿತದ ಮೇಲೆ ಮಾಡಿರುವ ಧಾಳಿ ಕೂಡಾ. ಯಾರದ್ದೇ ಧಾರ್ಮಿಕ ಭಾವನೆಗಳನ್ನು ಘಾಸಿಗೊಳಿಸುವುದು ಒಂದು ಅಪರಾಧ ಎಂಬ ಭಾರತೀಯ ದಂಡ ಸಂಹಿತೆ(ಪೀನಲ್ ಕೋಡ್)ಯ ಅಂಶಗಳನ್ನು ಧಾರ್ಮಿಕ ಸಂಸ್ಥೆಗಳ ಮೇಲೆ ಧಾಳಿಗಳನ್ನು ನಡೆಸುತ್ತಿರುವವರಿಗೆ ಅನ್ವಯಿಸುವ ಬದಲು, ಅವನ್ನು ತಿರುಚಿ ಮತಾಂತರಗಳನ್ನು ಶಿಕ್ಷಿಸುವ ಪ್ರಯತ್ನ ನಡೆಯುತ್ತಿದೆ. ಇದು ಎಂದೂ ನಮ್ಮ ಸಂವಿಧಾನವನ್ನು ರಚಿಸಿದವರ ಆಶಯವಾಗಿರಲಿಲ್ಲ.

ಮತಾಂತರ ಧಾರ್ಮಿಕ ಸ್ವಾತಂತ್ರ್ಯದ ಭಾಗ

ವಿ.ಜೆ.ಕೆ. ನಾಯರ್

ನಮ್ಮ ದೇಶ ಧರ್ಮದ ಸ್ವಾತಂತ್ರ್ಯದ ಹೆಸರಿನಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ಶಕ್ತಿಗಳಿಂದ ಆಂತರಿಕವಾಗಿ ಒಂದು ಗಂಭೀರ ಸವಾಲನ್ನು ಎದುರಿಸುತ್ತಿದೆ. ಇದು ದೇಶದ ಮೂಲ ರಚನೆಯ ಮೂಲಭೂತ ಅಂಶಗಳಿಗೆ ಅಂದರೆ ಮೂಲಭೂತ ಹಕ್ಕುಗಳಿಗೆ, ಧಾರ್ಮಿಕ ಹಕ್ಕಿಗೇ ಬಂದಿರುವ ಬೆದರಿಕೆ. 'ಮತಾಂತರ' ಒಂದು ಹಿಂಸಾಚಾರ, ಆದ್ದರಿಂದ 'ಬಲವಂತದ ಮತಾಂತರ'ವನ್ನು ಹಿಂಸಾತ್ಮಕವಾಗಿ ಪ್ರತಿರೋಧಿಸುವುದು ಒಂದು ದೇಶಭಕ್ತಿಯ ಕೆಲಸ ಎಂಬ ಪ್ರಚಾರ ನಡೆಯುತ್ತಿದೆ. ಸದ್ಯಕ್ಕೆ ಈ ವಾದ ಮತ್ತು ಅದಕ್ಕನುಸಾರವಾದ ಕ್ರಿಯೆ ಹಿಂದುತ್ವ ಶಕ್ತಿಗಳ ಕಡೆಯಿಂದ ಬರುತ್ತಿದೆ. ದೇಶಕ್ಕೆ ಆಂತರಿಕ ಬೆದರಿಕೆ ಬಂದಿರುವುದು ಈ ಶಕ್ತಿಗಳಿಂದ. ಏಕೆಂದರೆ ತಮ್ಮ ತರ್ಕಗಳನ್ನು ಮುಂದಿಡಲು, ಜನಗಳ ಬೆಂಬಲವನ್ನು ಗೆಲ್ಲಲು ಅವರು ಯಾವುದೇ ಪ್ರಜಾಸತ್ತಾತ್ಮಕ ವಿಧಾನವನ್ನು ಅಂಗೀಕರಿಸಿಲ್ಲ; ಬದಲಿಗೆ, ಅವರು ಕೆಲವು ಸಮುದಾಯಗಳು ಮರು ಮತಾಂತರಗೊಳ್ಳುವಂತೆ ಬಲವಂತ ಮಾಡಲು ಮುಂದಾಗಿದ್ದಾರೆ, ಈ ಮೂಲಕ ತಾವು ಬಲವಂತದ ಮತಾಂತರವನ್ನು ತಡೆಯುತ್ತಿದ್ದೇವೆ ಎಂಬ ತಮ್ಮದೇ ತರ್ಕವನ್ನು ಹುಸಿಗೊಳಿಸುತ್ತಿದ್ದಾರೆ.

ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ, ವಿಶೇಷವಾಗಿ ಕ್ರೈಸ್ತ ಅಲ್ಪಸಂಖ್ಯಾತರ ಮೇಲೆ ಒರಿಸ್ಸಾ ಮತ್ತು ಕರ್ನಾಟಕದಲ್ಲಿ ನಡೆಯುತ್ತಿರುವ ಹಿಂಸಾಚಾರ ಭಾರತೀಯ ಸಂವಿಧಾನದ ಮೂಲರಚನೆಯ ಅಭಿನ್ನ ಅಂಗವಾಗಿರುವ ಜಾತ್ಯಾತೀತತೆಗೆ ಒಡ್ಡಿರುವ ಸವಾಲಷ್ಟೇ ಅಲ್ಲ, ನಾಗರಿಕ ಸಮಾಜ, ಕಾನೂನಿನ ಆಳ್ವಿಕೆ ಮತ್ತು ಪ್ರಜಾಪ್ರಭುತ್ವ ರಚನೆ ಹಾಗೂ ಆಡಳಿತದ ಮೇಲೆ ಮಾಡಿರುವ ಧಾಳಿ ಕೂಡಾ.

ಇಲ್ಲಿ ಒಳಗೊಂಡಿರುವ ಪ್ರಶ್ನೆಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕಾದರೆ, ಸಂವಿಧಾನದ ಅಂಶಗಳ ಆಧಾರ, ಅದರ ವ್ಯಾಖ್ಯೆಗಳು, ಧಾರ್ಮಿಕ ಆಚರಣೆ ಕುರಿತಂತೆ ಸಾಮಾಜಿಕ ಬದಲಾವಣೆಯ ಗತಿಶೀಲತೆ ಇತ್ಯಾದಿಗಳನ್ನು ನೋಡಬೇಕಾಗುತ್ತದೆ. ಇಂತಹ ಒಂದು ತಿಳುವಳಿಕೆ ತಕ್ಷಣದಲ್ಲಿ ಆಕ್ರಮಣಗಳಿಗೆ ತುತ್ತಾಗಿರುವ ಅಲ್ಪಸಂಖ್ಯಾತರನ್ನು ಮತ್ತು ಅವರ ಸಂಸ್ಥೆಗಳನ್ನು ಕಾಪಾಡಲು ಮತ್ತು ಅಂತಿಮವಾಗಿ ಸಮಸ್ತ ಜನತೆಯ ಹಿತಾಸಕ್ತಿಗಳನ್ನು ರಕ್ಷಿಸಲು ನೆರವಾಗುತ್ತದೆ.

ಮೂಲಭೂತ ಹಕ್ಕುಗಳು

ಧಾರ್ಮಿಕ ಹಕ್ಕುಗಳು ಸಂವಿಧಾನದ 25ರಿಂದ 30ರವರೆಗಿನ ಕಲಮುಗಳಲ್ಲಿ ನಮೂದಿತವಾಗಿವೆ. ಮನಸಾಕ್ಷಿಯ ಸ್ವಾತಂತ್ರ್ಯದ ಹಕ್ಕು, ಯಾವುದೇ ಧರ್ಮವನ್ನು ಪ್ರತಿಪಾದಿಸುವ, ಅನುಸರಿಸುವ ಮತ್ತು ಪ್ರಚಾರಮಾಡುವ ಹಕ್ಕು, ಧಾರ್ಮಿಕ ವ್ಯವಹಾರಗಳನ್ನು ನಿರ್ವಹಿಸುವ ಹಕ್ಕು, ಯಾವುದೇ ಧರ್ಮದ ರಕ್ಷಣೆಗೆ ತೆರಿಗೆ ಪಾವತಿ ಕುರಿತಂತೆ ಹಕ್ಕು, ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ಧಾರ್ಮಿಕ ಬೋಧನೆ ಅಥವಾ ಧಾರ್ಮಿಕ ಆರಾಧನೆಯಲ್ಲಿ ಭಾಗವಹಿಸುವ ಕುರಿತ ಹಕ್ಕು, ಅಲ್ಪಸಂಖ್ಯಾತರ ಹಿತಾಸಕ್ತಿಗಳ ರಕ್ಷಣೆ ಮತ್ತು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ಆಡಳಿತ ನಡೆಸುವ ಹಕ್ಕು ಇದರಲ್ಲಿ ಸೇರಿವೆ.

> **ಧರ್ಮವನ್ನು ಪ್ರತಿಪಾದಿಸುವ, ಅನುಸರಿಸುವ ಮತ್ತು ಪ್ರಚಾರ ಮಾಡುವ ಈ ಮೂಲಭೂತ ಹಕ್ಕಿನಲ್ಲೇ ಸಹಜವಾಗಿ ಒಂದು ನಿರ್ದಿಷ್ಟ ವೈರುಧ್ಯವಿದೆ. ಈ ವೈರುಧ್ಯವನ್ನು ಪರಿಹರಿಸಿದಾಗಲೇ ಅದು ಮನಸ್ಸಾಕ್ಷಿಯ ಸ್ವಾತಂತ್ರ್ಯ ಕುರಿತಂತೆ ಸಮಾಜದಲ್ಲಿ ಸರಿಯಾದ ಬೆಳವಣಿಗೆ ತರುತ್ತದೆ.**

ನಿರ್ದಿಷ್ಟವಾಗಿ ನಾವು ಮುಖ್ಯ ಪ್ರಶ್ನೆಯಾದ 'ಮತಾಂತರ' ಕುರಿತಾದ ಕಲಮು 25(1)ನ್ನು ನೋಡೋಣ. ಅದು ಹೀಗೆ ಹೇಳುತ್ತದೆ: ಸಾರ್ವಜನಿಕ ವ್ಯವಸ್ಥೆ, ನೈತಿಕತೆ ಮತ್ತು ಆರೋಗ್ಯ ಹಾಗೂ ಈ ಭಾಗದ ಇತರ ಅಂಶಗಳಿಗೊಳಪಟ್ಟು, ಎಲ್ಲಾ ವ್ಯಕ್ತಿಗಳು ಮನಸ್ಸಾಕ್ಷಿಯ ಸ್ವಾತಂತ್ರ್ಯ ಮತ್ತು ಧರ್ಮವನ್ನು ಪ್ರತಿಪಾದಿಸುವ, ಅನುಸರಿಸುವ ಮತ್ತು ಪ್ರಚಾರ ಮಾಡುವ ಸ್ವಾತಂತ್ರ್ಯವನ್ನು ಸಮಾನವಾಗಿ ಹೊಂದಿದ್ದಾರೆ.

ಮುಸ್ಲಿಮರಿಗೆ ಮತ್ತು ಹಿಂದುಗಳಿಗೆ ಪ್ರತ್ಯೇಕವಾದ ರಾಷ್ಟ್ರಗಳು ಎಂಬ "ಎರಡು-ರಾಷ್ಟ್ರ" ಸಿದ್ಧಾಂತಕ್ಕೆ ವಿರುದ್ಧವಾಗಿ ಭಾರತ ಒಂದು ರಾಷ್ಟ್ರವಾಗಿ ರಚನೆಗೊಳ್ಳಲು ಮೂಲತಃ ಅದು ಧಾರ್ಮಿಕ ಸ್ವಾತಂತ್ರ್ಯಗಳ ಮೂಲಭೂತ ಹಕ್ಕುಗಳನ್ನು ಒದಗಿಸಬೇಕಾಗಿತ್ತು. ಧಾರ್ಮಿಕ ಸ್ವಾತಂತ್ರ್ಯಗಳಿಗೆ ಸಂಬಂಧಪಟ್ಟ ಅಂಶಗಳು ಸಾರ್ವತ್ರಿಕ ಮಾತ್ರವಲ್ಲ, ಜಾತ್ಯಾತೀತ ಸತ್ವವುಳ್ಳವುಗಳು. ಅದು ಯಾವುದೇ ವ್ಯಕ್ತಿಗೆ (ಅಂದರೆ ಭಾರತದ ಪದರದೇಶದೊಳಗೆ ಒಬ್ಬ ನಾಗರಿಕನಲ್ಲದವನು ಕೂಡಾ) ಮನಸ್ಸಾಕ್ಷಿಯ ಸ್ವಾತಂತ್ರ್ಯದ ಹಕ್ಕು ಮತ್ತು ಧರ್ಮವನ್ನು ಪ್ರತಿಪಾದಿಸುವ, ಅನುಸರಿಸುವ ಮತ್ತು ಪ್ರಚಾರ ಮಾಡುವ ಸ್ವಾತಂತ್ರ್ಯದ ಭರವಸೆ ಕೊಡುತ್ತದೆ. ಅದರ ಆಶಯವೇ ಎಲ್ಲಾ ವ್ಯಕ್ತಿಗಳ ಧರ್ಮಗಳ ಸ್ವಾತಂತ್ರ್ಯವನ್ನು ರಕ್ಷಿಸುವುದು.

ಧರ್ಮವನ್ನು ಪ್ರತಿಪಾದಿಸುವ, ಅನುಸರಿಸುವ ಮತ್ತು ಪ್ರಚಾರ ಮಾಡುವ ಈ ಮೂಲಭೂತ ಹಕ್ಕಿನಲ್ಲೇ ಸಹಜವಾಗಿ ಒಂದು ನಿರ್ದಿಷ್ಟ ವೈರುಧ್ಯವಿದೆ. ಈ ವೈರುಧ್ಯವನ್ನು ಪರಿಹರಿಸಿದಾಗಲೇ ಅದು ಮನಸ್ಸಾಕ್ಷಿಯ ಸ್ವಾತಂತ್ರ್ಯ ಕುರಿತಂತೆ ಸಮಾಜದಲ್ಲಿ ಸರಿಯಾದ ಬೆಳವಣಿಗೆ ತರುತ್ತದೆ. ಒಂದು ಮತನಂಬಿಕೆಯನ್ನು ಪ್ರತಿಪಾದಿಸುವುದು ಮತ್ತು ಪ್ರಚಾರ ಮಾಡುವುದು ಎಂದರೆ ಯಾವುದೇ ಎರಡು ಅಥವಾ ಹೆಚ್ಚು ಮತನಂಬಿಕೆಗಳನ್ನು ಬದಲಿಸುವ ಹಕ್ಕುಗಳೂ ಅದರಲ್ಲಿ ಸೇರಿರುತ್ತವೆ. ಮತ ನಂಬಿಕೆ, ಆಚರಣೆ ಮತ್ತು ಪ್ರತಿಪಾದನೆಯಲ್ಲಿ ಬದಲಾವಣೆಯೇ 'ಮತಾಂತರ'. ಒಂದು ನಿರ್ದಿಷ್ಟ ಧರ್ಮವನ್ನು 'ಅನುಸರಿಸಲು' ಹೇಗೆ ಬಲವಂತ ಇಲ್ಲವೋ, ಹಾಗೆಯೇ ಬೇರೆ ಯಾವುದೇ ಧರ್ಮಕ್ಕೆ ಬದಲಾವಣೆಯಲ್ಲೂ ಬಲವಂತ ಇರಬಾರದು. ಇಲ್ಲಿರುವ ವೈರುಧ್ಯವೆಂದರೆ ಮತಾಂತರದ ಹಕ್ಕು ಮತ್ತು ಮತಾಂತರದ ವಿರುದ್ಧದ ಹಕ್ಕು ಎರಡೂ ಜತೆಜತೆಯಾಗಿಯೇ ಇರದಿದ್ದರೆ ಈ ಸ್ವಾತಂತ್ರ್ಯ ಇರಲಾರದು. ಇದಕ್ಕೆ ಅಂತಿಮ ಪರಿಹಾರವೆಂದರೆ ಯಾವುದೇ ಧಾರ್ಮಿಕ ನಂಬಿಕೆ, ಆಚರಣೆ ಮತ್ತು ಪ್ರತಿಪಾದನೆಯಿಂದಲೇ ಸ್ವಾತಂತ್ರ್ಯ. ಇದರರ್ಥ, ಯಾವುದೇ ಧರ್ಮವನ್ನು ಅನುಸರಿಸದಿರುವ ಮತ್ತು ಸಹಜವಾಗಿಯೇ ಯಾವುದೇ ಧರ್ಮವನ್ನು ಅನುಸರಿಸದಿರುವುದನ್ನು ಪ್ರತಿಪಾದಿಸುವ ಹಕ್ಕು. ಇದರ ಸಾರಾಂಶವೆಂದರೆ ನಾವು ಎಲ್ಲಾ ಧರ್ಮಗಳಿಗೂ ವಿರುದ್ಧವಾಗಿರಬಹುದು. ಹೀಗೆ ಈ ಮೂಲಭೂತ ಹಕ್ಕಿನಲ್ಲಿ ಯಾವುದೇ ಧರ್ಮವನ್ನು ಅನುಸರಿಸದಿರುವ ಅಥವಾ ಎಲ್ಲ ಧರ್ಮಗಳ ವಿರುದ್ಧ ಪ್ರತಿಪಾದಿಸುವ ಹಕ್ಕು ಸೇರಿರುತ್ತದೆ.

ಕಲಮು 25(1)ರಲ್ಲಿ ವಿಧಿಸಿರುವ ಶರತ್ತುಗಳು ಸ್ಪಷ್ಟವಾಗಿವೆ: ಈ ಹಕ್ಕು ಸಾರ್ವಜನಿಕ ವ್ಯವಸ್ಥೆಗೆ ಒಳಪಟ್ಟಿರುತ್ತದೆ.

'ಬಲವಂತದ ಮತಾಂತರ'

ಹಿಂದುತ್ವ ಶಕ್ತಿಗಳು ಮತಾಂತರಗಳು ಹಿಂಸಾಚಾರ ಎಂದು ಬಿಂಬಿಸಿ ಅದು ಸಾರ್ವಜನಿಕ ವ್ಯವಸ್ಥೆಗೆ ಒಂದು ಬೆದರಿಕೆ ಎಂದು ಹೇಳುತ್ತಾರೆ. ಈ ಮೂಲಕ ಅವರು ತಮ್ಮ ಪ್ರತಿ-ಹಿಂಸಾಚಾರವನ್ನು ಸಮರ್ಥಿಸಿಕೊಳ್ಳುತ್ತಾರೆ. ಹೀಗೆ ಸಾರ್ವಜನಿಕ ವ್ಯವಸ್ಥೆಯನ್ನು ಕಾಪಾಡುವ ಹಕ್ಕನ್ನು ತಮ್ಮ ಕೈಗೆ ತಗೊಂಡು ಆ ಕ್ರಿಯೆಯಿಂದಲೇ ಅವರು ಅವ್ಯವಸ್ಥೆ ಸೃಷ್ಟಿಸುತ್ತಾರೆ. ಒರಿಸ್ಸಾ ಮತ್ತು ಕರ್ನಾಟಕದಲ್ಲಿ 'ಬಲವಂತದ' ಮತಾಂತರದ ಆರೋಪದ ಮೇಲೆ ಅದನ್ನು ಎದುರಿಸುವ ಹೆಸರಿನಲ್ಲಿ ನಡೆಯುತ್ತಿರುವುದು ಇದೇ. 'ಬಲವಂತದ ಮತಾಂತರ' ಎನ್ನುವುದೇ ಭಾರತದ ಈಗಿನ ಸನ್ನಿವೇಶದಲ್ಲಿ ಒಂದು ಕಲ್ಪನೆ.

ಪ್ರಭುತ್ವದ ಪೋಷಣೆಯಲ್ಲಿ ಬಲವಂತದ ಮತಾಂತರಗಳು ಹೇರಳವಾಗಿದ್ದವು, ವಿಶೇಷವಾಗಿ ಯುರೋಪಿನಲ್ಲಿ ಕ್ರೈಸ್ತ ಧರ್ಮವನ್ನು ಪ್ರಭುತ್ವದ ಧರ್ಮವಾಗಿ ಅಂಗೀಕರಿಸಿದಾಗ. ಅದು ಯುರೋಪಿನಲ್ಲಿ ಮಧ್ಯಯುಗದ ಅವಧಿಯಾದ್ಯಂತ, ಅಮೆರಿಕಾ, ಆಫ್ರಿಕಾ ಮತ್ತು ಏಷ್ಯಾದಲ್ಲಿ ಆಧುನಿಕ ಯುಗದವರೆಗೂ ಮುಂದುವರೆಯಿತು. ಇದನ್ನು ವಿವರಿಸಲು ಇತಿಹಾಸದ ಹಲವು





ಬುದ್ಧ, ಬಸವ, ಅಂಬೇಡ್ಕರ್ ಇವರೆಲ್ಲಾ ಮತಾಂತರಿಗಳೇ ಅಲ್ಲವೇ?

‘ಮತಾಂತರಕ್ಕೆ ಪ್ರಾಚೀನವಾದ ಇತಿಹಾಸವೇ ಇದೆ. ಜಗತ್ತಿನ ಎಲ್ಲ ಧರ್ಮಗಳು ಬೆಳೆದಿರುವುದು ಮತಾಂತರದಿಂದಲೇ. ಇದಕ್ಕೆ ಯಾರ ಅಪ್ಪಣೆಯ ಅಗತ್ಯವಿಲ್ಲ’

‘ನಿಜವಾಗಿ ಹೇಳಬೇಕೆಂದರೆ ಹಿಂದೂ ಧರ್ಮದ ಕಲ್ಪನೆಯೇ ಆಕ್ರಮಣಶೀಲ ಮತಾಂತರ. ವರ್ಣಾಶ್ರಮ ಮತ್ತು ಕರ್ಮ ಸಿದ್ಧಾಂತದಿಂದ ಶೂದ್ರರ ಮೇಲೆ ನಿರಂತರ ಆಕ್ರಮಣವನ್ನು ಈ ಧರ್ಮ ಮಾಡುತ್ತಿದೆ’

ವಿಮರ್ಶಕ **ಡಾ.ಕೆ.ಮರುಳಸಿದ್ದಪ್ಪ**



ಉದಾಹರಣೆಗಳನ್ನು ಕೊಡಬಹುದು. ಇಲ್ಲಿ ಕೆಲವನ್ನು ನೋಡೋಣ. ಯುರೋಪಿನಾದ್ಯಂತ ‘ಪೇಗನ್’ (ಅಸಂಸ್ಕೃತರು ಎಂದರ್ಥ) ಎನಿಸಿಕೊಂಡವರನ್ನು ಕ್ರೈಸ್ತ ಧರ್ಮಕ್ಕೆ ಪರಿವರ್ತಿಸಲು ಬಲಪ್ರಯೋಗ ಮಾಡಲಾಯಿತು. ತಮ್ಮದೇ ದೇವರುಗಳನ್ನು (ಪ್ಯಾಂಥಿಯನ್) ಹೊಂದಿದ್ದ ಗ್ರೀಕರಲ್ಲಿ ಇದು ಎದ್ದು ಕಾಣುತ್ತದೆ. 1501ರಲ್ಲಿ ಗ್ರೆನಡಾದ ಆಳರಸರು ಅಲ್ಲಿನ ಮುಸ್ಲಿಮರು ಕ್ರೈಸ್ತ ಧರ್ಮಕ್ಕೆ ಸೇರಬೇಕು, ಇಲ್ಲವೇ ವಲಸೆ ಹೋಗಬೇಕು ಎಂದು ಬಲವಂತ ಮಾಡಿದರು. ಬಹುಪಾಲು ಮಂದಿ ಮತಾಂತರ ಹೊಂದಿದರು, ಆದರೆ ಅದು ಮೇಲ್ನೋಟಕ್ಕಷ್ಟೇ, ಗುಪ್ತವಾಗಿ ಅವರು ಇಸ್ಲಾಂ ಧರ್ಮವನ್ನೇ ಅನುಸರಿಸಿದರು ಎಂದು ಇತಿಹಾಸದಲ್ಲಿ ದಾಖಲಾಗಿದೆ. ಕ್ಯಾಥೊಲಿಕ್ ಧರ್ಮ ತಮ್ಮ ನಂಬಿಕೆಯನ್ನು ಅನುಸರಿಸಲು ನಿರಾಕರಿಸಿದ ಹಲವರನ್ನು ಸುಡುಗಂಬಕ್ಕೇರಿಸಿ ಸುಟ್ಟು ಹಾಕುವ ಕೆಲಸ ಮಾಡಿತ್ತು. ಹೀಗೆ ಬಲಿಯಾದವರಲ್ಲಿ ಕ್ರೈಸ್ತ ಧರ್ಮವನ್ನೇ ಅನುಸರಿಸುವ, ಆದರೆ ಕ್ಯಾಥೊಲಿಕ್ ಆಚರಣೆಗಳನ್ನು ಮಾಡದ ಪ್ರಾಟೆಸ್ಟೆಂಟರು ಮತ್ತು ಬೈಬಲಿನಲ್ಲಿ ಹೇಳಿದ್ದು ಮಾತ್ರ ಸರಿ ಎಂದು ಒಪ್ಪದ ವಿಜ್ಞಾನಿಗಳೂ ಇದ್ದಾರೆ. ಇಸ್ಲಾಂ ಕೂಡಾ ಬಲವಂತದ ಮತಾಂತರ ನಡೆಸಿತು.

ಧರ್ಮಪ್ರಚಾರ, ವಿಶೇಷವಾಗಿ ಕ್ರೈಸ್ತರಿಂದ, ಧರ್ಮ ಪರಿವರ್ತನೆಗಳು, ಸುವಾರ್ತಾ (ಇವೇಂಜಲಿಕಲ್) ಮಿಶನ್‌ಗಳು, ಬಾಪ್ಟಿಸ್ಟ್ ಕ್ರಿಶ್ಚಿಯನ್ ಮಿಶನ್‌ಗಳು ಇತ್ಯಾದಿಗಳ ಮೂಲಕ ಜಗತ್ತಿನಾದ್ಯಂತ ಸಕ್ರಿಯವಾಗಿ ಮುಂದುವರೆಯಿತು. ಭಾರತವೂ ಇದಕ್ಕೆ ಅಪವಾದವೇನಲ್ಲ. ಭಾರತದಲ್ಲಿ, ಒಟ್ಟಾರೆಯಾಗಿ ಹಿಂದೂ ಧರ್ಮ, ನಿರ್ದಿಷ್ಟವಾಗಿ ಹಿಂದುತ್ವ ಶಕ್ತಿಗಳು ಕಟ್ಟುನಿಟ್ಟಾಗಿ ಅನುಸರಿಸುವ ವರ್ಣ-ಜಾತಿ ವ್ಯವಸ್ಥೆಯಡಿ ದಮನಕ್ಕೊಳಗಾದ ಜನಗಳ ಸಂಖ್ಯೆ ಅಪಾರವಾಗಿದೆ. ಧರ್ಮದ ಒಳಗೇ ಅಸಮಾನತೆಯ ವರ್ತನೆ ಸುಲಭವಾಗಿಯೇ ಧರ್ಮ ಪರಿವರ್ತನೆಗೆ ಅವಕಾಶ ನಿರ್ಮಿಸುತ್ತದೆ. ಆದರಿಂದಾಗಿ ಮಿಶನರಿಗಳು ಅಂತಹ ಕ್ಷೇತ್ರಗಳಲ್ಲಿ ಸಕ್ರಿಯರಾಗಿರುತ್ತಾರೆ.

ಭಾರತದಲ್ಲಿ ಮತಾಂತರ

ಭಾರತದಲ್ಲಿ ಪ್ರಾಚೀನ ಮತ್ತು ಮಧ್ಯಯುಗದಲ್ಲಿಯೇ ‘ಮತಾಂತರ’ಗಳು ಆಚರಣೆಯಲ್ಲಿದ್ದವು. ಗಂಗಾ ಬಯಲಿನಲ್ಲಿ ಬುಡಕಟ್ಟು ಜನಗಳ ‘ಗಣತಂತ್ರ’ಗಳಿಗೆ ಎದುರಾಗಿ ವರ್ಣ-ಜಾತಿಯ ಮುನ್ನಡೆ ಒಂದು ರೀತಿಯ ಮತಾಂತರವೇ. ಈ ವಿಜಯ ಯಾತ್ರೆಯ ಯುದ್ಧಗಳಲ್ಲಿನ ಬಲಪ್ರಯೋಗ ಅಶೋಕ ಸಾಮ್ರಾಟ ಶಾಂತಿ ಮತ್ತು ಧರ್ಮಪ್ರಚಾರದ ಬೌದ್ಧ ವಿಧಾನವನ್ನು ಅಂಗೀಕರಿಸುವಂತೆ ಮಾಡಿತು. ವರ್ಣ-ಜಾತಿ ವ್ಯವಸ್ಥೆಯ ಶಕ್ತಿಗಳು ಸಂಘರ್ಷಕ್ಕಿಳಿದದ್ದು ಬುಡಕಟ್ಟು ಜನಗಳ ವಿರುದ್ಧ ಮಾತ್ರವೇ ಅಲ್ಲ. ಭಾರತದಲ್ಲಿ ಆಚರಣೆಯಲ್ಲಿದ್ದ ಬೌದ್ಧ, ಜೈನ ಮತ್ತು ಶೈವ ಪಂಥಗಳೂ ಅವರ ಕೊಡಲಿಯೇಟುಗಳನ್ನು ಎದುರಿಸಬೇಕಾಯಿತು. ಆದಿಶಂಕರರಿಂದ ಆರಂಭಿಸಿ ಶಂಕರಾಚಾರ್ಯರುಗಳಿಂದ ದೊಡ್ಡ ಪ್ರಮಾಣದಲ್ಲಿ ವರ್ಣ-ಜಾತಿಯ ವ್ಯವಸ್ಥೆಯ ಮೂಲಕ ಮತಾಂತರಗಳು ನಡೆದವು. ಶಂಕರ ಮತ್ತು ಅವರ ಅನುಯಾಯಿಗಳು ಈ ಪ್ರತ್ಯೇಕ ಧಾರ್ಮಿಕ ಗುಂಪುಗಳು ಎಷ್ಟರ ಮಟ್ಟಿಗೆ ಹಿಂದೂ ಸಂಪ್ರದಾಯಗಳನ್ನು ಅಂಗೀಕರಿಸುವಂತೆ ಮತ್ತು ಜಾತಿ ವ್ಯವಸ್ಥೆಯುಲ್ಲಿ ಒಳಗೊಳ್ಳುವಂತೆ ಮಾಡಿದರು ಎಂಬುದನ್ನೇ ಇಂದು ಹಿಂದುತ್ವ ಶಕ್ತಿಗಳು “ಪಂಥ ನಿರಪೇಕ್ಷತೆ” ಎಂದು ಪ್ರಸ್ತುತ ಪಡಿಸುತ್ತಾರೆ. ಯೆಹೂದ್ಯ, ಅರಬ್, ಅಸ್ಸೀರಿಯನ್ ಮುಂತಾದ ಸಿಮೆಟಿಕ್ ಜನಗಳ ಧರ್ಮಗಳು ಬರುವವರೆಗೆ ಭಾರತದಲ್ಲಿ ಯಾವುದೆ “ಪಂಥ”ದ ಪರ ಅಥವಾ ವಿರುದ್ಧ ಬಲವಂತವಿರಲಿಲ್ಲ ಎಂದು ಬಿಂಬಿಸಲು ಅವರು ಪ್ರಯತ್ನಿಸುತ್ತಾರೆ. ಆದರೆ ಇದು ನಿಜವಲ್ಲ. ಬಸವಣ್ಣನವರ ಉದಾಹರಣೆಯನ್ನು ತೆಗೆದುಕೊಳ್ಳೋಣ. ಬ್ರಾಹ್ಮಣನಾಗಿ ಹುಟ್ಟಿ ಬೆಳೆದ ಆತ ಸನಾತನ ಧರ್ಮದ ಆಚರಣೆಗಳ ವಿರುದ್ಧ ಬಂಡೆದ್ದು ಶೈವ ಮತವನ್ನು ಅಂಗೀಕರಿಸಿದರು. ಅದು ಮತಾಂತರವಲ್ಲವೇ, 12ನೇ ಶತಮಾನದ ಭಾರತೀಯ ಸಾಮಾಜಿಕ ಪರಿಸರದಲ್ಲಿ ಅದಕ್ಕೆ ಅವಕಾಶವಿತ್ತಲ್ಲವೇ? ಬಸವೇಶ್ವರರು ಪಟ್ಟಭದ್ರ ಹಿತಾಸಕ್ತಿಗಳಿಂದ ಬೆದರಿಕೆಗಳನ್ನು, ಎಷ್ಟೊಂದು ಕಷ್ಟ-ಕಾರ್ಪಣ್ಯಗಳನ್ನು ಎದುರಿಸಬೇಕಾಯಿತು ಎಂಬ ಸಂಗತಿ ಆಗಿನ ಭಾರತದಲ್ಲಿ ಇನ್ನೊಂದು ನಂಬಿಕೆಗೆ ‘ಮತಾಂತರ’ಗೊಳ್ಳುವುದು ಸುಲಭದ ಕೆಲಸವಾಗಿರಲಿಲ್ಲ ಎಂಬುದನ್ನು ತೋರಿಸುತ್ತದೆ.

ಹಿಂದುತ್ವ ಶಕ್ತಿಗಳು ಮತಾಂತರಗಳು ಹಿಂಸಾಚಾರ ಎಂದು ಬಿಂಬಿಸಿ ಅದು ಸಾರ್ವಜನಿಕ ವ್ಯವಸ್ಥೆಗೆ ಒಂದು ಬೆದರಿಕೆ ಎಂದು ಹೇಳುತ್ತಾರೆ. ಈ ಮೂಲಕ ಅವರು ತಮ್ಮ ಪ್ರತಿ-ಹಿಂಸಾಚಾರವನ್ನು ಸಮರ್ಥಿಸಿಕೊಳ್ಳುತ್ತಾರೆ. ಹೀಗೆ ಸಾರ್ವಜನಿಕ ವ್ಯವಸ್ಥೆಯನ್ನು ಕಾಪಾಡುವ ಹಕ್ಕನ್ನು ತಮ್ಮ ಕೈಗೆ ತಗೊಂಡು ಆ ಕ್ರಿಯೆಯಿಂದಲೇ ಅವರು ಅವ್ಯವಸ್ಥೆ ಸೃಷ್ಟಿಸುತ್ತಾರೆ. ಒರಿಸ್ಸಾ ಮತ್ತು ಕರ್ನಾಟಕದಲ್ಲಿ 'ಬಲವಂತದ' ಮತಾಂತರದ ಆರೋಪದ ಮೇಲೆ ಅದನ್ನು ಎದುರಿಸುವ ಹೆಸರಿನಲ್ಲಿ ನಡೆಯುತ್ತಿರುವುದು ಇದೇ.

ಲಿಂಗಾಯತ ಧರ್ಮ ಎಲ್ಲಾ ವೈದಿಕ ಆಚರಣೆಗಳ ವಿರುದ್ಧ ಮೂಡಿ ಬಂದರೂ, ಈಗಿನ ನಮ್ಮ ಲಿಂಗಾಯತ ಮುಖ್ಯಮಂತ್ರಿ ವೈದಿಕ ಯಜ್ಞ-ಯಾಗ ಇತ್ಯಾದಿಗಳನ್ನು ನಡೆಸುತ್ತಾರೆ. ಇದು ಶೈವ ಧರ್ಮಕ್ಕೆ ವಿರುದ್ಧವಾದ ವೈದಿಕ ಧರ್ಮದ ಆಚರಣೆಯೂ ಸೇರಿದಂತೆ ಯಾವುದೇ ಆಚರಣೆಯನ್ನು ಅನುಸರಿಸುವ ತನ್ನ ಹಕ್ಕನ್ನು ಅವರು ಚಲಾಯಿಸಿದಂತಲ್ಲವೇ?

ಆಧುನಿಕ ಭಾರತಕ್ಕೆ ಬರೋಣ. ಸಂವಿಧಾನ ಭರವಸೆ ನೀಡಿರುವ ‘ಸೆಕ್ಯುಲರಿಸಂ’ನ್ನು ‘ಧರ್ಮನಿರಪೇಕ್ಷತೆ’ ಎಂದು ಭಾಷಾಂತರಿಸಲಾಗಿದೆ ಎಂಬುದನ್ನು ಗಮನಿಸಬಹುದು. ಹಿಂದುತ್ವ ಶಕ್ತಿಗಳು ಇದನ್ನು ‘ಪಂಥನಿರಪೇಕ್ಷತೆ’ ಎಂದು ಬದಲಿಸಬೇಕು ಎನ್ನುತ್ತವೆ. ಅಂದರೆ ಧರ್ಮವನ್ನು ಪ್ರಭುತ್ವದಿಂದ ಪ್ರತ್ಯೇಕಿಸಬಾರದು ಎಂಬ ಅವರ ಅಪೇಕ್ಷೆಯನ್ನು ಈ ಮೂಲಕ ತಿಳಿಸಲಾಗುತ್ತಿದೆ. ಆದರೆ ‘ಸೆಕ್ಯುಲರಿಸಂ’ ಅಥವಾ ಜಾತ್ಯಾತೀತತೆಯ ಮೂಲ ಆಧಾರವೇ ಇದು- ಅಂದರೆ ಧರ್ಮ ಮತ್ತು ಪ್ರಭುತ್ವ ಪ್ರತ್ಯೇಕವಾಗಿರಬೇಕು ಎಂಬುದು. ಅವರು ಧರ್ಮವನ್ನು ಅನ್ವಯಿಸಬೇಕು, ಅಂದರೆ ಸಮಾಜ ಮತ್ತು ಪ್ರಭುತ್ವ ಕೂಡಾ ‘ಧರ್ಮ ಅಪೇಕ್ಷಿತ’ವಾಗಿರಬೇಕು ಎಂಬುದು ಅವರ ಬಯಕೆ. ಪಂಥನಿರಪೇಕ್ಷತೆ ಎಂಬ ಪರಿಕಲ್ಪನೆಯ ಮೂಲಕ ಹಿಂದುತ್ವ ಶಕ್ತಿಗಳು ತಾವು ಹಿಂದುತ್ವ ಎನ್ನುವುದು ಮಾತ್ರ ಧರ್ಮ ಎನ್ನುತ್ತಾ, ಬೇರೆ ಎಲ್ಲಾ ಧರ್ಮಗಳನ್ನು ಅದರೊಳಗಿನ ಪಂಥಗಳಾಗಿ ಪರಿವರ್ತಿಸ ಬಯಸುತ್ತವೆ. ಈ ದಿಸೆಯಲ್ಲಿ ಅವರು ‘ಸರ್ವಧರ್ಮ ಸಮಭಾವ’ದ ಪರಿಕಲ್ಪನೆಯನ್ನು ಮುಂದಿಟ್ಟಿದ್ದಾರೆ- ಅದು ಕೂಡಾ ಅವರೆಲ್ಲಾ ಹಿಂದುತ್ವ ಶಕ್ತಿಗಳ ಆದೇಶಗಳನ್ನು ಪಾಲಿಸಿದ್ದಾರೆ. ಅಂದರೆ ಮತ್ತೆ ಅದೇ ‘ಪಂಥನಿರಪೇಕ್ಷತೆ’ಯ ತರ್ಕ..

‘ದೇಶೀ-ವಿದೇಶೀ’ ಧರ್ಮ

ಇದೇ ನಾಡಿನ ಧರ್ಮ ಎಂಬುದರ ಪರವೊ, ವಿರುದ್ಧವೋ ಎಂಬ ತರ್ಕವೇ ಸಿಮೆಟಿಕ್ ಧರ್ಮಗಳನ್ನು ಅನುಸರಿಸುತ್ತಿರುವ ಸಮುದಾಯಗಳ ವಿರುದ್ಧ ಬಲಪ್ರಯೋಗಿಸುತ್ತಿರುವ ಹಿಂದುತ್ವ ಶಕ್ತಿಗಳನ್ನು ಪೋಷಿಸುತ್ತಿದೆ. ಆ ಧರ್ಮಗಳನ್ನು ಅವು ಪರನಾಡುಗಳ ಅಥವ ‘ವಿದೇಶೀ’ ಧರ್ಮಗಳೆಂದು ಚಿತ್ರಿಸುತ್ತವೆ. ಯಾವುದೇ ಒಂದು ವಿಚಾರದ ಮೂಲ ಸ್ಥಳವನ್ನು ಯಾವುದೇ ಭೌಗೋಳಿಕ ಮಿತಿಗಳಲ್ಲಿ ಅರ್ಥೈಸಲಾಗದು. ಆಧುನಿಕ ವಿಜ್ಞಾನದ ನೀತಿಗಳು ಹೇಗೆ ಒಂದು ನಿರ್ದಿಷ್ಟ ಸಂಸ್ಕೃತಿಗೆ ಮಾತ್ರ ಸಂಬಂಧಪಟ್ಟಿರುವುದಿಲ್ಲವೋ, ಹಾಗೆಯೇ ಆಧ್ಯಾತ್ಮಿಕ ವಿಚಾರಗಳು ಕೂಡಾ ಒಂದು ಸಂಸ್ಕೃತಿಗೆ ಮಾತ್ರ ಸೀಮಿತವಾಗಿರುವುದಿಲ್ಲ. ವೇದಗಳು ರಚನೆಗೊಳ್ಳುತ್ತಿದ್ದಾಗ ಅದರ ರಚನೆಕಾರರು ಭಾರತದ ಭೌಗೋಳಿಕ ಮಿತಿಗಳ ಹೊರಗೆ ಇದ್ದರು ಎಂದು ಇತಿಹಾಸಕಾರರು ಮತ್ತು ಭಾಷಾತಜ್ಞರು ವಿವರಿಸುತ್ತಾರೆ. ಆದ್ದರಿಂದ ವೈದಿಕ ಧರ್ಮ ಈ ನಾಡಿನದಲ್ಲ ಎಂಬ ತರ್ಕ ಹೂಡಬೇಕಾಗಿಲ್ಲ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಯಾವುದೇ ವಿಚಾರ, ಅದು ಆಧ್ಯಾತ್ಮಿಕವಾಗಿರಬಹುದು ಅಥವಾ ಭೌತಿಕವಾಗಿರಬಹುದು, ಅದಕ್ಕೆ ಯಾವುದೇ ಭೌಗೋಳಿಕ ಮಿತಿಗಳಿರಲು ಸಾಧ್ಯವಿಲ್ಲ. ಈ ತರ್ಕಕ್ಕೆ ಎದುರಾಗಿ ಹಿಂದುತ್ವ ಶಕ್ತಿಗಳು ಆರ್ಯರ ಮೂಲ ಭಾರತದಲ್ಲೇ ಎಂಬ ಸಿದ್ಧಾಂತವನ್ನು ತೇಲಿಬಿಡುತ್ತಾರೆ, ಹೀಗೆ ಅವರು ದೇಶೀ ಧರ್ಮ ಮತ್ತು ವಿದೇಶೀ ಧರ್ಮದ ನಡುವಿನ ಸಂಘರ್ಷ ಎಂಬ ಪರಿಕಲ್ಪನೆಗೆ ಅಂಟಿಕೊಳ್ಳುತ್ತಾರೆ.

ಯೆಹೂದಿ, ಕ್ರೈಸ್ತ, ಇಸ್ಲಾಮ್ ಮುಂತಾದ ಸಿಮೆಟಿಕ್ ಧರ್ಮಗಳು ಎಂದು ಯಾವುದನ್ನು ಹೇಳುತ್ತಾರೋ, ಅವುಗಳೆಲ್ಲಾ ಮಧ್ಯ ಏಷ್ಯಾದಲ್ಲಿ, ಪ್ಯಾಲೆಸ್ತೇನಿಯ ಮತ್ತು ದಕ್ಷಿಣ ಅರೇಬಿಯಾದ ಸುತ್ತಲಿನ ಪ್ರದೇಶದಲ್ಲಿ ಮೂಡಿ ಬಂದವು ಎಂಬುದು ಸಾಬೀತಾಗಿರುವ ಸಂಗತಿ. ಕ್ರೈಸ್ತ ಧರ್ಮ ಮತ್ತು ಇಸ್ಲಾಮ್ ಧರ್ಮ ಒಂದೇ ಸ್ಥಳದಿಂದ ಬಂದವುಗಳಾದರೂ ಇವಕ್ಕಿಂತ ಮೊದಲಿದ್ದ ಯೆಹೂದಿ ಧರ್ಮದೊಂದಿಗೆ ಬಹಿರಂಗ ತಿಕ್ಕಾಟ ನಡೆಸಿದವು. ಯೆಹೂದಿಯರು ಸಾಮೂಹಿಕವಾಗಿ ಅಲ್ಲಿಂದ ಹೊರ ಹೊರಡಲಾರಂಭಿಸಿದರು. ಅದೇ ಮುಂದುವರೆದು ಅಂತಿಮವಾಗಿ ನಾಝಿಗಳಿಂದ ಯೆಹೂದ್ಯರ ಹತ್ಯಾಕಾಂಡದ ಒಂದು ಮಟ್ಟ ತಲುಪಿತು. ಈ ಕಿರುಕುಳದಿಂದ ಕೊನೆಗೆ ಇಸ್ರೇಲ್ ಸ್ಥಾಪನೆಗೊಂಡಿತು. ಇದೀಗ ಬಹುಪಾಲು ಇಸ್ಲಾಮಿನ ಅನುಯಾಯಿಗಳಾಗಿರುವ ಅರಬರೊಂದಿಗೆ ಅದು

ಪುಟ 12ಕ್ಕೆ

ಕಂಧಮಲ್ : ಹಿಂದೂ ಧರ್ಮಕ್ಕೆ ಕ್ರೈಸ್ತರು

ಫೂಲ್‌ಬನಿ (ಒರಿಸ್ಸಾ) : ಜೀವ ಮತ್ತು ಆಸ್ತಿಪಾಸ್ತಿ ಉಳಿಸಿಕೊಳ್ಳುವ ಸಲುವಾಗಿ ಕಂಧಮಲ್ ಜಿಲ್ಲೆಯ ಹಲವಾರು ಕ್ರೈಸ್ತರು ಹಿಂದೂ ಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದಾರೆ. ‘ನಿಮ್ಮ ಜೀವ ಮತ್ತು ಆಸ್ತಿ ಉಳಿಸಿಕೊಳ್ಳಬೇಕಿದ್ದರೆ ಹಿಂದೂ ಧರ್ಮಕ್ಕೆ ಮತಾಂತರಗೊಳ್ಳಿ’ ಎಂದು ಹಿಂದೂ ಗ್ರಾಮಸ್ಥರು ತಮ್ಮನ್ನು ಬಲವಂತಪಡಿಸುತ್ತಿರುವುದಾಗಿ 50ಕ್ಕೂ ಹೆಚ್ಚು ದೂರುಗಳು ಬಂದಿವೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಯಾವುದೇ ಬಲವಂತವಿಲ್ಲದೆ ಸ್ವತಃ ಹಿಂದೂ ಧರ್ಮಕ್ಕೆ ಮತಾಂತರ ಗೊಂಡಿರುವುದಾಗಿ 30ಕ್ಕೂ ಹೆಚ್ಚು ಜನ ಲಿಖಿತವಾಗಿ ಸರ್ಕಾರಕ್ಕೆ ತಿಳಿಸಿದ್ದಾರೆ. ಎಲ್ಲಾ ದೂರುಗಳ ಬಗ್ಗೆಯೂ ತನಿಖೆ ನಡೆಸಿ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅವರು ಮಾಹಿತಿ ನೀಡಿದ್ದಾರೆ.


‘600 ಕ್ಕೂ ಹೆಚ್ಚು ಜನರು ಬಲವಂತವಾಗಿ ಹಿಂದೂ ಧರ್ಮಕ್ಕೆ ಮತಾಂತರಗೊಂಡಿದ್ದಾರೆ’ ಎಂದು ಭಾರತೀಯ ಕ್ರಿಶ್ಚಿಯನ್ನರ ಜಾಗತಿಕ ಮಂಡಳಿ (ಜಿಸಿಐಸಿ) ಅಧ್ಯಕ್ಷ ಸಾಜನ್ ಕೆ.ಜಾರ್ಜ್ ಹೇಳಿದ್ದಾರೆ.

‘ಗ್ರಾಮಸ್ಥರು ನನ್ನ ತಲೆ ಬೋಳಿಸಿದರಲ್ಲದೆ ಸೆಗಣಿಯ ನೀರು ಕುಡಿಯುವಂತೆ ಬಲವಂತಪಡಿಸಿದರು’ ಎಂದು ಜಿಲ್ಲಾ ಕೇಂದ್ರದ ಪರಿಹಾರ ಶಿಬಿರದಲ್ಲಿರುವ ಸಂತ್ರಸ್ತರೊಬ್ಬರು ದೂರಿದ್ದಾರೆ.


- ಇದು ‘ಪ್ರಜಾವಾಣಿ’ಯಲ್ಲಿ ಕಂಡ ಸುದ್ದಿ

ಜನಶಕ್ತಿ ಕನ್ನಡ ವಾರಪತ್ರಿಕೆ

ನವೆಂಬರ್ 02, 2008



■ ಕೆ.ನೀಲಾ



'ಇಲ್ಲ ಎಪ್ಪತ್ನಾಲ್ಕು ಜನ ಮಹಿಳೆಯರಿಗೆ, ಕರಕುಶಲ ತರಬೇತಿ ಕೊಡ್ತೀವಿ. ಮುನ್ಸಿಪಾಲಿಟಿಯ ಯೋಜನೆ ಅದು ನಾವು ತಗೊಂಡಿವಿ. ಇದು ಎರಡನೇ ಬ್ಯಾಚ್ 'ಅಂದಾಗ ಖುಷಿಯೆನಿಸಿತು. ಜಿಂದಾಬಾದ್, ಹೋರಾಟಗಳೊಂದಿಗೆ ನಮ್ಮ ಹೆಣ್ಣು ಮಕ್ಕಳಿಗಾಗಿ ಆರ್ಥಿಕ ಸ್ವಾತಂತ್ರ?ದ ನೆರವಿಗೆ ಧಾವಿಸುತ್ತಿರುವುದು ಸಂತಸದ ಸಂಗತಿಯೇ ಹೌದು.

ನಿನ್ನ ಕೈಯಾಗ ಈ ಲೋಕ ಅರಳ್ಯಾದ....

'ಮತ್ತ ಓಡಾಟ ಸುರು ಮಾಡಿದಿ. ಆರೋಗ್ಯದ ಕಡಿಗಿ ಕಾಳಜಿ ಇರ್ಲಿ' ರಾಮ ಮತ್ತು ಮಗಳು ಆಗಾಗ ನೆನಪಿಸುತ್ತಿದ್ದರು. ಹುಮನಾಬಾದ್‌ನಲ್ಲಿ ಕರೆದ ಸಭೆಗೆ ಹೋಗಲೇಬೇಕಿತ್ತು. ಸಹಾಯಕ ಗುಂಪಿನ ಸಭೆ. ಅದೊಂದು ಮುಗಿಸಿ ಎಂದರಾಯ್ತು ಎಂದು ಭಾವಿಸಿ ಹೊರಟವಳಿಗೆ ಐವತ್ತಕ್ಕೂ ಹೆಚ್ಚು ಮಹಿಳೆಯರು ಸೇರಿದ್ದು ನೋಡಿ ಅಚ್ಚರಿಯಾಯ್ತು. 'ಜನವಾದಿ ಮೀಟಿಂಗ್‌ನೂ ಕರದಿರೇನು? ಅಂಬುಬಾಯಿಗೆ ಕೇಳಿದೆ. 'ಇಲ್ಲ ಎಪ್ಪತ್ನಾಲ್ಕು ಜನ ಮಹಿಳೆಯರಿಗೆ, ಕರಕುಶಲ ತರಬೇತಿ ಕೊಡ್ತೀವಿ. ಮುನ್ಸಿಪಾಲಿಟಿಯ ಯೋಜನೆ ಅದು ನಾವು ತಗೊಂಡಿವಿ. ಇದು ಎರಡನೇ ಬ್ಯಾಚ್ 'ಅಂದಾಗ ಖುಷಿಯೆನಿಸಿತು. ಜಿಂದಾಬಾದ್, ಹೋರಾಟಗಳೊಂದಿಗೆ ನಮ್ಮ ಹೆಣ್ಣು ಮಕ್ಕಳಿಗಾಗಿ ಆರ್ಥಿಕ ಸ್ವಾತಂತ್ರ?ದ ನೆರವಿಗೆ ಧಾವಿಸುತ್ತಿರುವುದು ಸಂತಸದ ಸಂಗತಿಯೇ ಹೌದು. ಇತರ ಸಂಗಾತಿಗಳು ಬರುವುದಕ್ಕೆ ಸಮಯವಿತ್ತು. ಆ ಹೆಣ್ಣು ಮಕ್ಕಳೊಂದಿಗೆ ಮಾತಿಗಿಳಿದೆ. ಏನು ಮಾತಾಡುವುದು? ಜನವಾದಿ ಸದಸ್ಯರಾಗಿರೇನು? ಹೋರಾಟಕ್ಕೆ ಬಂದಿರೇನು? ಅಮೇರಿಕಾದ ಬುಶ್‌ನ ನೀತಿ ಗೊತ್ತೇನು? ಅಂತೆಲ್ಲ ಕೇಳಲೇ..? ಊಹುಂ, ತುಂಬಾ ಹತ್ತಿರದ ಕಕ್ಷೆ ಹೆಣೆಯುತ್ತ ಉಳಿದ ಮಾತಿಗೆ ಬರೋಣ ಅನಿಸಿತು.

ಪಲ್ಯ ಏನ್ ಮಾಡೀರಿ?

ಈಸಾಬೇಗಂ ಮತ್ತು ಕಸ್ತೂರಿ ಅವರೆಲ್ಲರ ಟೀಚರ್. ಇವತ್ತ ಅಡಿಗಿ ಮಾಡಿಯೇ ಬಂದಿರೇನು? ಸುಮ್ನೆ ಕೇಳ್ದೆ. ಬಹಳಷ್ಟು ಜನ ಹೌದೆಂದರು. ಹುಡುಗಿಯರಲ್ಲಿ ಕೆಲವರು, 'ಅವ್ವ ಮಾಡ್ಯಾಳರಿ' ಅಂದರು 'ಪಲ್ಯ ಏನ್ ಮಾಡಿರಿ?' ... ಭೇಂಡಿ, ಬದನೆ, ಕುಂಬಳಕಾಯಿ, ಮಂಡಿಪಲ್ಯ ಅಂತ ಕೆಲವರು, ಬಹಳಷ್ಟು ಜನ 'ಗಟ್ಟಿಬ್ಯಾಳಿ, ಕಡಲಿ ಹಿಟ್ಟಿನ ಪಲ್ಯ ಅಂದರು. 'ಭೇಂಡಿ ಹ್ಯಾಂಗ ಕಿಲೋ'? ತಕ್ಷಣ ಮತ್ತು ದೂರು ದನಿಯಲ್ಲಿ ಈಸಾಬೇಗಂ ಹೇಳಿದಳು.... 'ಯಾಕ ಕೇಳ್ತೀ ಮೂವತ್ತೈದು ರೂಪಾಯಿ ಕಿಲೋ. ಟೊಮ್ಯಾಟೋನೂ ರೂ.ಮುವ್ವತ್ತೈದು, ಹೀರಿಕಾಯಿ ರೂ. ಮೂವತ್ತು, ಬದನಿಕಾಯಿ... 'ಅವಳ ಪಟ್ಟಿ ಬೆಳೆಯುತ್ತಿತ್ತು. ನಡುವಿಗೆ ಉಳಿದವರೆಲ್ಲ ನಾ. ಮುಂದು ತಾ ಮುಂದೆಂಬಂತೆ 'ದುಬಾರಿ' ಯ ರೇಟು ಹೇಳ ತೊಡಗಿದರು. 'ಬ್ಯಾಳಿ ಪಲ್ಯಮಾಡಬೇಕೆಂದರ ಅದನೂ ಪಿರೇ(ತುಟ್ಟಿ) ಆಗ್ಯಾವರಿ. ನಲವತ್ತೈದು ಐವತ್ತು ರೂಪಾಯಿ.' ಅವಳ ಕಣ್ಣಲ್ಲಿ ತುಂಬ ಆತಂಕವಿತ್ತು. 'ಉಣ್ಣುವ ಅನ್ನದ ಬೆಲೆ ಕಡಿಮೆ ಮಾಡ್ರೀ ಅಂತ ಕೇಳಿ ಹೋರಾಟ ಮಾಡಾಣಾ...? ಕೇಳ್ದೆ 'ಆಗ್ಲಿರೀ... ನಾವೆಲ್ಲ ಬರ್ತೀವಿ' ಎಲ್ಲರೂ ಉಲ್ಲಾಸದಿಂದ ದನಿಗೂಡಿಸಿದರು. 'ಹಂಗಾದರ ಸಂಘಕ್ಕೆ ಸದಸ್ಯ ಆಗ್ರಿ. ನಿಮ್ಮನಡುವಿಗೆ ಕ್ರಿಯಾಶೀಲ ಇರವ್ರೀಗೆ ಒಂಭತ್ತ ಮಂದಿಗಿ ಆರಸ್ರಿ. ಮತ್ತು ನಿಮ್ಮ-ನಿಮ್ಮ ಗಲ್ಲಿಯೊಳಗ ಏನೇನ ಸಮಸ್ಯೆ ಅವಾ ಅವೆಲ್ಲನೂ ಕೈಗಿ ತಗೊಂಡು ಹೋರಾಟ ಮಾಡಬಹುದು. ವಿವರಿಸತೊಡಗಿದಂತೆ ಅವರೆಲ್ಲರೂ ಖರೆ ಎಂಬ ಭಾವನೆ ವ್ಯಕ್ತಪಡಿಸುತ್ತಿದ್ದರು. ಈಗ ಇಷ್ಟು ಸಾಕು ಅನ್ನಿಸಿತು. 'ಮೂರ ತಿಂಗಳ್ನಾಗ ಏನೇನ್ ಕಲ್ತೀರಿ?' ಇದೊಂದು ಕೇಳುವಿಕೆ ಸಾಕಿತ್ತು. ರಾಶಿ ಬಟ್ಟೆಗಳು ಪ್ರತ್ಯಕ್ಷವಾದವು. ತರಹೇವಾರಿ ಚಿತ್ತಾರದ ಕಸೂತಿ ಹಾಕಿಸಿಕೊಂಡು ಮಿರುಗುವ ಬೆಡ್‌ಶೀಟ್, ಸೀರೆ, ಬಾಗಿಲು ಪರದೆಗಳು ನಮ್ಮ ಮುಂದೆ ಹರಡಿಕೊಂಡವು. ಬ್ಯೂಟಿ ಪಾರ್ಲರ್ ಕಲಿತ ಹುಡುಗಿ ಮುಖವರಳಿಸಿ ಎಲ್ಲವೂ ವಿವರಿಸಿದಳು. ಪರ್ಸು, ಬ್ಯಾಗುಗಳನ್ನು ಅಂದವಾಗಿ ತಯಾರಿಸಿದ್ದರು.

ಆ ಸಭೆಯಲ್ಲಿ ಸಂಭಾಷಣೆಯಿತ್ತು. ಚರ್ಚೆಯಿತ್ತು. ನಗುವಿತ್ತು. ಹೆಗ್ಗಳಿಕೆಯಿತ್ತು. ಸಂಘ ಕಟ್ಟುವ ಉಮೇದೂ ಮೆಲ್ಲಗೆ ಕಣ್ಬಿಡುತಿತ್ತು. ಅಷ್ಟೊತ್ತಿಗಾಗಲೇ ಹಿರಿಯ ಸಂಗಾತಿ ಶಿವರಾಜಪಾಟೀಲರು ಅದೇ ನಗುಮೊಗದಿಂದು ಒಂದು ವಿಶ್ ಮಾಡಿ ಎಂಟು ಜನ ಕಟ್ಟಡ ಕಾರ್ಮಿಕರೊಂದಿಗೆ ಹಾಜರಾದರು. ಸರ್ಕಾರದಿಂದ ಪಡೆದ ಹನ್ನೊಂದು ಸೌಲಭ್ಯಗಳ ಪಟ್ಟಿ ಅವರ ಕೈಯಲ್ಲಿತ್ತು. ಸಿಐಟಿಯು ನಿರಂತರ ಹೋರಾಡಿದ ಫಲವೇ ಆಗಿತ್ತು. ಈಗ ಸವಾಲಿರುವುದು ಕಟ್ಟಡ ಕಾರ್ಮಿಕರನ್ನು ಸರ್ಕಾರದ ಬೋರ್ಡಿಗೆ ಸದಸ್ಯರನ್ನಾಗಿ ಮಾಡಬೇಕು. ಫೀಜು ಕಟ್ಟಬೇಕು. ಇದೇ ಸಮಯದಲ್ಲಿ ಕಟ್ಟಡ ಕಾರ್ಮಿಕರ ಸಂಘಕ್ಕೂ ಸದಸ್ಯತ್ವ ತಗೋಬೇಕು. ಅವರು ತಮ್ಮ ಅನುಭವ ಹೇಳುತ್ತಿದ್ದರು. 'ಫೀಜ್ ಕೊಡಲಾರ್ದೆ, ತಮ್ಮ ಮೂರು ಫೋಟೋ ಕೊಟ್ಟು ನಾಪತ್ತೆ ಆಗ್ತಾರರಿ. ಮತ್ತಾವಗೋ ಕಂಡಾಗ, 'ಏನ್ರೀ ನಮ್ಕೆಲಸ ಏನ್ ಮಾಡಿದ್ರೀ? ಅಂತ ಕೇಳ್ತಾರ. ಏನ್ ಮಾಡಬೇಕು.? ಗೋಪಾಳ ಪ್ರಶ್ನೆಯಾಗಿತ್ತು. ಪ್ರಭು 'ನೀವು ಸಂಘಟನೆಯಿಂದ ತೀವ್ರ ಕೆಲಸಕ್ಕಿಳಿಯಬೇಕು. ಇಲ್ಲಾಂದ್ರ ಸುಳ್ಳು ಹೆಸರುಗಳು ಸರ್ಕಾರಿ ಬೋರ್ಡಿನಾಗ ದಾಖಲಾಗೋ ಸಾಧ್ಯತೆ ಇರ್ತದ...' ಎಂದು ಹೇಳಿದರು. ಹೆಸರು ನೊಂದಾಯಿಸಿದ ಕೂಡಲೇ ಸೌಲಭ್ಯಗಳು ಸಿಗುವುದಿಲ್ಲ. ಒಂದು ವರ್ಷದ ನಂತರ ಸೌಲಭ್ಯ ಪಡೆಯುವ ಅರ್ಹತೆ ಬರುತ್ತದೆ. ಈ ಅಂಶ ಕಾರ್ಮಿಕರಿಗೆ ಮನಮುಟ್ಟುವಂತೆ ತಿಳಿ ಹೇಳಬೇಕು. ಮುಖಂಡ ಸಂಗಾತಿಗಳು ತುಂಬಾ ಮನಮುಟ್ಟುವಂತೆ ತಿಳಿ ಹೇಳಬೇಕು. ಮುಖಂಡ ಸಂಗಾತಿಗಳು ತುಂಬಾ ಉತ್ಸಾಹಿಗಳಾಗಿದ್ದರು. ದೀರ್ಘ ಚರ್ಚೆಯ ನಂತರ ಕೊನೆಯಲ್ಲಿ ಒಂದು ದಿನದ ಕಾರ್ಯಾಗಾರ ನಡೆಸುವುದು ಮತ್ತು ಪದಾಧಿಕಾರಿಗಳೆಲ್ಲ ಎಲ್ಲ ಹಂತಗಳ ಕಟ್ಟಡ ಕಾರ್ಮಿಕರ ಸಭೆ ನಡೆಸಲು ತೀರ್ಮಾನಿಸಿದರು.

ಅದ್ಭುತ ಕಲಾವಿದರು

ಸಭೆ ಮುಗಿಸಿ ಬಸ್ಸು ಹತ್ತುವಾಗ ರಾತ್ರಿ ಕಾಲೂರಿ ಬಹಳ ಹೊತ್ತಾಗಿತ್ತು. ಕಟ್ಟಡ ಕಾರ್ಮಿಕರ ಕುರಿತು ಆಲೋಚನೆಗಳು ತಲೆಯಲ್ಲಿ ಗಿರಿಕಿ ಹೊಡೆಯುತ್ತಿದ್ದವು. ಕಟ್ಟಡ ಮಾತ್ರವಲ್ಲ ಸೇತುವೆ ಮತ್ತಿತರ ಪ್ರಕಾರಗಳ ನಿರ್ಮಾತೃಗಳಿವರು. ಅದ್ಭುತ ಕಲಾವಿದರು. ಈ ಸಮಾಜದ ನಾನಾ ನಮೂನೆಯ ಸೃಜನ ಕಲಾವಿದರುಗಳೆಲ್ಲರ ಕಾರಣವಾಗಿ ಚೆಂದದ ಕಟ್ಟಡಗಳು ರಾರಾಜಿಸುತ್ತಿವೆ. ಬರಿ ಕಲ್ಲು, ಮಣ್ಣು, ಉಸುಕು, ಸಿಮೆಂಟ್‌ನ್ನೆಲ್ಲ ಹದಗೊಳಿಸಿ, ಒಪ್ಪ ಓರಣದಿಂದ, ಇಂಚೂ ವ್ಯತ್ಯಾಸವಾಗದಂತೆ ಗೋಡೆಗಳೆಬ್ಬಿಸಿ, ಕುಸುರಿ ಕೆತ್ತನೆಯ ಬಾಗಿಲು ಕಿಟಕಿ ಜೋಡಿಸಿ, ಒಂದರ ಕಾರಣದಿಂದ ಇನ್ನೊಂದು ಅಂದ ಕಾಣುವ ಬಣ್ಣಗಳನ್ನು ಗೋಡೆಗೆ ಹೊದಿಸಿ ಅಬ್ಬಾ ಬಹುಶಃ ಜಗ ನಿರ್ಮಿಸಿದ ಬ್ರಹ್ಮರೇ ಇವರು! ಉಪ್ಪಾರ, ಬಡಿಗ, ಕಮ್ಮಾರರು ಅಲ್ಲದೆ ಉಳಿದೆಲ್ಲಾ ದಲಿತ ಶ್ರಮಜೀವಿ ಜನಾಂಗಗಳ ಅಂಗೈಯಲ್ಲಿ ಅರಳಿದೆ ಈ ಲೋಕ. ಆದರೆ ಸರ್ಕಾರ ಮತ್ತು ಸಮಾಜ ಇವರನ್ನು ಹೇಗೆ ನೋಡುತ್ತಿದೆ? ಶಕ್ತಿ ಇರುವವರೆಗೂ ದಣಿವರಿಯದೆ ದುಡಿಯುವ ಇವರು, ಮುಪ್ಪಾದ ಮೇಲೆ ಒಂದು ಕಪ್ಪು ಚಹಾ ಸಹ ಸಿಗದೆ ಪರದಾಡುವ ಸ್ಥಿತಿ ಇರುತ್ತದೆ. ಮೈಮುರಿಯ ದುಡಿತಕ್ಕೆ ಸಿಗುವ ಕೂಲಿ, ಮತ್ತೆ ಮರುದಿನಕ್ಕೆ ದುಡಿಯಲು ಬೇಕಾಗುವ ಶಕ್ತಿ ಸಂಚಯಿಸಿಕೊಳ್ಳಲು ಉಣ್ಣಬೇಕಾದ ಅನ್ನಕ್ಕೆ ಮಾತ್ರ ಸಾಕಾಗುತ್ತದೆ. ಮಿಕ್ಕುವುದೇನೂ ಇಲ್ಲ. ಇವರ ಶ್ರಮ ಕದ್ದ ಮಿಗುತಾಯದ ಹಣ ಇರುವುದು. ಉಳ್ಳವರ ಖಜಾನೆಯಲ್ಲಿ, ಇವರ ಜೇಬು ಖಾಲಿಯೇ.

ನಾವು ಒಳಗೆ ಅವ್ರು ಒಳಗೆ

ಇನ್ನು ಈ ಶ್ರೇಣೀಕೃತ ವ್ಯವಸ್ಥೆಯಲ್ಲಿ ಇವರ ಪಾಡು...? ಗಂಗಣ್ಣ ಹೇಳುತ್ತಿದ್ದ; 'ಅಕ್ಕಾರೇ, ಕಲ್ಲಿನ ಮ್ಯಾಲ ಕಲ್ಲಿಟ್ಟು ಮನೆಯೊಳಗಿನ ದೇವರ ಜಗುಲಿಯೂ ನಾವೇ ಮಾಡಿದ್ದೀವಿ. ಆದ್ರ ನಾವೇ ಕೂಡಿಸಿದ ಬಾಗಿಲ ಪೂಜೆ ಮಾಡಿ, ಒಳಗ ಹೋದ್ರಂದ್ರ, ನಾವು ಹೊರಗೆ ಅವರು ಒಳಗೆ. ಒಂದ್ಸಾರಿ ನಾನೇ ಕಟ್ಟಿಸಿದ ಅಡಿಗೆ ಮನಿ ಒಮ್ಮೆ ನೋಡಿ ಬರಾಣಾ ಅಂತ ಹೋದ್ರ ಆ ಬಿಲ್ಡಿಂಗ್ ವಾಸಿ ಜನ ಒಳಮನಿ ಅಲ್ಲ. ಹೊರಬಾಗಿಲ ದಾಟಿ ಒಳಗ ಹೆಜ್ಜೆ ಇಡಗೊಡಲಿಲ್ಲ. ಮೈಲಿಗಿ ಆಗ್ತದಂತ! ನೋಡ್ರೀ ಅಕ್ಕರೇ ನನ್ನ ಕೈ ಹೊಲಸ ಅವಾ ಏನು? ಮೈಲಗಿ ಅವಾ ಏನು?' ಅವನ ದನಿಯಲ್ಲಿ ನೋವು, ಆಕ್ರೋಶ ಇತ್ತು.

ನಾನು 'ಕತ್ತಲಲ್ಲೂ ಬಡಬಡಿಸಿದೆ. ಗಂಗಣ್ಣ ನಿನ್ನ ಕೈಯ್ಯಾಗ ಈ ಲೋಕ ಅರಳ್ಯಾದ.... ನಿನ ಕೈಗಳಷ್ಟು ಪವಿತ್ರ ಬ್ಯಾರೇ ಯಾವದದಾ ಹೇಳು...?

ಯಡಿಯೂಪ್ಪ ಸರ್ಕಾರ ಸರ್ವಂ ಭ್ರಷ್ಟಮಯಂ....

ಪುಟ 3 ರಿಂದ

ಗಳಿಕೆಯನ್ನು ಪತ್ತೆ ಹಚ್ಚಿದರು. ವಿತರಣೆಗಾಗಿ ಬಂಧನವೂ ಆಯಿತು. ಸರ್ಕಾರದ ಕಾನೂನಿನ ಪ್ರಕಾರ 42 ಗಂಟೆಗಳಾಗೂ ಹೆಚ್ಚಿನ ಅವಧಿಯಲ್ಲಿ ಅಧಿಕಾರಿಯೊಬ್ಬ ಬಂಧಿತನಾಗಿದ್ದರೆ ಆತನನ್ನು ಸರ್ಕಾರ ಅಮಾನತ್ತು ಮಾಡಬೇಕು. ಈತ ಅದಕ್ಕೂ ಹೆಚ್ಚಿನ ಕಾಲ ಬಂಧನದಲ್ಲಿದ್ದ. ಅಮಾನತು ಮಾಡಿ ಎಂದು ಬಹಿರಂಗವಾಗಿ ಲೋಕಾಯುಕ್ತರು ತಾಕೀತು ಮಾಡಿದರು ಸರ್ಕಾರ ಜಪ್ಪೆನ್ನುತ್ತಿಲ್ಲ. ಈ ಅಧಿಕಾರಿ ಸರ್ಕಾರಕ್ಕಿಂತ ದೊಡ್ಡವನೇ ಎಂದು ಲೋಕಾಯುಕ್ತರು ಅಸಮಧಾನ ತೋಡಿಕೊಂಡರೂ ಯಡಿಯೂಪ್ಪನವರಿಗೆ ತಾಗುತ್ತಿಲ್ಲ. ಬದಲಾಗಿ ಆ ಅಧಿಕಾರಿಯನ್ನು ಇನ್ನೊಂದು ಹುಲುಸಾದ ಮೇವು ಇರುವ ಜಾಗಕ್ಕೆ ವರ್ಗಾವಣೆ ಮಾಡಲಾಯಿತು. ಅಂದರೆ ಇಂತಹ ಭ್ರಷ್ಟರನ್ನು ಬಗಲಲ್ಲಿ ಇಟ್ಟು ಪೋಷಿಸುವ, ರಕ್ಷಿಸುವ ಯಡಿಯೂರಪ್ಪನವರಿಗೆ ನಾಡಿನ ಜನ ಛೀಮಾರಿ ಹಾಕಿ ಕೆಲಸ ಮಾಡಿಸಬೇಕಾಗಿದೆ. ಸಂವಿಧಾನದ ಮೇಲೆ ಸದಾ ದೇವರು ಧರ್ಮದ ಮೇಲೆ ಮಾತನಾಡುವ ಯಡಿಯೂರಪ್ಪರವರ ಸರ್ಕಾರ ಎಂತಹ ಅಪಾಯಕಾರಿ ನಿಲುವು ಹೊಂದಿದೆ ಎಂಬುದು ಗೊತ್ತಾಗುತ್ತದೆ.

ಇದು ಒಂದು ದಂಧೆ. ಸರ್ಕಾರದ ಅಕ್ರಮ ದಂಧೆ. ಮುಖ್ಯಮಂತ್ರಿ ಇತ್ಯಾದಿಗಳೇ ಇದರ ನಾಯಕರು ಹೀಗಿರುವಾಗಲೇ ಪೋಲೀಸ್ ಹಾಗೂ ನಾಗರೀಕ ಸೇವಾ ಅಧಿಕಾರಿಗಳ ವರ್ಗಾವಣೆಯಲ್ಲಿ ಭ್ರಷ್ಟಾಚಾರದ ಜೊತೆಗೆ ಆರ್.ಎಸ್.ಎಸ್.ನ ಕಾರ್ಯತಂತ್ರ ಅನುಸರಿಸಿ ಆಯಾಕಟ್ಟಿನ ಜಾಗಗಳಲ್ಲಿ ಆಯ್ದ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ.

ಇತ್ತೀಚಿಗೆ ರಾಜ್ಯದಲ್ಲಿ ಚರ್ಚ್‌ಗಳ ಮೇಲಿನ ಧಾಳಿ ಹಾಗೂ ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ನಡೆದ ಧಾಳಿಗಳಲ್ಲಿ ಇಂತಹ ವರ್ಗಾವಣೆಯ ಪರಿಣಾಮ ಕಂಡಿದೆ.

ಹಿಂದೆಂದು ಕಾಣದಷ್ಟು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಅಧಿಕಾರಿಗಳ ವರ್ಗಾವಣೆಯೂ ಮುಂದಿನ ದಿನಗಳಲ್ಲಿ ಕರ್ನಾಟಕಕ್ಕೆ ಎಂತಹ ಅನಾಹುತ ತರಲಿದೆಯೋ ಎಂಬ ಆತಂಕ ಸೃಷ್ಟಿಸಿದೆ. ಆದ್ದರಿಂದಲೇ ಸಂಘ ಪರಿವಾರದ ಕಟ್ಟಾಳುಗಳಾದ ಯಡಿಯೂರಪ್ಪ, ವಿ.ಎಸ್.ಆಚಾರ್ಯ ಇಬ್ಬರೇ ಈ ಅಕ್ರಮಗಳಲ್ಲಿ ತೊಡಗಿರುವುದು ಇನ್ನಷ್ಟು ಅನುಮಾನ ಆತಂಕ ಹೆಚ್ಚಿಸುತ್ತಿದೆ. ಇಂತಹವುಗಳಿಗೆ ಕಣ್ಣು ಮುಚ್ಚಿ ಕೂರ ಬೇಕೆ ಎಂಬುದು ನಮ್ಮೆದುರಿನ ಪ್ರಶ್ನೆ.

ಬಡವರ ಮನೆಯ ಹೆಣ್ಣುಮಕ್ಕಳನ್ನು ಉಂಡೆಸೆವ ಊಟದ ಎಲೆಯಂತೆ ಕಾಣುವ ಬಲಾಢ್ಯರ, ಕಾಮಾಂಧ ಪುಂಡರ ದೌರ್ಜನ್ಯಕ್ಕೆ ಬಾಳಿ ಬದುಕಬೇಕಾದ ಒಂದು ಮುಗ್ಧ ಜೀವ ಬಲಿಯಾಗಿ ಹೋಯಿತು.

ರೋಣ : ಕಾಮುಕರ ಕಾಟಕ್ಕೆ ಮುಗ್ಧೆ ಬಲಿ

ರವೀಂದ್ರ ಹೊನವಾಡ

ಗದಗ ಜಿಲ್ಲೆಯ ತಾಲ್ಲೂಕು ಕೇಂದ್ರ ರೋಣ ಪಟ್ಟಣದ ಶಿವಪೇಟೆಯ ಹೊರವಲಯದಲ್ಲಿ ಸಣ್ಣ ಗುಡಿಸಲೊಂದರಲ್ಲಿ ವಾಸವಾಗಿರುವ ಬಡ ಕುಟುಂಬ ಬುಡ್ನೇಸಾಬ ಬೆಟಗೇರಿಯದು, ಆತ ವಾಸಿಸುವ ಗುಡಿಸಲು ಮಳೆ ಬಂದರೆ ಸೋರುತ್ತದೆ; ಬಲವಾದ ಗಾಳಿ ಬೀಸಿದರೆ ತೂರಿ ಹೋಗುತ್ತದೆ. ಬುಡ್ನೇಸಾಬ ಹಾಗೂ ನೂರಜಹಾನ ದಂಪತಿಗಳಿಗೆ ಐದು ಜನ ಹೆಣ್ಣು ಮಕ್ಕಳು, ಮಕ್ಕಳು ಗುಡಿಸಲಿನ ಒಳಗೆ ಮಲಗಿದರೆ, ತಾಯ್ತಂದೆಯರು ಗುಡಿಸಲಿನ ಹೊರಗೆ ಮಲಗಬೇಕಾದಂಥ ಧಾರುಣ ಪರಿಸ್ಥಿತಿ.

ಬದುಕಿಗಾಗಿ ಬುಡ್ನೇಸಾಬ ಕುದುರೆ ಜಟಕಾ(ಟಾಂಗಾ) ಮಾಡಿಕೊಂಡು ದುಡಿಯುತ್ತಿದ್ದಾನೆ. ಜನ ಜಟಕಾ ಗಾಡಿಯನ್ನು ಮರೆಯುತ್ತಿರುವ ಈ ಸಂದರ್ಭದಲ್ಲಿ ಆತ ತನ್ನ ಜಟಕಾ ಗಾಡಿಯಲ್ಲಿ ತರಕಾರಿ, ಕಟ್ಟಿಗೆ, ಕಾಳು ಕಡಿಯಂತಹ ಇತರೆ ಸಾಮಾನು ಸರಕುಗಳನ್ನು ಸಾಗಾಣಿಕೆ ಮಾಡುತ್ತಾ ದಿನವೊಂದಕ್ಕೆ 50-60 ರೂಪಾಯಿಗಳನ್ನು ಗಳಿಸುತ್ತಾನೆ. ಆತನ ಹೆಂಡತಿ ನೂರಜಹಾನ ಕೃಷಿ-ಕೂಲಿಕಾರಳಾಗಿ ಹತ್ತಿಪ್ಪತ್ತು ರೂಪಾಯಿ ಗಳಿಸಿದರೂ ದಿನದ ಕೂಲಿ ಇಬ್ಬರದು ಸೇರಿಸಿದರೂ ನೂರು ರೂಪಾಯಿ ತಲುಪುವುದಿಲ್ಲ. ಬಂದಷ್ಟನ್ನೇ ಪಡೆದುಕೊಂಡು ಬಡತನದಲ್ಲೇ ಬದುಕು ನೂಕುತ್ತಾ, ಅದರಲ್ಲೇ ಒಂದಷ್ಟನ್ನು ಉಳಿಸಿಕೊಂಡು ಮತ್ತೆ ಸಾಲ-ಸೋಲ ಮಾಡಿಕೊಂಡು ಇಬ್ಬರು ಹಿರಿಯ ಹೆಣ್ಣು ಮಕ್ಕಳು ಮದುವೆ ಮಾಡಿ ಮುಗಿಸಿದ್ದಾರೆ.


ರೇಷ್ಮಾ ಭಾನು

ಬಡತನದ ಬದುಕಿನಲ್ಲಿದ್ದರೂ ಬುಡ್ನೇಸಾಬ-ನೂರಜಹಾನ ದಂಪತಿಗಳು ಉಳಿದ ಮೂವರು ಹೆಣ್ಣು ಮಕ್ಕಳಿಗೆ ಶಿಕ್ಷಣದ ದಾರಿ ತೋರಿಸಿದಾರೆ. ತಸ್ಲೀಮಭಾನು ಬಿ.ಕಾಂ. ಪ್ರಥಮ ವರ್ಷದಲ್ಲಿ, ಯಾಸ್ಮೀನಾಭಾನು ಬಿ.ಎ. ದ್ವಿತೀಯ ವರ್ಷದಲ್ಲಿ ಓದುತ್ತಿದ್ದರೆ, ಅವರ ಕೊನೆಯ ಹೆಣ್ಣು ಮಗಳು ರೇಷ್ಮಾಭಾನು ಪ್ರಥಮ ಪಿ.ಯು.ಸಿ.ಯಲ್ಲಿ ಓದುತ್ತಿದ್ದ ನತದೃಷ್ಟಳಾಗಿದ್ದಾಳೆ.

17 ವರ್ಷದ ರೇಷ್ಮಾಭಾನು ಬೆಟಗೇರಿ ಇದೇ ಅಕ್ಟೋಬರ್ 16 ರಂದು ನಾಲ್ವರು ಕಾಮಾಂಧರ ದೌರ್ಜನ್ಯಕ್ಕೆ ಈಡಾಗಿ ಆತ್ಮಹತ್ಯೆಗೊಳಗಾಗಿದ್ದಾಳೆ. ರೇಷ್ಮಾಭಾನು ಸ್ಥಳೀಯ ರಾಜೀವಗಾಂಧಿ ಶಿಕ್ಷಣ ಸಂಸ್ಥೆಯ ವೀರರಾಣಿ ಕಿತ್ತೂರು ಚೆನ್ನಮ್ಮ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿನಿ. ಆಟ-ಪಾಠಗಳಲ್ಲಿ ಮುಂದಿದ್ದ ಮುಗ್ಧೆಯಾಗಿದ್ದಳು. ಕಾಲೇಜು ಊರಿನಿಂದ ಸ್ವಲ್ಪ ದೂರದಲ್ಲಿಯೇ ಇದೆ. ಕಾಲೇಜಿಗೆ ನಡೆದುಕೊಂಡು ಒಟ್ಟಾಗಿ ಹೋಗುವಾಗ ವಿದ್ಯಾರ್ಥಿನಿಯರು ರೂಢಿಸಿಕೊಂಡಿದ್ದಾರಾದರೂ ದಾರಿ ಮಧ್ಯೆ ಪಡ್ಡೆ ಹುಡುಗರ ಕಾಟ ತಪ್ಪಿದ್ದಲ್ಲ. ವಿದ್ಯಾರ್ಥಿನಿ ಒಬ್ಬಂಟಿಯಾಗಿದ್ದರಂತೂ ಈ ಕಾಟ ಹೆಚ್ಚುವ ಸಂಭವವೇ ಇರುತ್ತದೆ. ಇಂಥ ಕಾಟಗಳನ್ನು ರೇಷ್ಮಾಭಾನು ನಿರಂತರ ಎದುರಿಸುತ್ತಲೇ ಕಾಲೇಜಿಗೆ ಹೋಗುವುದು, ಬರುವುದು ನಡೆದೇ ಇತ್ತು.


ನಡುದಾರಿಲಿ ಅಡ್ಡ ಬಂದರು

ಅಕ್ಟೋಬರ್ 16ರ ದಿನ ರೇಷ್ಮಾಭಾನು ಎಂದಿನಂತೆ ಕಾಲೇಜಿಗೆ ಹೋಗಿದ್ದಾಳೆ. ಹೋಗಿ ಬರುವಾಗ್ಗ ದಾರಿ ಮಧ್ಯದಲ್ಲಿ ಪಕ್ಕಾ ರೌಡಿಗಳಂತೆ ವರ್ತಿಸಿ ವಿದ್ಯಾರ್ಥಿನಿ ರೇಷ್ಮಾಭಾನುಳಿಗೆ ಈರಪ್ಪ ಗದಿಗೆಪ್ಪ ಕಿರೇಸೂರ, ಮುತ್ತಪ್ಪ ಅಯ್ಯಪ್ಪ ಕಿರೇಸೂರ, ಅಣ್ಣಯ್ಯ ಮಾಂತಪ್ಪ ಭಂಡಾರಿಮಠ ಹಾಗೂ ಜಗದೀಶ ಬಸವರಾಜ ಕುಂಬಾರ ಎಂಬ ನಾಲ್ವರು ಗೂಂಡಾಗಳು ಅಡ್ಡಗಟ್ಟಿ ಅವಳನ್ನು ತಡೆದಿದ್ದಾರೆ. ತಡೆದು ಕಿರುಕುಳ ನೀಡಿದ್ದಾರೆ, ಲೈಂಗಿಕ ಕ್ರಿಯೆಗೆ ಒತ್ತಾಯಿಸಿದ್ದಾರೆ. ಅಷ್ಟೆ ಅಲ್ಲ ಇವಳು ಬುರ್ಕಾ ಹಾಕಿಕೊಂಡರೆ ಸೇಮ್ ಟೆರರಿಸ್ಟ್ ಥರಾ ಕಾಣೆಸ್ತಾಳೆ ಅಂಥ ಅವಳನ್ನು ಮಾನಸಿಕವಾಗಿ ಹಿಂಸಿಸಿದ್ದಾರೆ. ಇಷ್ಟಕ್ಕೂ ರೇಷ್ಮಾಭಾನು ನಿಮಗೆಲ್ಲಾ ಅಕ್ಕ-ತಂಗಿಯರಿಲ್ಲವೇ? ಹೀಗೆಲ್ಲಾ ಮಾಡಿದರೆ ಪೊಲೀಸ್ ಕಂಪ್ಲೆಂಟ್ ಕೊಡಬೇಕಾಗುತ್ತೆ ಎಂದು ಪ್ರತ್ಯುತ್ತರ ನೀಡಿ ಅಲ್ಲಿಂದ ಪಾರಾಗಿ ಅಳುತ್ತಲೇ ಮನೆ ಸೇರಿಕೊಂಡಿದ್ದಾಳೆ. ಮನೆಯಲ್ಲಿದ್ದವರಿಗೆ ನಡೆದ ಘಟನೆ ಬಗ್ಗೆ ವಿವರಣೆ ನೀಡಿದ್ದಾಳೆ. ವಿವರಣೆ ನೀಡಿ ಮುಗಿಸುತ್ತ ಇರುವಾಗ ಈ ನಾಲ್ವರು ಗೂಂಡಾಗಳು ರೇಷ್ಮಾಭಾನುಳ ಮನೆಗೆ ವಕ್ಕರಿಸಿಯೇ ಬಿಟ್ಟಿದ್ದಾರೆ. ಮನೆ ಹೊಕ್ಕ ಗೂಂಡಾಗಳು ಇಬ್ಬರು ಸೋದರಿಯರ ಎದುರಲ್ಲೇ ರೇಷ್ಮಾಭಾನುಳನ್ನು ನಿಂದಿಸಿದ್ದಾರೆ. ಅವಳ ಬಗ್ಗೆ ಇಲ್ಲಸಲ್ಲದ ಆರೋಪ ಮಾಡಿದ್ದಾರೆ ಅವಳನ್ನು ಮತ್ತೆ ನೋಡಿಕೊಳ್ಳುತ್ತೇವೆ ಎಂದು ಬೆದರಿಸಿದ್ದಾರೆ. ಅಸಹಾಯಕರಾದ ರೇಷ್ಮಾಭಾನುಳ ಅಕ್ಕಂದಿರು ಅವರಲ್ಲಿ ಮನವಿ ಮಾಡಿಕೊಂಡು ಆ ನಾಲ್ವರನ್ನು ಮನೆಯಿಂದ ಸಾಗಹಾಕಿದ್ದಾರೆ.

ಕುಡಿದು ಬಂದರು

ಇಷ್ಟಕ್ಕೂ ತೃಪ್ತರಾಗದ ಈ ಕಾಮಾಂಧ ನಾಲ್ವರು ಮಧ್ಯ ಸೇವಿಸಿಕೊಂಡು ಮತ್ತೆ ರೇಷ್ಮಾಭಾನುಳ ಮನೆಗೆ ನುಗ್ಗಿದ್ದಾರೆ. ಮಧ್ಯಾಹ್ನದ ಊಟಕ್ಕೆಂದು ಮನೆಗೆ ಬಂದಿದ್ದ ಬುಡ್ನೇಸಾಬನ ಎದುರಲ್ಲೇ ರೇಷ್ಮಾಭಾನುಳನ್ನು ಹೀಯಾಳಿಸಿದ್ದಾರೆ. ಇಲ್ಲಸಲ್ಲದ ಆರೋಪ ಮತ್ತೆ ಮಾಡಿದ್ದಾರೆ. ನಿಮ್ಮ ಮಗಳಿಗೆ ಸರಿಯಾಗಿ ಬುದ್ದಿ ಹೇಳದಿದ್ದರೆ, ಅವಳನ್ನು ನಡುರಸ್ತೆಯಲ್ಲೇ ಮಾನಭಂಗ ಮಾಡುತ್ತೇವೆ, ಈಗಲೇ ಅವಳನ್ನು ಅನುಭವಿಸಿಬಿಡುತ್ತೇವೆ ಎಂದು ಗೂಂಡಾವರ್ತನೆ ತೋರಿಸಿ ಬುಡ್ನೇಸಾಬ, ರೇಷ್ಮಾಭಾನು ಮತ್ತು ಅವಳ ಸೋದರಿಯನ್ನು ಹೆದರಿಸಿದ್ದಾರೆ. ಅಷ್ಟೇ ಅಲ್ಲ ಕುಟುಂಬದ ಬಡತನದ ಬಗ್ಗೆಯೂ ಹೀಯಾಳಿಸಿದ್ದಾರೆ. ತನ್ನಪಾಡಿಗೆ ತಾನಿರುವ, ದುಡಿದು ತಿನ್ನುತ್ತಿರುವ ಬುಡ್ನೇಸಾಬನಿಗೆ ದಿಕ್ಕುತೋಚದಂತಾಗಿ, ಅಸಹಾಯಕನಾಗಿದ್ದಾನೆ. 'ಅಯ್ತಪ್ಪ, ಅಯ್ತಪ್ಪ, ನೀವೆಲ್ಲಾ ದೊಡ್ಡವರು, ದೊಡ್ಡ ಮನೆತನದ, ದೊಡ್ಡವ್ರ ಮಕ್ಕಳು. ನಿಮ್ಮನ್ನೆಲ್ಲ ಎದುರು ಹಾಕ್ಕೊಂಡು ಬದುಕೋಕ್ಕಾಗಲ್ಲ. ನಮ್ಮ ಮಗಳಿಗೆ ನಾವು ಸರಿಯಾಗಿ ಬುದ್ದಿ ಹೇಳ್ತಿವ್ರಪ. ಅವಳನ್ನು ನೀವು ನಿಮ್ಮ ತಂಗಿ ಅಂಥ ಬಿಟ್ಟುಬಿಡ್ರಪ' ಎಂದು ಪರಿಪರಿಯಾಗಿ ಬೇಡಿಕೊಂಡು, ಹೇಗೇಗೋ ಮಾಡಿ ನಾಲ್ವರು ಪುಂಡರನ್ನು ಕಳಿಸಿದ್ದಾಗಿದೆ.

ಅಸಹಾಯಕನಂತೆ, ನೊಂದುಕೊಂಡು ಬುಡ್ನೇಸಾಬ ತನ್ನ ಪಾಡಿಗೆ ಜಟಕಾ ಗಾಡಿ ಹೂಡಿಕೊಂಡು ಮತ್ತೆ ದುಡಿತ ಮಾಡಲು ಹೋಗಿದ್ದಾನೆ. ಮುಂಜಾನೆಯಿಂದಲೇ ತನ್ನ ಪಾಡಿಗೆ ತಾನು ಕೂಲಿ ಕೆಲಸಕ್ಕೆಂದು ಬುಡ್ನೇಸಾಬನ ಹೆಂಡತಿ ನೂರಜಹಾನ ತೆರಳಿದ್ದಾಳೆ. ರೇಷ್ಮಾಬಾನುಳ ಒಬ್ಬಳು ಸೋದರಿ ಕಂಪ್ಯೂಟರ್ ಆಪರೇಟಿಂಗ್ ಕಲಿತವಳು, ಉದ್ಯೋಗಕ್ಕಿದ್ದ ಖಾಸಗಿ ಸಂಸ್ಥೆಗೆ ಹೋಗಿದ್ದಾಳೆ. ಇನ್ನೊಬ್ಬಳು ಮನೆಯ ಬಟ್ಟೆಗಳನ್ನು ತೊಳೆಯಲೆಂದು ಹೊರಗೆ ಕಾರ್ಯ ನಿರತಳಾಗಿದ್ದಾಳೆ. ಮನೆಯೊಳಗೆ ಯಾರೂ ಇಲ್ಲದ ಸಮಯ ನೋಡಿಕೊಂಡು, ದಬ್ಬಾಳಿಕೆಗೆ ಒಳಗಾದ, ಅವಮಾನಿತಳಾದ, ಅಸಹಾಯಕ ಮನಸ್ಥಿತಿಗೆ ಒಳಗಾಗಿದ್ದ ವಿದ್ಯಾರ್ಥಿನಿ ರೇಷ್ಮಭಾನು ತನ್ನ ಗುಡಸಲಿನ ಮೇಲ್ಮಾಳಿಗೆಗೆ ತನ್ನ 'ವೇಲ್'ನ ಸಹಾಯದಿಂದ ನೇಣು ಬಿಗಿದುಕೊಂಡು ಸಾವನ್ನಪ್ಪಿದ್ದಾಳೆ. ಬಾಳಿ ಬದುಕಬೇಕಿದ್ದ ರೇಷ್ಮಾಭಾನು ಎಳೆ ವಯಸ್ಸಿನಲ್ಲೇ ತನ್ನ ಬದುಕನ್ನು ಅಂತ್ಯಗೊಳಿಸಿದ್ದಾಳೆ.



ಹೊಟ್ಟೆ ನೋವಿತ್ತು ಅಂತ ಬರೆಸಿಕೊಂಡಿದ್ದಾರೆ

ವಿಷಯ ತಿಳಿದ ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದಾರೆ. ಹೆದರಿದ್ದ ಬುಡ್ನೇಸಾಬನನ್ನು ಕರೆಸಿ ವಿಚಾರಿಸಿದ್ದಾರೆ. ಅಸಹಾಯಕನಾಗಿದ್ದ, ನೊಂದಿದ್ದ ಬುಡ್ನೇಸಾಬನನ್ನು ದಾರಿ ತಪ್ಪಿಸಿದ್ದಾರೆ. 'ನನ್ನ ಮಗಳಿಗೆ ಬಹುದಿನಗಳಿಂದ ಹೊಟ್ಟೆನೋವು ಇತ್ತು. ಇದರಿಂದ ಬೇಸತ್ತು ಅವಳು ನೇಣು ಹಾಕಿಕೊಂಡಿದ್ದಾಳೆ' ಎಂದು ಬರೆಸಿಕೊಂಡು ಅಲ್ಲಿಂದ ಪೊಲೀಸರು ಕಾಲ್ಕಿತ್ತಿದ್ದಾರೆ.

ಇದೆಲ್ಲವನ್ನು ಅರಿತ ಸ್ಥಳೀಯ ಕೆಲವು ಪ್ರಜ್ಞಾವಂತ ಯುವಕರು ಎಸ್‌ಎಫ್‌ಐ ಹಾಗೂ ಡಿವೈಎಫ್‌ಐ ನ ಜಿಲ್ಲಾ ಮುಖಂಡರನ್ನು ಸಂಪರ್ಕಿಸಿ ಘಟನೆಯ ಸತ್ಯಾಸತ್ಯತೆಯನ್ನು ವಿವರಿಸಿದ್ದಾರೆ. ವಿಷಯ ತಿಳಿದ ಎಸ್‌ಎಫ್‌ಐ ಹಾಗೂ ಡಿವೈಎಫ್‌ಐ ನ ಮುಖಂಡರು ರೋಣಕ್ಕೆ ಧಾವಿಸಿ ಬಂದಿದ್ದಾರೆ. ಆತ್ಮಹತ್ಯೆಗೊಳಗಾದ ರೇಷ್ಮಾಭಾನುವಿನ ಮನೆಗೆ ತೆರಳಿ ಬುಡ್ನೇಸಾಬ ಮತ್ತು ಆತನ ಮಕ್ಕಳನ್ನು ಸಂಪರ್ಕಿಸಿ ವಿಷಯ ತಿಳಿದುಕೊಂಡು, ಅವರಿಗೆಲ್ಲ ಸಾಂತ್ವನ ಹೇಳಿದ್ದಾರೆ. ಅಷ್ಟೇ ಅಲ್ಲ ಅವರಿಗೆಲ್ಲ ತಿಳುವಳಿಕೆ, ಧೈರ್ಯ ತುಂಬಿ ಸ್ಥಳೀಯ ಜನರನ್ನೆಲ್ಲಾ ಸೇರಿಸಿಕೊಂಡು ರೇಷ್ಮಾಬಾನುಳ ಸಾವಿಗೆ ಕಾರಣರಾದ ನಾಲ್ವರು ಗೂಂಡಾ, ಕಾಮಾಂಧರ ವಿರುದ್ಧ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ದೂರು ದಾಖಲಿಸಲಾಗಿದೆ.

17 ರ ಸಂಜೆ ನಡೆದ ರೇಷ್ಮಾಭಾನುಳ ಅಂತ್ಯಕ್ರಿಯೆಯಲ್ಲಿ ಸಂಘಟನೆಗಳ ಮುಖಂಡರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದಾರೆ. ಅಂತ್ಯಕ್ರಿಯೆ ನಡೆದ ಜಾಗದಲ್ಲಿಯೇ ಪ್ರತಿಭಟನೆ ಮಾಡಬೇಕೆಂದು ತೀರ್ಮಾನಿಸಲಾಯಿತು.

ಬೃಹತ್ ಪ್ರತಿಭಟನೆ

18 ರ ಮುಂಜಾನೆ ಎಸ್‌ಎಫ್‌ಐ ಹಾಗೂ ಡಿವೈಎಫ್‌ಐ ಸಂಘಟನೆಗಳ ಮನವಿ ಮೇರೆಗೆ ಎಲ್ಲಾ ಕಾಲೇಜುಗಳನ್ನು ಬಂದ್ ಗೊಳಿಸಲಾಯಿತು. ಪಟ್ಟಣವಿಡೀ ಸ್ವಯಂಘೋಷಿತ ಬಂದ್ ಆಗಿ ಊರ ಹೊರಗಿನ ಶಿವಾನಂದ ಮಠದಿಂದ ಬೃಹತ್ ಪ್ರತಿಭಟನಾ ಮೆರವಣಿಗೆ ಆರಂಭವಾಗಿ, ಊರ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಸಭೆಗಳು, ರಸ್ತೆ ತಡೆಯನ್ನು ಶಾಂತ ರೀತಿಯಾಗಿ ನಡೆಸಲಾಯಿತು. ಕೊನೆಗೆ ಮೆರವಣಿಗೆ ತಹಶೀಲ್ದಾರ್ ಕಛೇರಿಗೆ ತೆರಳಿ, ಕಛೇರಿ ಮುಂದೆ ಧರಣಿ ನಡೆಸಿ, ತಹಶೀಲ್ದರ್ ಮೂಲಕ ಸರ್ಕಾರಕ್ಕೆ ಮನವಿ ಅರ್ಪಿಸಲಾಯಿತು.

ಮನವಿ ಪತ್ರದಲ್ಲಿ ಕುಮಾರಿ ರೇಷ್ಮಾಭಾನು ಬೆಟಗೇರಿ ಆತ್ಮಹತ್ಯೆಗೆ ಕಾರಣರಾದವರನ್ನು ತಕ್ಷಣವೇ ಬಂಧಿಸಬೇಕು, ರೇಷ್ಮಾಭಾನು ಕುಟುಂಬಕ್ಕೆ 2 ಲಕ್ಷ ರೂ. ಪರಿಹಾರ ನೀಡಬೇಕು, ಬುಡ್ನೇಸಾಬ ಬೆಟಗೇರಿ ಕುಟುಂಬಕ್ಕೆ ಸೂಕ್ತ ರಕ್ಷಣೆ ಒದಗಿಸಬೇಕು, ಲೈಂಗಿಕ ಕಿರುಕುಳ ಪ್ರಕರಣಗಳಿಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ನಿರ್ದೇಶನದ 'ಲೈಂಗಿಕ ಕಿರುಕುಳ ವಿರೋಧಿ ಸಮಿತಿ'ಯನ್ನು ಪಾಲಕರು, ವಿದ್ಯಾರ್ಥಿ ಮುಖಂಡರನ್ನು ಒಳಗೊಂಡಂತೆ ರಚಿಸಬೇಕು. ವಿದ್ಯಾರ್ಥಿನಿಯರು ಶಾಲಾ ಕಾಲೇಜುಗಳಿಗೆ ಹೋಗಿಬರುವ ಸಮಯದಲ್ಲಿ ಬಸ್ ನಿಲ್ದಾಣ, ಆಯ್ದ ರಸ್ತೆಗಳಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಬೇಕೆಂದು

ಪುಟ [illegible] ಕ್ಕೆ

......ಮತಾಂತರದ ಪ್ರಶ್ನೆ

ಪುಟ 9 ರಿಂದ

ನಿರಂತರ ತಿಕ್ಕಾಟದಲ್ಲಿದೆ.

ಆಧ್ಯಾತ್ಮವಲ್ಲ, ರಾಜಕೀಯವಷ್ಟೇ

ಕ್ರೈಸ್ತ ಧರ್ಮ ಮತ್ತು ಇಸ್ಲಾಮ್ ಧರ್ಮ ಇವೆರಡೂ, ವಿಶೇಷವಾಗಿ ಮಧ್ಯಯುಗದಲ್ಲಿ, ಬಲವಂತದ ಮತಾಂತರ ನಡೆಸಿದವು ಎಂಬ ಕಾರಣವೊಡ್ಡಿ ಈಗ 21ನೆ ಶತಮಾನದಲ್ಲಿ, ಇಲ್ಲಿ ಭಾರತದಲ್ಲಿ, ಈ ಧರ್ಮಗಳ ಅನುಯಾಯಿಗಳಿಗೆ ಕಿರುಕುಳ ಕೊಡಲಾಗದು. ಈ ಎರಡೂ ಧರ್ಮಗಳು "ಸಾಮ್ರಾಜ್ಯವಾದಿ" ಧರ್ಮಗಳಾದ್ದರಿಂದ ಜಗತ್ತಿನ ಹಲವು ಭಾಗಗಳಿಗೆ ಹರಡಿದವು, ತಾವು ಹಿಂದೂ ಧರ್ಮವನ್ನು ಈ "ಸಾಮ್ರಾಜ್ಯವಾದಿ" ಧರ್ಮಗಳಿಂದ ರಕ್ಷಿಸಲು ಪ್ರಯತ್ನಿಸುತ್ತಿದ್ದೇವೆ ಎಂದು ಹಿಂದುತ್ವದ ಶಕ್ತಿಗಳು ತರ್ಕ ಹೂಡುತ್ತವೆ.

ಭಾರತದಲ್ಲಿ ಮತಾಂತರ ಈ ಹಿಂದೆ ಪ್ರಧಾನವಾಗಿ ಹಿಂದೂ ಧರ್ಮ ಶೋಷಿಸುತ್ತಿದ್ದ ಜಾತಿ/ಸಮುದಾಯಗಳಿಂದ ನಡೆಯುತ್ತಿತ್ತು. ಶೋಷಿತ ಜನಗಳಿಗೆ ಹಿಂದೂ ದೇವಸ್ಥಾನಗಳನ್ನು ಪ್ರವೇಶಿಸುವ ಅಧಿಕಾರವನ್ನು ನಿರಾಕರಿಸುವ ಹಿಂದುತ್ವ ಶಕ್ತಿಗಳನ್ನು ಯಾರು ತಾನೇ ಅನುಮೋದಿಸಲು ಸಾಧ್ಯ? ಒಬ್ಬ ವ್ಯಕ್ತಿ ತನ್ನನ್ನು ಪ್ರಾರ್ಥನಾ ಸ್ಥಳದಿಂದ ದೂರವಿಡದ ಒಂದು ದೇವರು ಅಥವಾ ಒಂದು ಧರ್ಮವನ್ನು ಸ್ವೀಕರಿಸುತ್ತೇನೆ ಎನ್ನುವಾಗ ಆಧ್ಯಾತ್ಮವನ್ನು ಮತ್ತು ದೇವರಲ್ಲಿ ನಂಬಿಕೆಯನ್ನು ಪ್ರತಿಪಾದಿಸುವ ಯಾವ ವ್ಯಕ್ತಿಯೂ ಅದನ್ನು ನಿರಾಕರಿಸಲಾರ. ಎಲ್ಲಿಯವರೆಗೆ ಹಿಂದುತ್ವ ಶಕ್ತಿಗಳು ತಮ್ಮ ಧರ್ಮದಲ್ಲಿ ಸುಧಾರಣೆ ತಂದು ಸಂವಿಧಾನದ ಅಂಶಗಳು ಬಯಸುವಂತೆ ಅದನ್ನು ನಿಜವಾಗಿಯೂ ಸಾರ್ವತ್ರಿಕಗೊಳಿಸುವುದಿಲ್ಲವೋ, ಅಲ್ಲಿಯ ವರೆಗೆ ಅವು ತಮ್ಮಲ್ಲಿನ ದಮನಕ್ಕೊಳಗಾದ ಯಾವುದೇ ವ್ಯಕ್ತಿ ಬೇರೆ ಯಾವುದೇ ಧರ್ಮಕ್ಕೆ ಪರಿವರ್ತನೆಗೊಂಡರೆ, ಹುಯಿಲೆಬ್ಬಿಸಲು ಸಾಧ್ಯವಿಲ್ಲ.

ಆಧುನಿಕ ಯುಗದಲ್ಲಿ ಹಿಂದೂ ಧರ್ಮ ಕೂಡಾ ಬೇರೆ ಧರ್ಮಗಳಿಂದ 'ಮತಾಂತರಿ'ಗಳನ್ನು ತನ್ನ ತೆಕ್ಕೆಗೆ ತಗೊಂಡಿದೆ. ಥಿಯೋಸೊಫಿಕಲ್ ಸೊಸೈಟಿ ಸ್ಥಾಪಿಸಿದ ಮೇಡಂ ಬ್ಲಾವಟ್‌ಸ್ಕಿ, ಸ್ವಾಮಿ ವಿವೇಕಾನಂದರ ಸಮರ್ಪಿತ ಶಿಷ್ಯೆ ಸಿಸ್ಟರ್ ನಿವೇದಿತಾ, ಮತ್ತು ಹರೇಕೃಷ್ಣ ಪಂಥದ ವಿದೇಶೀ ಸ್ವಾಮಿಗಳೆಲ್ಲಾ ಹಿಂದೂಧರ್ಮಕ್ಕೆ ಬಂದಿರುವ ಮತಾಂತರಿಗಳು. ಈ ಮತಾಂತರಗಳು ಬಲವಂತದ್ದಲ್ಲ ಎಂದು ಹಿಂದುತ್ವ ಶಕ್ತಿಗಳು ವಾದಿಸಬಹುದು. ನಿಜ, ಅದೇ ರೀತಿ, ಈಗ ಭಾರತದಲ್ಲಿ ನಡೆಯುತ್ತಿರುವ ಮತಾಂತರಗಳು ಕೂಡಾ ಬಲವಂತದ್ದಲ್ಲ, ಆದರೆ ಒರಿಸ್ಸಾದಲ್ಲಿ ಹಿಂದುತ್ವ ಶಕ್ತಿಗಳು ಮಾಡುತ್ತಿರುವ ಮರುಮತಾಂತರಗಳು ಮಾತ್ರ ನಿಜವಾಗಿಯೂ ಬಲವಂತದ್ದು.

ಎರಡು ಜನಪ್ರಿಯ ಜಾಗತಿಕ ಧರ್ಮಗಳಾದ ಕ್ರೈಸ್ತ ಧರ್ಮ ಮತ್ತು ಇಸ್ಲಾಂ ಧರ್ಮದ 'ಸಾಮ್ರಾಜ್ಯವಾದಿ'ಎಂಬ ಅಂಶಗಳು ಏನೇ ಇದ್ದರೂ ಅವು ರಾಜಕೀಯ ಅಂಶಗಳಷ್ಟೆ, ಆಧ್ಯಾತ್ಮಕ್ಕೂ ಅವಕ್ಕೂ ಏನೂ ಸಂಬಂಧವಿಲ್ಲ. ಅದೇ ರೀತಿ, ಹಿಂದುತ್ವ ಶಕ್ತಿಗಳ ಆಚರಣೆಗಳು ಕೂಡಾ ಆಧ್ಯಾತ್ಮಿಕವಲ್ಲ, ಬದಲಿಗೆ ರಾಜಕೀಯವಾದದ್ದು. ಆರೆಸ್ಸೆಸ್ ಮತ್ತು ಅದು ತೇಲಿಬಿಟ್ಟಿರುವ ಸಂಘಟನೆಗಳ ಅಂದರೆ 'ಸಂಘ ಪರಿವಾರ'ದ 'ಪ್ರಚಾರಕರು' ನಿಜವಾಗಿ ಆಧ್ಯಾತ್ಮಿಕ ಪ್ರಚಾರಕರಲ್ಲ, ಬದಲಿಗೆ, ಬಹುಸಂಖ್ಯಾತರ ಹೆಸರಿನಲ್ಲಿ ಮತ್ತು ಅಲ್ಪಸಂಖ್ಯಾತರಿಗೆ ಕಿರುಕುಳ ಕೊಡುವ ರಾಜಕೀಯ ನಡೆಸುವವರು. ಬಲಪ್ರಯೋಗ ನಿಜವಾಗಿ ಅವರ ಕಡೆಯಿಂದಲೇ ಬರುತ್ತಿದೆ.

ಸುಧಾರಣಾ ಆಂದೋಲನ ನಡೆಯಲಿ

ಭಾರತೀಯ ಸಂವಿಧಾನದಲ್ಲಿರುವ ಜಾತ್ಯಾತೀತ ನೀತಿಗಳ ಸರಿಯಾದ ಆಚರಣೆಯಿಂದ ಮಾತ್ರವೇ ಧಾರ್ಮಿಕ ಸ್ವಾತಂತ್ರ್ಯದ ಭರವಸೆ ನೀಡಲು ಸಾಧ್ಯ. ಹಿಂದೂಗಳು ತಮ್ಮ ಧರ್ಮವನ್ನು ರಕ್ಷಿಸಬೇಕೆಂದಿದ್ದರೆ ರಾಜಾ ರಾಮಮೋಹನ ರಾಯ್, ಈಶ್ವರಚಂದ್ರ ವಿದ್ಯಾಸಾಗರರಂತಹ ಸಾಮಾಜಿಕ ಸುಧಾರಕರು ಮತ್ತು ಆರ್ಯಸಮಾಜ ಮತ್ತು ಬ್ರಹ್ಮಸಮಾಜ ಮುಂತಾದವುಗಳ ಪ್ರೋತ್ಸಾಹಕರು, ಅನುಯಾಯಿಗಳು ಆರಂಭಿಸಿ, ಮಧ್ಯೆ ನಿಂತು ಹೋಗಿರುವ ಸಾಮಾಜಿಕ ಸುಧಾರಣೆಗಳನ್ನು ಮತ್ತೆ ಆರಂಭಿಸಬೇಕಾದ ಸಮಯವೀಗ ಬಂದಿದೆ. ಈ ಸುಧಾರಕರು ಆಗಿನ ಬ್ರಿಟಿಶ್ ಪ್ರಾಂತ್ಯಗಳಾದ ಬಂಗಾಳ ಮತ್ತು ಪಂಜಾಬಿನಲ್ಲಿ ಬಹಳ ಯಶಸ್ವಿಯಾದರು ಎಂಬುದನ್ನು ನಾವು ಕಾಣಬಹುದು.

ಬಂಗಾಲ ಮತ್ತು ಪಂಜಾಬಿನಲ್ಲಿ ಈ ಸುಧಾರಣೆಯ ಹರಿಕಾರರು, ಮಾತ್ರವಲ್ಲ, ಮಹಾರಾಷ್ಟ್ರದಲ್ಲೂ 19ನೇ ಶತಮಾನದಲ್ಲಿ ಮಹಾತ್ಮಾ ಫುಲೆಯಂತವರು ದಾರಿ ತೋರಿಸಿಕೊಟ್ಟರೂ ನಂತರ ಚಾಲ್ತಿಗೆ ಬಂದದ್ದು ತೀವ್ರಗಾಮಿ ಗುಂಪುಗಳ ಧಾರ್ಮಿಕ ಸಮರಶೀಲ ರಾಜಕೀಯ ಗುಂಪುಗಳೇ. ಸಹಜವಾಗಿ ಈ ಪ್ರವೃತ್ತಿ ಬಂಗಾಳ ಮತ್ತು ಪಂಜಾಬಿಗೂ ಹರಡಿತು. ಕಾಂಗ್ರೆಸಿನಲ್ಲಿ ತೀವ್ರಗಾಮಿಯಾದ ಲಾಲ್-ಬಾಲ್-ಪಾಲ್ ಕೂಟ ಭಾರತದ ಸ್ವಾತಂತ್ರ್ಯಕ್ಕೆ ಹೋರಾಡುವಾಗಲೇ, ಈ ಪ್ರವೃತ್ತಿ 'ಎರಡು ರಾಷ್ಟ್ರಗಳು' ವಿಚಾರವನ್ನೂ ಹುಟ್ಟು ಹಾಕಿತು. ಅವರು ಒಂದು ಸುವರ್ಣ ಯುಗಕ್ಕೆ ಹಿಂತಿರುಗುವ ವಿಚಾರ ಎತ್ತಿದ ಕೂಡಲೇ, ಮೊಗಲ್ ಸಾಮ್ರಾಜ್ಯದ ಇಸ್ಲಾಮೀ ಸುವರ್ಣಯುಗದ ವಿಚಾರವೂ ಎದ್ದಿತು. ಇದು ರಾಷ್ಟ್ರೀಯ ಆಂದೋಲನವನ್ನು ಒಡೆದು ಪರಸ್ಪರ ವಿರುದ್ಧ ನಿಲ್ಲುವಂತೆ ಮಾಡಿ ಕೊನೆಗೆ ಪಾಕಿಸ್ತಾನ ಮತ್ತು ಹಿಂದೂಸ್ತಾನ ಎಂಬ ಎರಡು ವಿಭಿನ್ನ ದೇಶಗಳು ರಚನೆಯಾಗುವಂತಾಯಿತು. ಬ್ರಿಟಿಶರಿಂದ ಸ್ವಾತಂತ್ರ್ಯ ಕೇಳದ ಆರೆಸ್ಸೆಸ್‌ನಂತಹ ಮತೀಯ ಸಮರಶೀಲರು ಅಂತಿಮವಾಗಿ ಧಾರ್ಮಿಕ ತೀವ್ರಗಾಮಿಗಳ ಸಾರಥ್ಯ ವಹಿಸಿಕೊಂಡರು. ಅವರು ರಾಜಕೀಯವಾಗಿ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ವಿರುದ್ಧವಾಗಿಲ್ಲ ಎಂಬುದನ್ನು ಗಮನಿಸಬೇಕು.

ಹೀಗೆ ಈಗಿನ ಹಿಂದುತ್ವ ಶಕ್ತಿಗಳು ಭಾರತದಲ್ಲಿ 'ಸಾಮ್ರಾಜ್ಯವಾದಿ ಧರ್ಮಗಳು'' ಕಾರ್ಯನಿರತವಾಗಿವೆ ಎಂದು ಗುಲ್ಲೆಬ್ಬಿಸುತ್ತಿದ್ದಾರೆ. ಇದನ್ನು ಅವರು ರಾಜಕೀಯ ಅಧಿಕಾರ ಗಳಿಸಲಿಕ್ಕಾಗಿ ಮಾಡುತ್ತಿದ್ದಾರೆ. ಹಿಂದೆ ಅವರು ರಾಮನ ಹೆಸರಿನಲ್ಲಿ ಅಧಿಕಾರ ಪಡೆದರು. ಈಗ ಕೇವಲ ಮುಸ್ಲಿಮರ ಮೇಲೆ ದಾಳಿ ಮಾಡಿದರಷ್ಟೇ ಸಾಲದು ಎಂದು ಬಗೆದು ಕೋಮುವಾದೀ ವಿಷಾಣುವನ್ನು ಹರಡಲು ಕ್ರೈಸ್ತ ಅಲ್ಪಸಂಖ್ಯಾತರು ಮತ್ತು ಅವರ ಸಂಸ್ಥೆಗಳ ಮೇಲೆ ಗುರಿಯಿಟ್ಟಿದ್ದಾರೆ.

ಇಲ್ಲಿ ಪಣಕ್ಕೆ ಒಡ್ಡಿರುವುದು ಧಾರ್ಮಿಕ ಸ್ವಾತಂತ್ರ್ಯವನ್ನಷ್ಟೇ ಅಲ್ಲ, ಪ್ರಜಾಪ್ರಭುತ್ವ, ಕಾನೂನಿನ ಆಳ್ವಿಕೆ ಮತ್ತು ಒಂದು ನಾಗರಿಕ ಸಮಾಜದ ಬುನಾದಿಯೇ ಪಣದಲ್ಲಿದೆ.

ಕೊನೆಯದಾಗಿ, ಧಾರ್ಮಿಕ ಸ್ವಾತಂತ್ರ್ಯದ ಮೂಲಭೂತ ಹಕ್ಕಿನಲ್ಲಿ ಮತಾಂತರದ ಹಕ್ಕೂ ಸೇರಿದೆ. ಇದರಲ್ಲಿ ಇರುವ ವೈರುಧ್ಯವನ್ನು ಬಳಸಿ ಕೆಲವು ರಾಜ್ಯಗಳಲ್ಲಿ ಯಾವುದೇ ಧರ್ಮವನ್ನು ಅನುಸರಿಸುವ ಮತ್ತು ಬೋಧಿಸುವ ಹಕ್ಕಿನೊಂದಿಗೇ ಮತಾಂತರದ ಮೇಲೆ ಕಾನೂನಾತ್ಮಕವಾದ ನಿಷೇಧವನ್ನೂ ತರಲಾಗಿದೆ. ಈ ಕಾನೂನುಗಳು ಯಾರದ್ದೇ ಧಾರ್ಮಿಕ ಭಾವನೆಗಳನ್ನು ಘಾಸಿಗೊಳಿಸುವುದು ಒಂದು ಅಪರಾಧ ಎಂಬ ಭಾರತೀಯ ದಂಡ ಸಂಹಿತೆ(ಪೀನಲ್ ಕೋಡ್)ಯ ಅಂಶಗಳನ್ನು ಬಳಸಿಕೊಳ್ಳುತ್ತವೆ. ಆದರೆ ಧಾರ್ಮಿಕ ಸಂಸ್ಥೆಗಳ ಮೇಲೆ ಧಾಳಿಗಳನ್ನು ನಡೆಸುತ್ತಿರುವವರ ಮೇಲೆ ಇವನ್ನು ಅನ್ವಯಿಸುವ ಬದಲು, ಹಿಂದುತ್ವ ಶಕ್ತಿಗಳು ಈ ಕಾನೂನನ್ನು ತಿರುಚಿ ಮತಾಂತರಗಳನ್ನು ಶಿಕ್ಷಿಸ ಬಯಸುತ್ತವೆ. ಇದು ಎಂದೂ ನಮ್ಮ ಸಂವಿಧಾನವನ್ನು ರಚಿಸಿದವರ ಆಶಯವಾಗಿರಲಿಲ್ಲ. ○

ರೋಣ ... ಮುಗ್ಧೆ ಬಲಿ...

ಪುಟ 11ರಿಂದ


ಒತ್ತಾಯಿಸಲಾಯಿತು.

ಸಾವಿರ ವಿದ್ಯಾರ್ಥಿಗಳು, ಒಂದೂವರೆ ಸಾವಿರದಷ್ಟಿದ್ದ ನಾಗರಿಕರು ಒಟ್ಟಾಗಿ ಹೋರಾಟ ಮಾಡಿದ್ದು ಇಡೀ ಜಿಲ್ಲೆಯಲ್ಲಿ ಭಾರಿ ಸುದ್ದಿಯಾಗಿ ಪ್ರಭಾವ ಬೀರಿತು. ಜನ ಅನ್ಯಾಯವಾದಾಗ ಜಾತಿ-ಬೇಧ, ವರ್ಗ ಬೇಧ ಮರೆತು ಹೋರಾಟ ಮಾಡುತ್ತಾರೆ ಎಂಬುದಕ್ಕೆ ರೋಣದಲ್ಲಿ ನಡೆದ ಹೋರಾಟ ಸಾಕ್ಷಿಯಾಯಿತು.

ಘಟನೆ ನಡೆದು ವಾರ ಕಳೆದು ಹೋದರು ಮುತ್ತಪ್ಪ ಕಿರೇಸೂರ ಇವರನ್ನು ಮಾತ್ರ ಬಂಧಿಸಲಾಗಿತ್ತು. ಮತ್ತೆ ಇಬ್ಬರನ್ನು ನಂತರ ಬಂಧಿಸಲಾಗಿದೆ.

ರೇಷ್ಮಾಬಾನುಳ ಸಾವಿಗೆ ಕಾರಣರಾದ ಆರೋಪಿತರನ್ನು ಬಂಧಿಸಲು ಒತ್ತಾಯಿಸಿ, ಪಾಳೇಗಾರಿ ಸಾಮಾಜಿಕ ವ್ಯವಸ್ಥೆಯ ವಿರುದ್ಧ ತೀವ್ರ ಹೋರಾಟ ಮಾಡಿದ ಎಸ್.ಎಫ್.ಐ, ಡಿವೈಎಫ್‌ಐ ಸಂಘಟನೆಗಳೊಂದಿಗೆ ಸ್ಥಳೀಯ ಅಂಜುಮನ್ ಇಸ್ಲಾಂ ಸಮಿತಿ, ಅರವಾದ ಯುವಕರ ಸಂಘ, ಎಸ್.ಎಸ್.ಯು.ಐ., ಸಿಐಟಿಯು ಸಂಘಟನೆಗಳು ಹಾಗೂ ಜನತೆ ಸಂಪೂರ್ಣ ಕೈ ಜೋಡಿಸಿದರು.

ಅಪರಾಧಿಗಳು ಸ್ಥಳೀಯರು. ಬಲಾಢ್ಯ ಜಾತಿಗೆ ಸೇರಿದವರು. ಭೂಮಾಲೀಕತ್ವ ಸೇರಿದಂತೆ ಆರ್ಥಿಕವಾಗಿಯೂ ಬಲಾಢ್ಯರಾದವರು. ಸ್ಥಳೀಯವಾಗಿ ರಾಜಕೀಯ ಪ್ರಭಾವವೂ ಇದ್ದಂತಹವರು. ಜಾತಿ, ಹಣ ಬಲವನ್ನು ತಮ್ಮ ರಕ್ಷಣೆಗೆ ಬಳಸಲು ಯತ್ನಿಸಿದರೂ ಕೂಡಾ ಜನಾಭಿಪ್ರಾಯ ತೀವ್ರವಾಗಿದ್ದರಿಂದ ಅದು ಸಾಧ್ಯವಾಗಿಲ್ಲ. ಮತ್ತು ಅಪರಾಧಿಗಳ ಸ್ವಜಾತಿಯ ಜನರೂ ಹಲವರು ಇಂಥ ಹೀನ ಕೃತ್ಯವನ್ನು ಬೆಂಬಲಿಸದೆ ನ್ಯಾಯದ ಪರವಾಗಿ ನಿಂತಿದ್ದಾರೆ.



ರೇಷ್ಮಾಬಾನು ಮನೆ

ಈ ಎಲ್ಲಾ ಹಿನ್ನೆಲೆಯಲ್ಲಿ ಬಿಜೆಪಿಯ ರೋಣ ಕ್ಷೇತ್ರದ ಶಾಸಕರು ಅಪರಾಧಿಗಳಿಗೆ ರಕ್ಷಣೆ ಮಾಡುವ ಧೈರ್ಯ ಮಾಡಲು ಸಾಧ್ಯವಾಗಿಲ್ಲ.

ಈ ಎಲ್ಲವೂ ನಡೆಯುತ್ತಿರುವಾಗಲೇ ಧಾರವಾಡ ವಿಭಾಗ ಮಟ್ಟದ ಆರ್‌ಎಸ್‌ಎಸ್ ತರಬೇತಿ ಶಿಬಿರವು ರೋಣದಲ್ಲೇ ನಡೆದಿತ್ತು. ಆತ್ಮಹತ್ಯೆ ಘಟನೆ, ನಂತರ ನಡೆದ ಹೋರಾಟವನ್ನು ಕೋಮು ಗಲಭೆಗೆ ತಿರುಗಿಸುವ ಆರ್‌ಎಸ್‌ಎಸ್ ಪ್ರಯತ್ನವನ್ನು ರೋಣದ ಪ್ರಜ್ಞಾವಂತ ಜನತೆ ತಲೆಕೆಳಗಾಗಿಸಿದರು.

ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ವಿಠಲನಾಯಕ್, ಜಿಲ್ಲಾ ಕಾರ್ಯದರ್ಶಿ ಗೌಸ್ ಪೀರಣ್ಣನವರ್, ಎಂ.ಎಸ್.ತಾಳೀಕೋಟಿ, ಶೇಖರ್ ಮಾಳೋತ್ತರ್, ಡಿವೈಎಫ್‌ಐ ಜಿಲ್ಲಾ ಮುಖಂಡರಾದ ಎಂ.ಎಸ್.ಹಡಪದ್, ಮಹೇಶ್ ಹಿರೇಮಠ್-ಜಿಲ್ಲಾ ಸಂಚಾಲಕರು, ಅಬ್ದುಲ್ ಸಾಬ್ ಬೆಟಗೇರಿ, ಅಂಜುಮನ್ ಇಸ್ಲಾಂ ಸಮಿತಿ ಅಧ್ಯಕ್ಷರು, ಅದೇ ಸಂಘಟನೆಯ ಮುಸ್ತಫ ಬೆಘರಿ, ಶಫೀಕ್ ಮೂಗನೂರ, ಅಜಾದ್ ಯುವಕ ಸಂಘದ ಅಧ್ಯಕ್ಷರು, ಆ ಸಂಘಟನೆಯ ಯೂಸಫ್ ಇಟಗಿ, ಚಾಂದ್ ಸಾಬ್ ನಾಲಬಂಧ, ಎನ್‌ಎಸ್‌ಯುಐ ನ ಸಂಜಯ ದೊಡ್ಡಮನಿ, ಸಿಐಟಿಯು ಜಿಲ್ಲಾ ಮುಖಂಡರಾದ ಎಸ್.ಕೆ.ಮುರದ್ ಮುಂತಾದವರು ಚಳವಳಿ ನೇತೃತ್ವ ವಹಿಸಿದ್ದರು. ○

ಜನಶಕ್ತಿ ಕನ್ನಡ ವಾರಪತ್ರಿಕೆ


ಆರಂಭದ ಕ್ರೈಸ್ತ ಧರ್ಮವು ತ್ಯಾಗ, ಸನ್ಯಾಸ ಮತ್ತು ಸಾಧನೆಗೆ ಮಹತ್ವವನ್ನು ಕೊಟ್ಟಿತ್ತು. ಅದು ಭಾರತೀಯ ಅಥವಾ ಏಶಿಯಾದ ಧರ್ಮಗಳ ಲಕ್ಷಣವೂ ಆಗಿತ್ತು. ಆದರೆ, ಕ್ರೈಸ್ತಧರ್ಮ ಯುರೋಪನ್ನು ತಲುಪಿದಾಗ ಅದರ ರೂಪಲಕ್ಷಣಗಳು ಬದಲಾದವು. ಅದು ಐಹಿಕತೆ ಅಥವಾ ಲೌಕಿಕತೆಗೆ ಹತ್ತಿರವಾಯಿತು. ಹಾಗಾಗಿ ಮುಖ್ಯವಾಗಿ ಕ್ರೈಸ್ತಧರ್ಮದಲ್ಲಿ ಈ ಎರಡು ಬಗೆಯ ರೂಪದಲ್ಲಿ ಕಂಡು ಬರುತ್ತದೆ. ಅಂತೆಯೇ ಭಾರತದಲ್ಲೂ ಈ ಎರಡೂ ಬಗೆಯ ರೂಪಗಳು ಇವೆ.

ಭೈರಪ್ಪನವರು ಹೇಳುವ ಕ್ರೈಸ್ತಧರ್ಮ (ಪೋರ್ಚ್‌ಗಿಸರದ್ದು) ಬರುವ ಬಹಳ ಮುಂಚೆ ಅಂದರೆ ಕ್ರಿ.ಶ. 3ನೇ ಶತಮಾನದಲ್ಲೇ ಸೀರಿಯನ್ (ಸಿರಿಯಾ ಮೂಲದಿಂದ ಬಂದದ್ದು) ಕ್ರೈಸ್ತ ಧರ್ಮ ಬಂದಿತ್ತು. ಭಾರತದಲ್ಲಿ ಆ ಕ್ರೈಸ್ತ ಧರ್ಮಕ್ಕೆ ಅತ್ಯಂತ ಗೌರವಾದರಗಳು ಇದ್ದವು. ದಕ್ಷಿಣ ಭಾರತದಲ್ಲಿ 'ಹಿಂದೂ'ಗಳು ಚರ್ಚುಗಳನ್ನು ದೇವಸ್ಥಾನಗಳೆಂದೇ ತಿಳಿದಿದ್ದರು. ಚರ್ಚುಗಳಿಗೆ ಭೂಮಿ ದಾನ ಯಥೇಚ್ಛವಾಗಿ ನೀಡಲಾಗುತ್ತಿತ್ತು. ಆದರೆ ಗೋವಾದಲ್ಲಿ ಪೋರ್ಚುಗೀಸ್ ಕ್ರೈಸ್ತರು ಮಾಡಿದ ಅನಾಚಾರ ಇತಿಹಾಸದ ಘಟನಾವಳಿಗಳಲ್ಲಿ ಕೇವಲ ಒಂದು ಘಟನೆ. ಅದು ಮತ್ತೆ ಮರುಕಳಿಸಿಲ್ಲ. ಅದನ್ನೇ ಮುಖ್ಯವಾಗಿ ರಂಗು ರಂಗಿನಿಂದ ವರ್ಣಿಸುವ ಮತ್ತು ಅದುವೇ ಭಾರತೀಯ ಕ್ರೈಸ್ತರ ನಡವಳಿಕೆ ಎಂದು ಚಿತ್ರಿಸುವ ಭೈರಪ್ಪನವರ ವಾಕ್ ಲಹರಿ ಅತ್ಯಂತ ಕೆಟ್ಟ ಮತ್ತು ವಿಕೃತ ಫ್ಯಾಸಿಸ್ಟ್ ಮನೋವೃತ್ತಿ.

ಭಾರತದಲ್ಲಿ ಎಂದೂ ಕ್ರೈಸ್ತ ಧರ್ಮ ನಿಂದೆಗೆ ಒಳಗಾಗಿರಲಿಲ್ಲ. ನನ್ನ ಅಪ್ಪ ಓದಿದ ಖಗಳ ಮಠದಲ್ಲಿ ಬ್ರಾಹ್ಮಣರನ್ನು ಬಿಟ್ಟು ಬೇರಾರಿಗೂ ಅಂದು ವಿದ್ಯಾಭ್ಯಾಸ ಕೊಡುತ್ತಿರಲಿಲ್ಲ. ಕ್ರೈಸ್ತರು ಶಾಲೆ, ಕಾಲೇಜು, ಆಸ್ಪತ್ರೆ ತೆರೆದರು. ಯಾರಿಗಾಗಿ? ಎಲ್ಲರಿಗಾಗಿ. ಯಾರು ಕನ್ನಡದ ನಿಘಂಟನ್ನು ಬರೆದರು? ಮಹಾತ್ಮರೆವೆಲೆಂಡ್ ಫಾದರ್ ಕಿಟ್ಟೆಲ್. ವೇದಗಳನ್ನು 50 ವರ್ಷ ಅಧ್ಯಯನ ಮಾಡಿ ಅದನ್ನು ಕ್ರೋಢೀಕರಿಸಿ, ಇಂಗ್ಲೀಷ್‌ಗೆ ತರ್ಜುಮೆ ಮಾಡಿ ಅದನ್ನು ನಮ್ಮ ಗಮನಕ್ಕೆ ತಂದವರು ಯಾರು? ಮಾಕ್ಸ್ ಮುಲ್ಲರ್. ಜನಸಂಖ್ಯೆಯ ಆಧಾರದಲ್ಲಿ ಇಂದು ಬರೇ 2.1 ಶೇಕಡಾದಷ್ಟಿರುವ ಕ್ರೈಸ್ತರು ಈ ನಾಡಿಗೆ ಸೇವೆ ಸಲ್ಲಿಸಿದ್ದು ಅಪಾರ. ಇವರ ಎದುರುಗಡೆ ನಮ್ಮ ಮಠಗಳು ಕೇವಲ ಭೋಜನಾಲಯಗಳಾಗಿದ್ದವು! ಸುಖ ಸಮೃದ್ಧಿ(!) ಯ ತಾಣಗಳಾಗಿದ್ದವು. ಈ ದೇಶದಲ್ಲಿ ಚಿದಾನಂದ ಮೂರ್ತಿ ಮತ್ತು ಭೈರಪ್ಪನವರಂತಹ ಕಾಮಾಲೆ ರೋಗಿ ಸಾಹಿತಿಗಳನ್ನು ನಾನು ಇದುವರೆಗೆ ಕಂಡಿದ್ದಿಲ್ಲ. ಇದು ಪ್ರಾಯಶಃ ಕನ್ನಡದ ಕವಿ ರಾಘವಾಂಕ ಹೇಳುವಂತೆ-'ಬಂದ ಕಾಲಗುಣವೋ, ನಿಂದ ನೆಲದ ಗುಣವೋ'?!

ಇಷ್ಟಕ್ಕೂ ಈ ಹಿಂದೂಗಳೆಂದರೆ ಯಾರು? ವೇದ ಅರಣ್ಯಕ, ಶಿಕ್ಷಾ, ವೇದಾಂತ, ದರ್ಶನ, ಮಹಾಪುರಾಣಗಳು, ರಾಮಾಯಣ ಮಹಾಭಾರತಗಳು-ಯಾವುದರಲ್ಲೂ ಈ ಹಿಂದು ಎಂಬ ಶಬ್ದ ಇಲ್ಲ. ಡಾ.ಎಸ್.ಎಲ್.ಭೈರಪ್ಪನವರು 'ಬಿತ್ತಿ' ಎಂಬ ಆತ್ಮಚರಿತ್ರೆಯನ್ನು ಪ್ರಕಟಿಸಿದ್ದಾರೆ. ಅವರು ಅನುಭವಿಸಿದ ಕಷ್ಟ ಕಾರ್ಪಣ್ಯಗಳ ವಿವರಗಳನ್ನು ಓದಿದರೆ ನಿಜಕ್ಕೂ ದುಃಖವಾಗುತ್ತದೆ.

ಎದೆಯೊಳಗಿನ ವಿಷವನ್ನೆಲ್ಲಾ 'ಆವರಣ'ದಲ್ಲಿ ಕಕ್ಕಿದ್ದಾರೆ ಎಂದುಕೊಂಡವರು ಮತ್ತೆ ಬೆಚ್ಚಿ ಬೀಳುವಂತೆ ಭೈರಪ್ಪ ಮತ್ತೆ ವಿಷ ಕಕ್ಕಿದ್ದಾರೆ. 'ವಿಜಯಕರ್ನಾಟಕ' ದಲ್ಲಿ ಅವರು ಮತಾಂತರ ಕುರಿತು ಬೃಹತ್ ಲೇಖನ ಬರೆದಿದ್ದಾರೆ. ಅದಕ್ಕೊಂದು ಪ್ರತಿಕ್ರಿಯೆ ಇಲ್ಲಿದೆ.



ಭಜರಂಗೀ ಭೈರಪ್ಪನವರ ಭೈರಿಗೆ

ಡಾ|| ಜಿ.ಭಾಸ್ಕರಮಯ್ಯ

ಅಂತಹ ಮನುಷ್ಯ ಇಷ್ಟೊಂದು ದೇಶದ್ರೋಹಿ ಭಯೋತ್ಪಾದಕ ಗುಂಪಿನ ಬುದ್ಧಿಜೀವಿಯಾಗಿ ಮಾರ್ಪಟ್ಟಿದ್ದು ಮಾತ್ರ ಈ ನಾಡಿನ ದುರಂತ. ಕ್ರೈಸ್ತ, ಇಸ್ಲಾಂ ಧರ್ಮಗಳು ಮಿಶನರಿ ಧರ್ಮಗಳು, ಅವುಗಳು ಕೇವಲ ಮತಾಂತರವನ್ನಷ್ಟೆ ಮಾಡುತ್ತವೆ ಎಂದು ಭೈರಪ್ಪನವರು ಅಜ್ಞಾಪಿಸಿದ್ದಾರೆ. ಇದಕ್ಕೆ ವಿರುದ್ಧವಾಗಿ ಕೇವಲ ಒಂದು ಉದಾಹರಣೆಯನ್ನು ನಾನೂ ಕೂಡ ಬಯಸುತ್ತೇನೆ:

ನಮ್ಮ ಕರಾವಳಿ ಕರ್ನಾಟಕದ Dr.B.A.Saletore ಅಂತರರಾಷ್ಟ್ರೀಯ ಖ್ಯಾತಿಯ ಇತಿಹಾಸ ತಜ್ಞರು (Dr.B.A.Satetore, M.A.P?.D (London) D.P?i.l(Grissen), Director, National Arc?ives of India, New Del?i) EªÀgÀÄ §gÉzÀ "T?e St?anikas and t?eir Historical Importance" ಎಂಬ ಪುಸ್ತಕದ 63-64ನೇ ಪುಟಗಳಲ್ಲಿ ಹೀಗಿದೆ:

'ಈ ದಕ್ಷಿಣ ಕನ್ನಡ ಜಿಲ್ಲೆಯ ದೇವಸ್ಥಾನಗಳ ಅಧಿಕಾರಿಗಳಾದ ಸ್ಥಾನಿಕರನ್ನು ಅದರ ಹಕ್ಕಿನವಾದ ದೇವಸ್ಥಾನಗಳ ಹಕ್ಕನ್ನೂ ದೇವಸ್ಥಾನಗಳನ್ನೂ ಅವರ ಪ್ರತಿಸ್ಪರ್ಧಿ ಮತದವರಾದ ಮಾಧ್ವರು. ಬಲಾತ್ಕಾರದಿಂದ ತಮ್ಮ ಸ್ವಾಧೀನಪಡಿಸಿ ವಗೈರೆ ಸ್ಥಳಗಳನ್ನು ಸಂದರ್ಶಿಸಿ ಶೋಧನೆ ಮಾಡಿದಾಗ ತಿಳಿದು ಬಂದಿದೆ. ನಾನು ಈ ದೇವಸ್ಥಾನಗಳಲ್ಲಿ ಸ್ಥಾನಿಕರಿಗೆ ಇರುವ ಹಕ್ಕಿನ ವಿಚಾರದಲ್ಲಿ ಸ್ಥಾನಿಕರಿಗೂ ವೈಷ್ಣವರಾದ ಮಾಧ್ವರಿಗೂ ಆದ ಜಗಳವನ್ನು ಈ ರೀತಿ ವಿವರಿಸಿ ಕೊಟ್ಟಿರುತ್ತೇನೆ. ಮಾಧ್ವರಿಂದ ದೇವಸ್ಥಾನಗಳ ಹಕ್ಕಿನ ಸ್ವಾಧೀನವು ಶಾಂತಿಯಿಂದ ನಡೆಯಲಿಲ್ಲ. ಬಲಾತ್ಕಾರದಿಂದಲೇ ಸ್ಥಾನಿಕರಿಂದ ದೇವಸ್ಥಾನಗಳ ಹಕ್ಕನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಇದನ್ನು ಕೆಲವು ದೇವಸ್ಥಾನಗಳಲ್ಲಿ ಇರುವ ದೇವರ ವಿಗ್ರಹಗಳ ದುರವಸ್ಥೆಯಿಂದಲೇ ತಿಳಿಯಬಹುದು. ಸ್ಥಾನಿಕರ ಸ್ವಾಧೀನವಿದ್ದ ಹೆಚ್ಚಿನ ವಿಗ್ರಹಗಳು ವೈಷ್ಣವರ ಸ್ವಾಧೀನ ಬಂದ ನಂತರ ಹಾಳುಗೆಡಲ್ಪಟ್ಟು, ದೇವಸ್ಥಾನಗಳ ಹತ್ತಿರ ಎಸೆಯಲ್ಪಟ್ಟಿದ್ದು ಕಾಣಸಿಗುತ್ತವೆ. (ಈ ಅನ್ಯಾಯಗಳು ಮುಸ್ಲಿಮರಿಂದಾಗಲು ಸಾಧ್ಯವಾಗಿಲ್ಲ. ಏಕೆಂದರೆ ದಕ್ಷಿಣ ಕನ್ನಡದಲ್ಲಿ ಮುಸ್ಲಿಮರ ಆಕ್ರಮಣ ನಡೆದಿಲ್ಲ. ಅಥವಾ ಟಿಪ್ಪು ಸುಲ್ತಾನನ ಕಾಲದಲ್ಲಿ ನಡೆದೇ ಇಲ್ಲ) ಕ್ರೋಡಾಶ್ರಮವೆಂದು ಹೇಳಲ್ಪಡುವ ಮಲ್ಪೆಯಲ್ಲಿ ಅಲ್ಲಿನ ಮಲ್ಲಿಕಾರ್ಜುನ ಮೂಲ ವಿಗ್ರಹವು ದೇವಸ್ಥಾನದ ಹತ್ತಿರ ಕೆರೆಗೆ ಎಸೆಯಲ್ಪಟ್ಟಿದೆ. ಈಗ ಅಲ್ಲಿ ಕಾಣುತ್ತಿರುವುದು ಮಾಧ್ವರ ಶಂಕರನಾರಾಯಣ ವಿಗ್ರಹ, ಉಡುಪಿ ಅನಂತೇಶ್ವರ ದೇವಸ್ಥಾನವು ಆದಿಯಲ್ಲಿ ಶೈವರ ಪ್ರಧಾನ ಸ್ಥಳವಾಗಿತ್ತೆಂಬುದನ್ನು ಈ ಮೊದಲೇ ನಾನು ಬರೆದ Ancient Karnataka, Part -1 ಪುಟ 449ರಲ್ಲಿ ತಿಳಿಸಿರುತ್ತೇನೆ. ಈ ಅನಂತೇಶ್ವರ ದೇವಸ್ಥಾನವನ್ನು ನಿಟ್ಟೂರಿನ ಸೋಮಲಿಂಗ ದೇವಸ್ಥಾನವನ್ನು ಹೋಲುತ್ತದೆ. ಉಡುಪಿ ತಾಲ್ಲೂಕಿನ ನಿಟ್ಟೂರು ಸೋಮಲಿಂಗ ದೇವಸ್ಥಾನವು ಕೂಡಾ ಸ್ಥಾನಿಕರಿಂದ ಬಲಾತ್ಕಾರವಾಗಿ ಸೆಳೆದುಕೊಳ್ಳಲ್ಪಟ್ಟು ಮಾಧ್ವರು ಸ್ವಾಧೀನಪಡಿಸಿ ಕೊಂಡದ್ದಾಗಿದೆ. ಇಲ್ಲಿನ ಸೋಮಲಿಂಗರನ್ನು ಕಿತ್ತೆಸೆದು ಅದರ ಸ್ಥಾನದಲ್ಲಿ ವೆಂಕಟರಮಣ ವಿಗ್ರಹವನ್ನು ಇರಿಸಲಾಗಿದೆ. ಆಲೂಪರ ರಾಜಧಾನಿಯಾದ ಉದ್ಯಾವರದಲ್ಲಿ ಮಹಾದೇವ ವಿಗ್ರಹವನ್ನು ಕಿತ್ತೆಸೆದು ಗಣಪತಿಯನ್ನು ಇರಿಸಲಾಗಿದೆ. ಇದೇ ಉಡುಪಿ ತಾಲ್ಲೂಕಿನ ಉಪ್ಪೂರಿನಲ್ಲಿ ಕೂಡ ಈಶ್ವರ ಲಿಂಗದ ಬದಲಿಗೆ ಗಣಪತಿಯನ್ನು ಇಡಲಾಗಿದೆ. ಉಡುಪಿಯ ಸರಹದ್ದಿನ ಸ್ಥಾನಿಕ ಬ್ರಾಹ್ಮಣರ 20 ಮಠಗಳು ಈಗ ವೈಷ್ಣವರ ಕೈ ಸೇರಿವೆ. ಇದೂ ಅಲ್ಲದೇ ಮಂಗಳೂರಿನ ತ್ರಿಶಿಲೇಶ್ವರ, ಶರಭೇಶ್ವರ ದೇವಸ್ಥಾನ, ಉಳ್ಳಾಲದ ಸೋಮೇಶ್ವರ ದೇವಸ್ಥಾನ, ಕುಕ್ಕೆ ಸುಬ್ರಮಣ್ಯ ದೇವಸ್ಥಾನ, ಕಬ್ಬಿನಾಲೆ ಮತ್ತು ಹೆಬ್ರಿ ದೇವಸ್ಥಾನಗಳು ಮಾಧ್ವರ ವಶವಾಗಿ ಮತಾಂತರಗೊಂಡಿವೆ'.

ವಾದಿರಾಜಸ್ವಾಮಿ ಉಡುಪಿಯ ಮಟ್ಟಿ ಎಂಬ ಪ್ರದೇಶದಲ್ಲಿನ ಮೊಗವೀರ, ಜೈನ ಮತ್ತು ಬಂಟ ಸಮುದಾಯದವರನ್ನು ತಪ್ತ ಮುದ್ರಾಧಾರಣೆ ವಿಧಿಯ ಮೂಲಕ ಮತಾಂತರಿಸಿದರು. ಇದರ ಬಗ್ಗೆ ವಿವರಗಳು ಸಾಲೆತ್ತೂರರ ಬರಹಗಳಲ್ಲೂ ಥರ್ಸ್ಟನ್ ಬರೆದ Caste and Tribes of Sout? India ದಲ್ಲಿ ಬರುತ್ತವೆ. ಸದ್ರಿ ಹಿಂದೂಗಳು ಮತಾಂತರಕ್ಕೆ ಮಾತ್ರವಲ್ಲ, 'ದೇವಾಂತರ'ಕ್ಕೂ ಪ್ರಸಿದ್ಧರು!

ಭೈರಪ್ಪನವರು ಸೋನಿಯಾ ಗಾಂಧಿಯವರನ್ನು ಕಟಕಟೆಯಲ್ಲಿ ನಿಲ್ಲಿಸಿರುವುದು ಸ್ಯಾಡಿಸ್ಟ್ ಮನೋವೃತ್ತಿ. ಅಂತೆಯೇ ಇತರ ಮತಗಳನ್ನು ಬೇಟೆಗಾರರ ಮತಗಳೆನ್ನುವುದು ಅನಾಗರೀಕ ವರ್ತನೆ. ಕಮ್ಯೂನಿಸ್ಟರನ್ನು ಹಿಂದೂ ದ್ವೇಷಿಗಳೆಂದು ಕರೆಯುವುದಂತೂ ಬುದ್ಧಿಭ್ರಮಣೆಯ ಪರಾಕಾಷ್ಠೆ. ○



ವೈದ್ಯ ವೃತ್ತಿಗೆ ತಗಲಿರುವ ಶಾಪಗಳು

ವೈದ್ಯವೃತ್ತಿ ನೂರಾರು ವರ್ಷಗಳಿಂದ ಜನರ ಆರೋಗ್ಯ ಸೇವೆ ಮಾಡುತ್ತಾ ಬಂದಿದೆ. ವೈದ್ಯ ವೃತ್ತಿಯಲ್ಲಿರುವವರು ಖಾಸಗಿ ವೈದ್ಯರೇ ಹೆಚ್ಚು ಸಂಖ್ಯೆಯಲ್ಲಿ. ವೈದ್ಯರೆಂದರೆ ದೇವರಿಗೆ ಸಮಾನ ಅನ್ನುವ ಮನೋಭಾವನೆ ಜನರಲ್ಲಿದೆ. ಆದರೆ ಇತ್ತೀಚಿಗಿನ ದಶಕಗಳಲ್ಲಿ ವೈದ್ಯವೃತ್ತಿ ವ್ಯಾಪಾರೀಕರಣಗೊಳ್ಳುತ್ತಿದೆ. ಜನರು ಈಗೀಗ ಅರ್ಥಮಾಡಿಕೊಳ್ಳುತ್ತಿದ್ದಾರೆ. ಈ ವ್ಯಾಪಾರೀಕರಣದಿಂದಾಗಿ ವೈದ್ಯವೃತ್ತಿಯಲ್ಲಿ ಬದಲಾವಣೆಯಾಗುತ್ತಿದೆ. ಜನಸಾಮಾನ್ಯರಿಗೆ ದಿನನಿತ್ಯದ ಆರೋಗ್ಯ ಸಮಸ್ಯೆಗಳಿಗೆ ಸುಲಭವಾದ ಪರಿಹಾರ ಪಡೆಯಲು ಮೊದಲಿನಷ್ಟು ಸುಲಭವಾಗಿಲ್ಲ ಹಾಗೂ ದುಬಾರಿಯಾಗುತ್ತಿದೆ. ಈ ಬದಲಾವಣೆಯಿಂದ ವೈದ್ಯವೃತ್ತಿ ಏಳು ಶಾಪಗಳಿಗೆ ಗುರಿಯಾಗಿದೆ!

ಶಾಪ 2

ವೈದ್ಯನ ಕರ್ತವ್ಯ ರೋಗ ಪತ್ತೆಹಚ್ಚುವುದು, ಚಿಕಿತ್ಸೆ ನೀಡುವುದು, ಆರೋಗ್ಯ ಸುಧಾರಿಸುವುದು ಹಾಗೂ ರೋಗ, ಚಿಕಿತ್ಸೆ ಹಾಗೂ ರೋಗ ತಡೆಗಟ್ಟುವ ಬಗ್ಗೆ ಸರಿಯಾದ ಮಾಹಿತಿ ನೀಡುವುದು. ಆದರೆ ರೋಗಿಗೆ ಮಾಹಿತಿ ಕೊಡುವುದರ ಬಗ್ಗೆ ವೈದ್ಯರು ಗಮನಹರಿಸುತ್ತಿಲ್ಲ. ಕುಟುಂಬವೈದ್ಯ ಹಾಗೂ ಆಸ್ಪತ್ರೆ ವೈದ್ಯರ ಜವಾಬ್ದಾರಿ ಈ ಮಾಹಿತಿ ನೀಡುವುದು. ಮಾಹಿತಿ ಪಡೆಯದ ಅಭ್ಯಾಸಕ್ಕೆ ಜನರು ಒಗ್ಗಿ ಹೋಗಿದ್ದಾರೆ ಹಾಗೂ ಮಾಹಿತಿ ಕೇಳಲೂ ಪ್ರಯತ್ನಿಸುವುದಿಲ್ಲ. ಆಧುನಿಕ ವೈದ್ಯಕೀಯದ ವಿಷಯಗಳು ಎಲ್ಲರಿಗೂ ತಿಳಿದಿರುವುದಿಲ್ಲ. ಆದ್ದರಿಂದ ಮಾಹಿತಿ ನೀಡುವುದು ಅತ್ಯಂತ ಮಹತ್ವದಾಗಿದೆ. ಈ ಮಾಹಿತಿ ನೀಡಲು ವೈದ್ಯ ಸಾಹಿತ್ಯವೂ ಸಜ್ಜಾಗಿಲ್ಲ. ○

ಜಗದಗಲ

ಶರತ್‌ಚಂದ್ರ

ಒಬಾಮಾ ಅಧ್ಯಕ್ಷರಾದರೆ.... ಸ್ವಲ್ಪವಾದರೂ ಬದಲಾವಣೆಗೆ ಆಸ್ಪದ ಸಿಕ್ಕೀತು!

US ELECTIONS 08

10 Days to go

ಅಮೆರಿಕದ ಅಧ್ಯಕ್ಷ ಚುನಾವಣೆ ಹಿಂದೆಂದೂ ಇಲ್ಲದ ಆಸಕ್ತಿ, ಆತಂಕ, ಭರವಸೆ ಮೂಡಿಸಿದೆ. ಅಮೆರಿಕದಲ್ಲಿ ಮಾತ್ರವಲ್ಲ, ಇಡೀ ಜಗತ್ತಿನಲ್ಲಿ. ಅಧ್ಯಕ್ಷ ಅಭ್ಯರ್ಥಿಯೊಬ್ಬರಿಗೆ ಜಗತ್ತಿನಾದ್ಯಂತ ಇಂತಹ 'ಬೆಂಬಲ' ವ್ಯಕ್ತವಾಗಿರುವುದು ಇದೇ ಮೊದಲು. 2000 ಮತ್ತು 2004 ಚುನಾವಣೆಯಲ್ಲೂ ಬುಶ್ ಸೋಲಿಸಲು ಭಾರೀ ಅಂತರ್ರಾಷ್ಟ್ರೀಯ ಬೆಂಬಲ ವ್ಯಕ್ತವಾದರೂ, ಜಾನ್ ಕೆರ್ರಿ ಅಥವಾ ಅಲ್ ಗೋರ್ ಇಂತಹ ಭರವಸೆ ಮೂಡಿಸಿರಲಿಲ್ಲ. ಒಬಾಮಾ ಅಮೆರಿಕದ ಇತಿಹಾಸದಲ್ಲೇ ವಿಶಿಷ್ಟ ಅಧ್ಯಕ್ಷ ಅಭ್ಯರ್ಥಿ ಎಂಬುದಕ್ಕೆ ಎರಡು ಮಾತಿಲ್ಲ. ಅವರು ಮೊದಲ ಕರಿಯ ಅಧ್ಯಕ್ಷ ಅಭ್ಯರ್ಥಿ ಮಾತ್ರವಲ್ಲ. ಕರಿಯ-ಮುಸ್ಲಿಂ ಆಫ್ರಿಕನ್ ತಂದೆ ಮತ್ತು ಬಿಳಿಯ ತಾಯಿ, ಜಗತ್ತಿನ ಹಲವು ದೇಶಗಳಲ್ಲಿ ವಾಸ ಇವೆಲ್ಲಾ ಅವರಿಗೆ ಒಂದು ವಿಶಿಷ್ಟ ಅಂತರ್ರಾಷ್ಟ್ರೀಯ 'ಅಪೀಲ್' ಒದಗಿಸಿದೆ. ಅವರ 'ಬದಲಾವಣೆ'ಯ ಘೋಷಣೆ ಹಲವರಿಗೆ ರೋಮಾಂಚನ ತಂದಿದೆ.

ಆದರೆ ಅದು ಅವರನ್ನು ಚುನಾವಣೆ ಗೆಲ್ಲಲು ಸಹಾಯ ಮಾಡುವುದೇ? ಒಬಾಮಾ ಅಧ್ಯಕ್ಷ ಆದಾರೇ? ಅಧ್ಯಕ್ಷರಾದರೆ ಅವರ ಪ್ರಮುಖ ಘೋಷಣೆಯಾದ 'ಬದಲಾವಣೆ' ಎಷ್ಟರ ಮಟ್ಟಿಗೆ ಜಾರಿಯಾದೀತು? ಅವರ 'ಬದಲಾವಣೆ' ಎಷ್ಟರ ಮಟ್ಟಿಗೆ ಇಂದಿನ ಅಮೆರಿಕದ ಮತ್ತು ಜಗತ್ತಿನ ಸಮಸ್ಯೆಗಳಿಗೆ ಪರಿಹಾರ ಒದಗಿಸಬಲ್ಲವು. ಒಬಾಮಾರ 'ಬದಲಾವಣೆ'ಯ ಘೋಷಣೆಯಲ್ಲಿ ಇರಾಕ್ ಯುದ್ಧಕ್ಕೆ ವಿರೋಧ ಮತ್ತು ಸೈನ್ಯ ವಾಪಸಾತಿಯ ನಿರ್ದಿಷ್ಟ ನಿಲುವು ಬಿಟ್ಟರೆ ಭಾರೀ 'ರ್‍ಯಾಡಿಕಲ್' ಎನ್ನುವಂತಹುದು ಏನೂ ಇಲ್ಲ. ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನದಲ್ಲಿ 'ಭಯೋತ್ಪಾದನೆ' ಮೇಲೆ ಯುದ್ಧ ಮುಂದುವರಿಕೆ ಇತ್ಯಾದಿ ಹೇಳಿಕೆಗಳು ವಿದೇಶ ನೀತಿಯಲ್ಲೂ ಮೂಲಭೂತ ಬದಲಾವಣೆಯ ಭರವಸೆ ಮೂಡಿಸುವುದಿಲ್ಲ.

ಒಬಾಮಾ 'ಬದಲಾವಣೆ'ಯ ಅರ್ಥ ಏನು?

ಇನ್ನು ಇತ್ತೀಚಿನ ಹಣಕಾಸು ಮಾರುಕಟ್ಟೆಯ ಪತನಕ್ಕೆ 'ಪರಿಹಾರ'ವಾಗಿ ಅದಕ್ಕೆ ಕಾರಣರಾದ 'ವಾಲ್ ಸ್ಟ್ರೀಟ್'ನ ಕ್ರಿಮಿನಲ್ ತಿಮಿಂಗಿಲಗಳಿಗೆ, 800 ಶತಕೋಟಿ ಡಾಲರುಗಳ 'ಜಾಮೀನು ಬಿಡುಗಡೆ'ಯ ಯೋಜನೆಯನ್ನು ಇತರ ಹಲವು ಉಭಯ ಪಕ್ಷಗಳ ಸೆನೆಟರ್ ಗಳಂತೆ ಒಬಾಮಾ ವಿರೋಧಿಸಲಿಲ್ಲ. ಆರ್ಥಿಕ ಬಿಕ್ಕಟ್ಟಿಗೆ ಅವರ ಪರಿಹಾರಗಳು ಕೆಲವು ಪ್ರಗತಿಪರ ತೆರಿಗೆ ಪ್ರಸ್ತಾವಗಳಿಗೆ ಸೀಮಿತವಾಗಿದೆ. ಬೇಡಿಕೆಗೆ ಉತ್ತೇಜನ ಕೊಟ್ಟು ಆರ್ಥಿಕ ಪುನಶ್ಚೇತನ ಗೊಳಿಸುವ ಯಾವ ಪ್ರಸ್ತಾವಗಳಿಲ್ಲ. ಆದರೆ ಇರಾನ್, ರಾಷ್ಟ್ರೀಯ ಭದ್ರತೆ, ಹವಾಮಾನ ಬದಲಾವಣೆ ಮುಂತಾದ ವಿಷಯಗಳಲ್ಲಿ ಆರೋಗ್ಯ ವಿಮೆ, ಗರ್ಭಪಾತ ಮುಂತಾದ ಸಾಮಾಜಿಕ ನೀತಿಗಳಲ್ಲಿ ಒಬಾಮಾ ಖಂಡಿತ ಅಗತ್ಯ ಜನಪರ 'ಬದಲಾವಣೆ'ಗೆ ಪರವಾಗಿದ್ದಾರೆ.

ಹಾಗಾದರೆ ಒಬಾಮಾ ಮೇಲೆ ಇಂತಹ ಭರವಸೆ, ಆಶಾಭಾವನೆ ಯಾತಕ್ಕೆ ಕಳೆದ 8 ವರ್ಷಗಳಲ್ಲಿ ಬುಶ್ ಅಧ್ಯಕ್ಷಗಿರಿ - ನಾಗರಿಕರನ್ನು ಬೆದರಿಸಿ ಆಳುವ ಫ್ಯಾಸಿಸ್ಟ್ 'ಆಂತರಿಕ ಭಯೋತ್ಪಾದನೆ'ಯ ನೀತಿಯ ಮೂಲಕ ಇದ್ದ ಬದ್ದ ಪ್ರಜಾಸತ್ತೆಯನ್ನು ಹೊಸಕಿ ಹಾಕಿದ್ದು; ಅತ್ಯಂತ ಶ್ರೀಮಂತ ಪರ ಮತ್ತು ಬಲಪಂಥೀಯ ನೀತಿಗಳ ಮೂಲಕ (ಹುಸಿಯಾದರೂ ಜೀವಂತವಾಗಿದ್ದ) ಜನಸಾಮಾನ್ಯರ 'ಅಮೆರಿಕನ್ ಕನಸ'ನ್ನು ಒಡೆದು ಹಾಕಿದ್ದು; ಅಮೆರಿಕವನ್ನು ಜಗತ್ತಿನಲ್ಲೇ ಅತ್ಯಂತ ದ್ವೇಷಿತ ದೇಶವಾಗಿ ಮಾಡಿದ್ದು ; ಅಭೂತಪೂರ್ವ ಆರ್ಥಿಕ ಬಿಕ್ಕಟ್ಟು ಸೃಷ್ಟಿಸಿದ್ದು-ಇವೆಲ್ಲಾ ಅಮೆರಿಕದ ಜನಮಾನಸದಲ್ಲಿ ಮೂಡಿಸಿದ ಕತ್ತಲು, ಹತಾಶೆ ಮತ್ತು ಆಕ್ರೋಶಗಳನ್ನು ಕಡೆಗಣಿಸುವಂತಿಲ್ಲ. ಎಂದಿನಂತೆ ಇವನ್ನು ಧಾರ್ಮಿಕ ಮತ್ತು ಸಾಮಾಜಿಕ ಸಾಂಪ್ರದಾಯಿಕತೆಗಳ ಕಡೆ ತಿರುಗಿಸುವ ಪ್ರಯತ್ನಕ್ಕೆ ಹಿಂದಿನ ಗೆಲುವು ಸಿಗುತ್ತಿಲ್ಲ.



'ಬಲಪಂಥೀಯ ಪ್ರತಿಕ್ರಾಂತಿ' ಹಿಮ್ಮೆಟ್ಟಿಸಲು ಅವಕಾಶ

ಜಾನ್ ಮೆಕಾನ್ ಬುಶ್ ರ ಅಪರಾವತಾರ. ಅವರಿಂದ ಯಾವುದೇ ಬದಲಾವಣೆ ಸಾಧ್ಯವಿಲ್ಲ. ಒಬಾಮಾ 'ಬದಲಾವಣೆ'ಯ ಭರವಸೆ ಅವರಿಗೆ ಮುಳುಗುವವನಿಗೆ ಕೊನೆಯ ಹುಲುಕಡ್ಡಿಯಂತೆ ಕಾಣುತ್ತಿದೆ. ಅವರು ಈಗ ಹೇಳುತ್ತಿರುವ ನೀತಿಗಳೇನೇ ಇರಲಿ (ಈಗಿನ ಬಲಪಂಥೀಯ ವಾತಾವರಣ ಮತ್ತು ಮಾಧ್ಯಮ ಒತ್ತಡದ ಸನ್ನಿವೇಶದ ಪ್ರಭಾವ ಕಡೆಗಣಿಸುವಂತಿಲ್ಲ), ಹೆಚ್ಚು ಜನ-ಕೇಂದ್ರಿತ ಮಧ್ಯಮ-ಪಂಥೀಯ ನೀತಿ ಅನುಸರಿಸುವ ಭರವಸೆಯನ್ನು ಜನತೆಯಲ್ಲಂತೂ ಮೂಡಿಸಿದ್ದಾರೆ. ಅಮೆರಿಕದ ಮತ್ತು ಜಗತ್ತಿನ ಜನಸಾಮಾನ್ಯರ ದೃಷ್ಟಿಯಿಂದ ಒಬಾಮಾ ಗೆಲುವು ಅತ್ಯಗತ್ಯ ಎಂಬ ಬಗ್ಗೆ ಎರಡು ಮಾತಿಲ್ಲ. ಅಧ್ಯಕ್ಷೀಯ ಚುನಾವಣೆ ಜತೆಗೆ ನಡೆಯುವ ಪಾರ್ಲಿಮೆಂಟರಿ ಚುನಾವಣೆಯಲ್ಲೂ 'ಬದಲಾವಣೆ'ಗೆ ಪರವಾಗಿರುವ ಅಭ್ಯರ್ಥಿಗಳು ಆಯ್ಕೆಯಾಗುವ ಸಾಧ್ಯತೆ ಇದೆ. ಹಿರಿಯ ಬುಶ್ ಕಾಲದಲ್ಲಿ ಅಮೆರಿಕದ ರಾಜಕೀಯದಲ್ಲಿ ನಡೆದ 'ಬಲಪಂಥೀಯ ಪ್ರತಿಕ್ರಾಂತಿ' ಹಿಮ್ಮೆಟ್ಟಿಸುವ ಎಲ್ಲಾ ಅವಕಾಶಗಳು ಈಗ ಇವೆ.

ಆದರೆ ಬುಶ್‌ರ ಫ್ಯಾಸಿಸ್ಟ್ ಬಲಪಂಥೀಯ ನೀತಿಗಳನ್ನು ಸಾರಾ ಸಗಟಾಗಿ ಬದಲಾಯಿಸಲು ಮತ್ತು ಅವಕ್ಕೆ ಬದಲಿ ನೀತಿಗಳನ್ನು ರೂಪಿಸಲು ಜನತೆಯ ಸತತ ಒತ್ತಡವಿಲ್ಲದೆ ಒಬಾಮಾ ಸಹ ಏನೂ ಮಾಡಲು ಸಾಧ್ಯವಿಲ್ಲ. ಆದರೆ ಇಂತಹ ಒತ್ತಡ ರೂಪಿಸುವ ರಾಜಕೀಯ ಶಕ್ತಿ ಇನ್ನೂ ಕಾಣುತ್ತಿಲ್ಲ. ಡೆಮೊಕ್ರಾಟಿಕ್ ಪಕ್ಷ ಇಂತಹ ಪಾತ್ರ ವಹಿಸುವ ಸಾಧ್ಯತೆ ಬಹಳ ಕಡಿಮೆ. ಮೂರನೇ ಶಕ್ತಿಗಳು ಮಾತ್ರವೇ ಈ ನಿರ್ವಾತ ತುಂಬಲು ಸಾಧ್ಯ. ಡೆಮೊಕ್ರಾಟಿಕ್ ಪಕ್ಷದ 'ಬದಲಾವಣೆ-ಪರ' ಶಕ್ತಿಗಳ ಜತೆ ಅವರು ಜಂಟಿ ಕಾರ್ಯಾಚರಣೆ ಮಾಡಬೇಕಾಗಿದೆ. ಅಮೆರಿಕ ಅದರ 'ಕತ್ತೆ-ಆನೆ'ಯ ಚಕ್ರವ್ಯೂಹದ ರಾಜಕೀಯದಿಂದ ಹೊರಬರಹುದು. ಒಬಾಮಾ ಅಧ್ಯಕ್ಷರಾದರೆ ಇಂತಹ ರಾಜಕೀಯ ಶಕ್ತಿಗಳಿಗೆ ಸ್ವಲ್ಪವಾದರೂ ಜಾಗ, ಆಸ್ಪದ ಸಿಗಬಹುದು ಎಂದು ಆಶಿಸಬೇಕಾಗಿದೆ.

ಒಬಾಮಾ ಗೆದ್ದಾರೆ ?

ಒಬಾಮಾ ಸದ್ಯಕ್ಕೆ ಇನ್ನೂ 11 ದಿನಗಳಿರುವಾಗ ಅಭಿಪ್ರಾಯ ಮತಗಳಲ್ಲಿ ಶೇ.10 ರಷ್ಟು ಮುಂದೆ ಇದ್ದಾರೆ. ಅವರ ಪ್ರಚಾರದ ಶೈಲಿ ಜೋರಾಗಿದೆ. ಎಲ್ಲಾ ಮಾಧ್ಯಮಗಳನ್ನು, ಸಂಪನ್ಮೂಲಗಳನ್ನು ಬಳಸಿ ಸಮರ್ಥ ಪ್ರಚಾರ ನಡೆಸಿದ್ದಾರೆ. ಜಾನ್ ಮೆಕೆನ್ ವಯಸ್ಸು-ಇಮೇಜ್, ಉಪಾಧ್ಯಕ್ಷೆ ಅಭ್ಯರ್ಥಿ ಪಾಲಿನ್ ಹಗರಣಗಳು, ಮಹಿಳಾ ವಿರೋಧಿ ಇಮೇಜ್ ರಿಪಬ್ಲಿಕನ್ನರಿಗೆ ಮುಳುವಾಗಿದೆ. ಸಾಮಾನ್ಯವಾಗಿ ಇಂತಹ ಮುನ್ನಡೆ ಒಬಾಮಾ ಗೆಲ್ಲುತ್ತಾರೆ ಎಂಬ ಭರವಸೆ ಮೂಡಿಸಬೇಕು.

ಆದರೆ ಒಬಾಮಾ ವಿಶಿಷ್ಟ ಅಭ್ಯರ್ಥಿ. ಅವರು ಕರಿಯ. ಅವರ ತಂದೆ ಅರಬ್ ಮುಸ್ಲಿಂ (ಅಂದರೆ ಬುಶ್ ರಿಪಬ್ಲಿಕನ್ ಭಾಷೆಯಲ್ಲಿ 'ಭಯೋತ್ಪಾದಕ'ರ ನೆಂಟ!). ಕರಿಯ ಅಭ್ಯರ್ಥಿಗಳ ಮಟ್ಟಿಗೆ ಅಭಿಪ್ರಾಯ ಮತಗಳು ನಿಜ ಹೇಳುವುದಿಲ್ಲ ಎಂಬುದಕ್ಕೆ ಅಮೆರಿಕದ ಇತಿಹಾಸದಲ್ಲಿ ಅಂಕೆ-ಸಂಖ್ಯೆಗಳ ಪುರಾವೆ ಇದೆ. ಕರಿಯ ಗವರ್ನರ್ ಅಭ್ಯರ್ಥಿಗಳ ಅಭಿಪ್ರಾಯ ಮತಗಳ ಮುನ್ನಡೆಯಿಂದ ನಿಜ ಮತಗಳಿಕೆಗೆ ಶೇ. 10 ರಷ್ಟು ಕಡಿಮೆಯಾಗಿರುವ ಇತಿಹಾಸ ಇದೆ. ಇದರರ್ಥ ಅಭ್ಯರ್ಥಿ ಕರಿಯನಾದಾಗ ಹೇಳುವ ಅಭಿಪ್ರಾಯಕ್ಕೂ ಕೊಡುವ ಮತಕ್ಕೂ ಹೆಚ್ಚಿನ ಅಂತರ ಇರುತ್ತದೆ. ರಿಪಬ್ಲಿಕನರು ಒಬಾಮಾ ಬಂದರೆ ಕರಿಯರು, ವಲಸೆಗಾರ ವಿದೇಶಿಯರು ಮತ್ತು ಭಯೋತ್ಪಾದಕರು ಅಮೆರಿಕವನ್ನು ಆಳುತ್ತಾರೆ ಎಂಬ ಅಪಪ್ರಚಾರವನ್ನು ಕೊನೆಯ ದಿನಗಳಲ್ಲಿ ಜೋರಾಗಿ ಮಾಡುತ್ತಾರೆ. ಅವರಿಗೆ ಈಗ ಉಳಿದಿರುವ ಒಂದೇ ದಾರಿ ಅದು.

ಅಮೆರಿಕದಲ್ಲಿ ಮತ ಚಲಾಯಿಸಲು ಪ್ರತಿ ಚುನಾವಣೆಗೆ ರಿಜಿಸ್ಟರ್ ಮಾಡಬೇಕು. ರಿಜಿಸ್ಟರ್ ಮಾಡಲು ಮನೆಯ ವಿಳಾಸದ ಪುರಾವೆ ಬೇಕು. ಮನೆ ಇಲ್ಲದವರಿಗೆ ಮತ ಇಲ್ಲ. ಇದಲ್ಲದೆ ಹಲವು ವಿಧಾನಗಳಿಂದ (ಕಾನೂನು ಬದ್ಧ, ಕಾನೂನು ಬಾಹಿರ) ಬಡವರು, ಕರಿಯರು ಚುನಾವಣೆಗೆ ರಿಜಿಸ್ಟರ್ ಮಾಡದಂತೆ ನೋಡಿಕೊಳ್ಳುವ ರಾಜಕೀಯ ಅಮೆರಿಕದಲ್ಲಿ ಚಾಲ್ತಿಯಲ್ಲಿದೆ. ಇದರ ಒಟ್ಟು ಪರಿಣಾಮ ಶೇ.50 ಮತದಾರರು ರಿಜಿಸ್ಟರ್ ಮಾಡಿಕೊಳ್ಳುತ್ತಾರೆ. ಅದರಲ್ಲಿ ಶೇ.50 ಮಾತ್ರ (ರಾಜಕೀಯ ನಿರಾಸಕ್ತಿ, ಬೆದರಿಕೆ ಇತ್ಯಾದಿ ಕಾರಣಗಳಿಂದ) ಮತದಾನ ಮಾಡುತ್ತಾರೆ. ಅಂದರೆ ಶೇ.25 ಮಾತ್ರ ಮತದಾನ ಮಾಡುತ್ತಾರೆ. ಮತಪಟ್ಟಿಯಲ್ಲಿ ಗೋಲ್ ಮಾಲ್, ಬುಶ್ 2000 ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಮತದಾನ ಮಾಡುವವರಲ್ಲಿ ಶ್ರೀಮಂತರು, ಮಧ್ಯಮ ವರ್ಗದವರು, ಬಿಳಿಯರು ಬಹುಸಂಖ್ಯಾತರು. ಮನೆ ಸಾಲ ಬಿಕ್ಕಟ್ಟಿನ ಭರಾಟೆಯಲ್ಲಿ ಹಲವು ಕರಿಯರು, ಬಡವರು ಮನೆ ಕಳೆದುಕೊಂಡಿದ್ದಾರೆ. ಅಂದರೆ ಮತ ಕಳೆದುಕೊಂಡಿದ್ದಾರೆ. ಒಬಾಮಾ ಪ್ರಚಾರ ಯಂತ್ರ ರಿಜಿಸ್ಟರ್‌ಗೆ ಬಹಳ ಒತ್ತು ಕೊಟ್ಟಿದೆ.

ಈ ಎರಡು ಅಂಶಗಳ ಅಗೋಚರ ಪರಿಣಾಮಗಳನ್ನು ಬಿಟ್ಟರೆ ಒಬಾಮಾ ಗೆಲ್ಲುವ ಎಲ್ಲಾ ಲಕ್ಷಣಗಳು ಇವೆ. ಮುಖ್ಯವಾಗಿ ಇನ್ನೂ ಆಳವಾಗುತ್ತಿರುವ ಆರ್ಥಿಕ ಬಿಕ್ಕಟ್ಟು ಮತ್ತು ಪರಿಹಾರ ಕ್ರಮಗಳಲ್ಲಿ ಜನಮರುಳು (ಜನಪರ ಅಲ್ಲದಿದ್ದರೂ) ಅಂಶಗಳೂ ಇಲ್ಲದಿರುವುದು ರಿಪಬ್ಲಿಕನ್ನರಿಗೆ ಅತಿ ದೊಡ್ಡ ಕಂಟಕವಾಗಲಿದೆ. ಅಮೆರಿಕ ಕಳೆದ 8 ವರ್ಷಗಳಲ್ಲಿ ಬಹಳ ಬದಲಾಗಿದೆ. ರಿಪಬ್ಲಿಕನ್ನರಿಗೆ ಇದು ಅರ್ಥವಾದಂತಿಲ್ಲ. ಈ ಮೇಲಿನ ಎರಡು ಅಂಶಗಳು ನಗಣ್ಯವಾಗುವಷ್ಟು ಬದಲಾಗಿರಬಹುದು. ಇವೆಲ್ಲದರ ಒಟ್ಟು ಪರಿಣಾಮ ಒಬಾಮಾಗೆ ಗೆಲುವಾಗಬಹುದು. ○

...ಜ್ಯೋತಿಷ್ಯವೆಂಬ ಮಹಾವಂಚನೆ...

...ಟ 2 ರಿಂದ

...ಭವೆಯಾದ ಘಟನೆಯನ್ನು ನೆನಪಿಸಿಕೊಳ್ಳಬಹುದು. ...ಯಾ ದಂಡ ಎಂಬೊಂದು ಸಾಧನವಿದೆ. ...ರ್ಯನ ಬಿಸಿಲಿಗೆ ಎದುರಾಗಿ ಒಂದು ಕಂಬವನ್ನು ...ಟ್ಟು ಅದರ ನೆರಳಿನ ಮೂಲಕ ಕಾಲವನ್ನು ...ಯುವುದು. ಇದು ಮಳೆಗಾಲದಲ್ಲಿ ಹೇಗೆ ಸಾಧ್ಯ? ...ತ್ರಿಯಲ್ಲಿ ಹೇಗೆ ಸಾಧ್ಯ? ನಿರಂತರ ಕಾಲದ ಗಣತಿ ...ರಿಂದ ಎಂದೆಂದಿಗೂ ಅಸಂಭವ. ಇದನ್ನು ಬಿಟ್ಟು ...ವ ಉಪಕರಣ ಆ ದಿನಗಳಲ್ಲಿ ಇದ್ದಿತು? ಅಂಥ ...ಧಕಾರದಲ್ಲಿ ತಪ್ಪು ಲೆಕ್ಕಚಾರದಲ್ಲಿ ರಚಿತವಾದ ...ತ ಯಾವ ಭವಿಷ್ಯ ಹೇಳೀತು? ಇಷ್ಟಕ್ಕೂ ಪ್ರತಿ ...ರದಿನದಲ್ಲಿ 60 ಘಳಿಗೆ ಇಲ್ಲ. ವಿವಿಧ ...ದೇಶಗಳಲ್ಲಿ ಬೇರೆ ಬೇರೆ ದಿನಗಳು ದಿನದಿನಕ್ಕೂ ...ದಲಾಗುತ್ತಿರುವ ಘಳಿಗೆಯನ್ನು ಜೋಯಿಸರು ...ಚಿತ ಪ್ರಮಾಣವುಳ್ಳ ಗ್ರೀನಿಚ್ ಗಣನೆಗೆ ...ೋಡಿಸಿದರೆ - ಲೆಕ್ಕಾಚಾರ ಹೇಗೆ ಸಾಧ್ಯ? ...ಧಾರವೇ ಸರಿಯಿಲ್ಲದ ಮೇಲೆ ಅದರ ಮೇಲೆ ...ವೆಂಥ ಭವಿಷ್ಯ ನುಡಿಯುವಿರಿ?

3. ಒಂದು ಸೂರ್ಯೋದಯದಿಂದ ಮುಂದಿನ ...ರ್ಯೋದಯದ ವರೆಗಿನ ಕಾಲಾಂತರವಾದ ...ರದಿನ ಒಂದೇ ಬಗೆಯಲ್ಲಿ ಇರುವುದಿಲ್ಲ. ಪ್ರತೀ ...ರದಿನದಲ್ಲಿಯೂ 60 ಘಳಿಗೆ ಇರುವುದಿಲ್ಲ. ...ಮಿಯ ವಿವಿಧ ಪ್ರದೇಶಗಳಲ್ಲಿ ಹಾಗೂ ವರ್ಷದ ...ೇರೆ ಬೇರೆ ದಿನಗಳಲ್ಲಿ ಎರಡು ಸೂರ್ಯೋದಯದ ...ಡುವಣ ದಿವಸದ ಕಾಲ ಪ್ರಮಾಣವು ...ದಲಾಗುತ್ತಿರುವುದು ಆ ಕಾರಣದಿಂದಲೇ. ...ಾಸರಿ ಸೌರ ದಿನವನ್ನು ಆಧಾರವಾಗಿಟ್ಟುಕೊಂಡು ... ಸಮ ಭಾಗಗಳನ್ನಾಗಿ ಮಾಡಿ ಪ್ರತಿಯೊಂದನ್ನೂ ...ಟೆಯೆಂದು ವ್ಯವಹಾರದಲ್ಲಿ ಬಳಸುತ್ತಾರೆ. ಅದು ...ಾಸರಿ ಸೌರಗಂಟೆ. ಅದು ಬದಲಾಗುವುದೇ ಇಲ್ಲ. ...ದಿನವೂ ಬದಲಾಗುತ್ತಿರುವ ಘಳಿಗೆಯನ್ನು ಖಚಿತ ...ಮಾಣವುಳ್ಳ ಗಂಟೆಗೆ ಜೋಡಿಸುವುದು ತಪ್ಪು ...ಕ್ಕಾಚಾರಕ್ಕೆ ಎಡೆಮಾಡಿಕೊಡುವುದು ಎಂದು ...ಗೋಲ ವಿಜ್ಞಾನಿಗಳು ಆಕ್ಷೇಪಿಸುತ್ತಾರೆ. ಈ ಬಗ್ಗೆ ತಮ್ಮ ಅಭಿಪ್ರಾಯವೇನು?

4. ಬೆಳಕು ಒಂದು ಸೆಕೆಂಡಿಗೆ 3 ಲಕ್ಷ ಕಿ.ಮೀ. ಮೈಲು ಸಂಚರಿಸುತ್ತದೆ. ಇದರಿಂದಾಗಿ ಎಲ್ಲಾ ಆಕಾಶಕಾಯಗಳು ನಮಗೆ ತೋರುವುದಕ್ಕೂ ವಾಸ್ತವವಾಗಿ ಅವು ಇರುವುದಕ್ಕೂ ಬಹಳ ಅಂತರವಿದೆ. ಜ್ಯೋತಿಷ್ಯ ಶಾಸ್ತ್ರ ಇದನ್ನೇನಾದರೂ ಗಣನೆಗೆ ತೆಗೆದುಕೊಂಡಿದೆಯೆ? ತೆಗೆದುಕೊಂಡಿದ್ದಲ್ಲಿ ಯಾವ ರೀತಿ?

5. ಸೂರ್ಯೋದಯದ ಕಾಲ ಗಣನೆ ಹೇಗೆ?

ಸೂರ್ಯ ಕಿರಣಗಳ ಬಾಗುವಿಕೆಯಿಂದ ಸೂರ್ಯೋದಯಕ್ಕೆ ಎರಡು ನಿಮಿಷಗಳ ಮುಂಚೆಯೇ ಸೂರ್ಯೋದಯ ವಾಗುತ್ತದೆ. ಶುಕ್ರ ಗ್ರಹ ಇರುವುದಕ್ಕೂ ತೋರುವುದಕ್ಕೂ 6 ನಿಮಿಷ ವ್ಯತ್ಯಾಸವಿದೆ. ಹಾಗಿದ್ದರೆ ಹೇಗೆ ಸೂರ್ಯೋದಯದ ಕಾಲವನ್ನು ನಿರ್ಣಯಿಸುತ್ತೀರಿ?

ಘಟಿಯಾರದ ನಿಖರತೆ ಸ್ಪಷ್ಟ - ಜಗತ್ತಿಗೆಲ್ಲಾ ಒಂದೇ ಕಾಲಮಾನ. ಆದರೆ ನಿಮ್ಮ ಪಂಚಾಗಗಳಲ್ಲಿ ಏಕಾದಶಿ, ಅಷ್ಟಮಿ, ಶಿವರಾತ್ರಿ ಏಕೆ ಎರಡೆರಡಾಗಿವೆ?



ಜ್ಯೋತಿಷಿ ಸೋಮಯಾಜಿ

ಒಂದು ಘಟನೆಯ ಕಾಲವನ್ನು ಇಷ್ಟನೆಯ ದಿನಾಂಕ, ಗ್ರೀನಿಚ್ ಇಷ್ಟನೆಯ ಗಂಟೆ, ಇಷ್ಟನೆಯ ನಿಮಿಷ, ಇಷ್ಟನೆಯ ಸೆಕೆಂಡು ಎಂದು ತಿಳಿಸಿದರೆ ಪ್ರಪಂಚದ ಎಲ್ಲಾ ಜನರಿಗೂ ಒಂದೇ ಕಾಲ ಬೋಧಿತವಾಗುತ್ತದೆ. ಪಂಚಾಂಗಗಳು ಒಂದಕ್ಕಿಂತ ಒಂದು ಭಿನ್ನವಾಗಿದೆ. ಉದಾ: ಏಕಾದಶಿಯ ತಿಥಿಯ ಆರಂಭ ಅಥವಾ ಕೃಷ್ಣಾಷ್ಟಮಿ ಮುಗಿಯುವ ಸಮಯವನ್ನು ನಮ್ಮ ದೇಶದ ನಾನಾ ಪಂಚಾಂಗಗಳು ಒಂದೇ ಕಾಲವನ್ನಾಗಿ ಸೂಚಿಸುವುದಿಲ್ಲ. ಹೀಗಿದ್ದರೆ ಫಲ ಜ್ಯೋತಿಷ್ಯಕ್ಕೆ ಆಧಾರವೇ ಸುಳ್ಳಾಗುವುದಿಲ್ಲವೆ?

6. ನೀವು ಆಯನ ಚಲನೆಯನ್ನು ಗಣನೆಗೆ ತೆಗೆದುಕೊಳ್ಳುವಿರಾ? ತೆಗೆದುಕೊಳ್ಳುವುದಿಲ್ಲವಾದರೆ ಪ್ರತ್ಯಕ್ಷಕ್ಕೆ ವಿರುದ್ಧವಾದ ಗ್ರಹಸ್ಥಾನಗಳು ಆ ಲೆಕ್ಕದಿಂದ ಸಿದ್ಧವಾಗುವುದು. ತೆಗೆದುಕೊಳ್ಳವಿರಾದರೆ ಒಂದು ವರ್ಷದಲ್ಲಿ ಆಯನ ಚಲನೆಯ ಪ್ರಮಾಣ ಎಷ್ಟಾಗಿರುತ್ತದೆ? ಮತ್ತು ನೀವದನ್ನು ಪ್ರಯೋಗದ ಮೂಲಕ ಹೇಗೆ ಸಾಧಿಸುತ್ತೀರಿ?

7. *ಗೋಲಸ್ಯ ಪರಿಚ್ಛೇದಂ ಕರ್ತುಂ*
ಯಂತ್ರವಿನಾ ಯಥಾ ಶಕ್ಯಃ ॥

ಎಂಬುದು ಬ್ರಹ್ಮಗುಪ್ತನ ಮಾತು. ಪ್ರಾಯೋಗಿಕ ಯಂತ್ರ ಜ್ಞಾನವಿಲ್ಲದೆ ಖಗೋಲದ ಸಮೀಕ್ಷೆ ಅಸಾಧ್ಯ ಎಂಬುದು ಇದರ ಅರ್ಥ. ನಮ್ಮ ಜ್ಯೋತಿಷಗಳೊಡನೆ ಗ್ರಹಗಳ ಸ್ಥಾನ ನಿರ್ದೇಶನ ಮಾಡಲು ಯಾವ (ಸೂಕ್ಷ್ಮ) ಯಂತ್ರವಿದೆ? ಬ್ರಹ್ಮಗುಪ್ತನಂತಹ ಮಹಾನ್ ಜ್ಯೋತಿಷಿಯು ಯಂತ್ರಗಳಿಲ್ಲದಿದ್ದರೆ ಗ್ರಹಗಳ ಸ್ಥಾನ ನಿರ್ದೇಶಿಸಲು ಸಾಧ್ಯವಿಲ್ಲವೆನ್ನುತ್ತಾನೆ. ಹಾಗಿದ್ದರೆ ಜೋಯಿಸರೆ, ನಿಮ್ಮೊಡನೆ ಎಂತಹ ಯಂತ್ರವಿದೆ? ಈ ಬಗ್ಗೆ ನಮಗೆ ಮಾಹಿತಿ ಕೊಡುವಿರಾ?

8. 'ಪ್ರತಿಯೊಂದು ಗ್ರಹವೂ ಸೂರ್ಯನ ಸುತ್ತ ಎಲಿಪ್ಸ್ ಎಂಬ (ಕೋಳಿ ಮೊಟ್ಟೆಯಾಕಾರದ) ದೀರ್ಘ ವೃತ್ತದ ದಾರಿಯಲ್ಲಿ ನಿರಂತರವಾಗಿ ಸಂಚರಿಸುತ್ತದೆ' ಎಂಬುದಾಗಿ ಕೆಪ್ಲರ್ ಹೇಳಿದ್ದಾನೆ. ಈ ದೀರ್ಘ ವೃತ್ತದ ಲಕ್ಷಣಗಳೇನು? ಅಂತಹ ಕಕ್ಷೆಯೊಂದರಲ್ಲಿ ಚಲಿಸುವ ಗ್ರಹಸ್ಥಾನವನ್ನು ಖಚಿತವಾಗಿ ನಿರ್ದೇಶಿಸಲು ನಮ್ಮ ಜ್ಯೋತಿಷ್ಯಶಾಸ್ತ್ರ ಪರಂಪರೆಯಲ್ಲಿ ಏನಾದರೂ ಸಂಶೋಧನಾ ದಾಖಲೆಗಳು ಇವೆಯೆ?

9. 'ಧೂಮಕೇತು'ವಿನ ಆವಿರ್ಭಾವವನ್ನು ಜ್ಯೋತಿಷ್ಯ ಹೇಳಬಲ್ಲುದೆ? ನಮ್ಮ ಪುರಾತನರು (ಮಹರ್ಷಿಗಳು!) ಗಣನೆ ಮಾಡಿದ ಯಾವುದಾದರೂ ಎರಡು ಧೂಮಕೇತುಗಳ ಕಾಲಚಕ್ರವನ್ನು ಕೊಡಬಲ್ಲಿರಾ?

10. ಯುರೇನಸ್, ನೆಪ್ಚೂನ್, ಪ್ಲೂಟೋ - ಮತ್ತು ಮೂವತ್ತಕ್ಕೂ ಹೆಚ್ಚು ಉಪಗ್ರಹಗಳನ್ನು ನಮ್ಮ ಪರಂಪರಾಗತ ಜ್ಯೋತಿಷ್ಯ ಗ್ರಂಥಗಳಲ್ಲಿ ಗಣನೆಗೆ ತೆಗೆದುಕೊಂಡಿರುವರೆ? ತೆಗೆದುಕೊಂಡಿದ್ದರೆ ಯಾವ ಗ್ರಂಥ ಮತ್ತು ಎಲ್ಲಿ?

11. ಸೂರ್ಯ ಚಂದ್ರರು ಗ್ರಹಗಳಲ್ಲ (ಸೂರ್ಯ ನಕ್ಷತ್ರ, ಚಂದ್ರ ಒಂದು ಉಪಗ್ರಹ). ರಾಹು ಕೇತುಗಳು ಅಸ್ತಿತ್ವವೇ ಇಲ್ಲದ ಕಾಲ್ಪನಿಕ ಬಿಂದುಗಳು. ಒಂಬತ್ತರಲ್ಲಿ ನಾಲ್ಕಕ್ಕೆ ಅಸ್ತಿತ್ವವೇ ಇಲ್ಲದ ಮೇಲೆ ಈ ಲೆಕ್ಕಾಚಾರಕ್ಕೆ ಏನು ಅರ್ಥ ಎಂದು ದಯವಿಟ್ಟು ತಿಳಿಸುವಿರಾ?

12. ಎಲ್ಲವೂ ಪೂರ್ವನಿಶ್ಚಿತ ಎಂದಾದರೆ - ಅದನ್ನು ತಳ್ಳಿ ಹಾಕುವುದಾದರೂ ಹೇಗೆ? ಪೂರ್ವ ನಿಶ್ಚಿತವನ್ನು ಜ್ಯೋತಿಷ್ಯ ನಂಬುವುದರಿಂದ ಜಪ ಅಥವಾ ಇತರ ಹರಕೆಗಳಿಂದ - ಹವನಾದಿಗಳಿಂದ ಹೇಗೆ 'ಆಗುವುದನ್ನು' 'ಆಗದೆ ಇರುವಂತೆ' ಮಾಡಬಹುದು?


13. ಮನುಷ್ಯನ ಭವಿಷ್ಯವು ಜನನ ಕಾಲಾನುಸಾರವಾಗಿ ಇರುವುದಾದರೆ, ತಮ ತಮಗೆ ಬೇಕಾದಂತೆ ಶುಭ - ಅಶುಭ ಗಳಿಗೆಯಲ್ಲಿ ಮಗುವಿನ ಜನನವಾಗುವಂತೆ (ಸಿಸೇರಿಯನ್ ಇತ್ಯಾದಿ ಕ್ರಮಗಳಿಂದ) ಮಾಡಬಹುದು. ಆ ಮೂಲಕ ಆತನ ಜನನ ಕಾಲವನ್ನೂ ಭವಿಷ್ಯವನ್ನು ತಿಳಿಯಬಹುದು. ಆಗ ನಾವೇ ಬ್ರಹ್ಮ (!) - ಇದಕ್ಕೆ ನೀವೇನೆನ್ನುತ್ತೀರಿ.

14. ಮನುಷ್ಯನ ಭವಿಷ್ಯವನ್ನು ನಿರ್ಣಯಿಸುವುದು ಯಾವುದು? ಗ್ರಹ ನಕ್ಷತ್ರಗಳ ಪ್ರಭಾವವೆ? ಆತನ ಪೂರ್ವ ಜನ್ಮದ ಫಲವೆ? ಅಥವಾ ದೇವರೆ? (ಇವೆಲ್ಲವೂ ಒಂದಕ್ಕೊಂದು ವಿರುದ್ಧವಾಗಿವೆ !).

15. ಈ ದೇಶದಲ್ಲಿ 1930 ನೆಯ ಇಸವಿಗೆ ಮನುಷ್ಯನ ಸರಾಸರಿ ಆಯುಷ್ಯ 21 ವರ್ಷವಿತ್ತು. ಈಗ 50 ಕ್ಕೂ ಮೇಲೆ ಏರಿದೆ. ಇದು ಹೇಗಾಯಿತು? ಗ್ರಹಗಳು ಉಪರಾಟಿ ತಿರುಗಿದವೇ ಎಂದು ದಿ. ಕೆ. ಎಲ್. ಕಾರಂತರು ಅಂದು ಪ್ರಶ್ನಿಸಿದರು. ಮಾನ್ಯ ಜ್ಯೋತಿಷಿಗಳೇ, ಇದು ಹೇಗಾಯ್ತೆಂದು ಇನ್ನಾದರೂ ಯೋಚಿಸಿ ಹೇಳುವಿರಾ?

16. ಕೊನೆಯದಾಗಿ ಒಂದು ಪ್ರಶ್ನೆ: ಪಾಶ್ಚಾತ್ಯರಿಗೆ ಯಂತ್ರೋಪಕರಣಗಳಿಂದ ಸಿಕ್ಕಿದ ಶೋಧನೆಗಳಲ್ಲದೆ ನಿಮ್ಮ ದಿವ್ಯ ದೃಷ್ಟಿಗೆ ಏನಾದರೂ ಹೊಸತು ಕಂಡಿದೆಯೆ? ಕಂಡಿದ್ದರೆ ದಯವಿಟ್ಟು ತಿಳಿಸಿ.

○



ಬಂಡಾಯಗಾರ ಡಾ. ಆರ್.ವಿ.ಭಂಡಾರಿ ಇನ್ನಿಲ್ಲ

ಪತ್ರಿಕೆ ಮುದ್ರಣಕ್ಕೆ ಹೋಗುವ ಹೊತ್ತಿನಲ್ಲಿ ಒಂದು ಅತ್ಯಂತ ದುಃಖದ ಮತ್ತು ಆಘಾತಕಾರಿ ಸುದ್ದಿಯ ಕುರಿತು ಬರೆಯ ಬೇಕಾಗಿದೆ. ನಮ್ಮ ನಾಡಿನ ಖ್ಯಾತ ಬಂಡಾಯ ಸಾಹಿತಿಗಳು, ವಿಮರ್ಶಕರೂ ಆದ ಡಾ. ಆರ್. ವಿ. ಭಂಡಾರಿಯವರು ಕೊನೆಯುಸಿರೆಳೆದಿದ್ದಾರೆ. ಜನಶಕ್ತಿಯ ಆತ್ಮೀಯ ಒಡನಾಡಿಗಳು, ಹಿತೈಷಿಗಳೂ ಆಗಿದ್ದ ಆರ್. ವಿ ಯವರು ಇಂದು (ಅಕ್ಟೋಬರ್ 25, 2008) ಮಧ್ಯಾಹ್ನ ಉಡುಪಿಯ ಮಣಿಪಾಲ್ ಆಸ್ಪತ್ರೆಯಲ್ಲಿ ತೀರಿಕೊಂಡಿದ್ದಾರೆ.

ಕತೆ, ಕಾದಂಬರಿ, ನಾಟಕ, ಸಾಹಿತ್ಯ ವಿಮರ್ಶೆ, ವೈಚಾರಿಕ ಸಾಹಿತ್ಯ, ಮಕ್ಕಳ ಸಾಹಿತ್ಯ ಹೀಗೆ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಮಹತ್ವದ ಕೊಡುಗೆಗಳನ್ನು ನೀಡಿರುವ ಆರ್. ವಿ. ಭಂಡಾರಿಯವರ 'ಯಶವಂತನ ಯಶೋಗೀತ' ಕೃತಿಗೆ 2002ರ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಕೂಡ ಲಭಿಸಿದೆ.

ಬಂಡಾಯ ಸಾಹಿತ್ಯ ಚಳವಳಿಯ ಒಂದು ಗಟ್ಟಿ ದನಿಯಾಗಿದ್ದ ಡಾ. ಆರ್. ವಿ. ಭಂಡಾರಿಯವರು. ಪ್ರಗತಿಪರ ಚಳವಳಿಗಳ ಜೊತೆಗೆ ಅತ್ಯಂತ ನಿಕಟ ಒಡನಾಟವನ್ನು ಇಟ್ಟುಕೊಂಡು ತಮ್ಮ ಸೃಜನಶೀಲ ಕೃತಿಗಳಲ್ಲೂ ಅದೇ ಜನಪರ, ಪ್ರಗತಿಪರ ದನಿಯನ್ನೇ ಮೊಳಗಿಸುತ್ತಾ ಬಂದವರು.

'ಕನ್ನಡ ಕಾದಂಬರಿಗಳಲ್ಲಿ ವರ್ಣ ಮತ್ತು ವರ್ಗ ಸಂಘರ್ಷ', 'ವರ್ಣದಿಂದ ವರ್ಗದ ಕಡೆಗೆ'ಯಂತಹ ಸಾಹಿತ್ಯ ವಿಮರ್ಶಾತ್ಮಕ ಕೃತಿಗಳು 'ತಲೆಮಾರು' ಸೇರಿದಂತೆ ಸೃಜನ ಶೀಲ ಕೃತಿಗಳಿಂದ ಆರ್. ವಿ. ಭಂಡಾರಿಯವರು ಖ್ಯಾತರಾಗಿದ್ದರು.

ಅಗಲಿದ ಹಿರಿಯ ಸಂಗಾತಿ ಭಂಡಾರಿಯವರಿಗೆ ಜನಶಕ್ತಿ ಪತ್ರಿಕೆ, ಕಂಬನಿ ಮಿಡಿದಿದೆ. ಮಂಗಳೂರಿನಲ್ಲಿ ಸಭೆ ಸೇರಿದ್ದ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯು ಆರ್. ವಿ.ಯವರ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸಿದ್ದು, ಅತೀವ ಶೋಕ ವ್ಯಕ್ತಪಡಿಸಿದೆ.

- ಸಂ.

ಆರ್.ವಿ.ಯವರ ಬದುಕು ಕೊಡುಗೆಗಳ ಕುರಿತ ಬರಹ ಪತ್ರಿಕೆಯ ಮುಂದಿನ ಸಂಚಿಕೆಯಲ್ಲಿ ಪ್ರಕಟಗೊಳ್ಳಲಿದೆ.

‘ಹೆಣ್ಣಿಗೆ ಉಳಿಸಿ ಹುಟ್ಟುವ ಸ್ವಾತಂತ್ರ್ಯ - ಹೆಣ್ಣು ಭ್ರೂಣ ಹತ್ಯೆ ನಿಲ್ಲಿಸಿ’

‘ಜನವಾದಿ’ ನೇತೃತ್ವದಲ್ಲಿ ಯಶಸ್ವಿ ಪ್ರಚಾರಾಂದೋಲನ

ಈ ಮೇಲಿನ ಘೋಷಣೆಯಡಿಯಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ರಾಷ್ಟ್ರೀಯ ಸೇವಾ ಆಯೋಗ (ಎನ್‌ಎಸ್‌ಸ್), ಬೆಂಗಳೂರು ವಿಶ್ವವಿದ್ಯಾಲಯ ಸಹಯೋಗದಲ್ಲಿ ‘‘ಜನಜಾಗೃತಿ ಜಾಥಾವನ್ನು ಸೆ.24 (ಅಂತರರಾಷ್ಟ್ರೀಯ ಹೆಣ್ಣು ಮಗುವಿನ ದಿನ) ರಿಂದ ಅಕ್ಟೋಬರ್ 2, 2008ರ ವರೆಗೆ ಬೆಂಗಳೂರಿನ ವಿವಿಧ ಕಾಲೇಜುಗಳಲ್ಲಿ (110) ಕಾರ್ಯಕ್ರಮವನ್ನು ಹಾಗೂ 35 ಕಾಲೇಜುಗಳಲ್ಲಿ ಕಾಲೇಜಿನಿಂದ ಕಾಲೇಜಿಗೆ ಜಾಥಾ ನಡೆಸಿತು. ಈ ಕಾರ್ಯಕ್ರಮ ಕೇವಲ ಕಾರ್ಯಕ್ರಮವಾಗದೇ ಜನತಾ ಆಂದೋಲನವಾಗಿ ಪರಿವರ್ತನೆ ಗೊಳ್ಳುವ ನಿಟ್ಟಿನಲ್ಲಿ ಯಶಸ್ವಿ ಪ್ರಯತ್ನವಾಗಿದೆ. ಬೆಂಗಳೂರಿನ ಎಲ್ಲಾ ವಿಭಾಗದ ಜನತೆಯನ್ನು ಈ ಗಂಭೀರ ಸಮಸ್ಯೆ ಮುಟ್ಟಿ, ಅವರ ಮನವನ್ನು ತಟ್ಟುವಲ್ಲಿ ಸಮುದಾಯ ಸಾಂಸ್ಕೃತಿಕ ಸಂಘಟನೆ, ವಾರ್ತಾ ಇಲಾಖೆ, ಭಾರತ ಯಾತ್ರಾ ಕೇಂದ್ರ, ಟಿ.ವಿ. ಅಸೋಸಿಯೇಷನ್ ಚಲನಚಿತ್ರ ಕಲಾವಿದರ ಸಂಘ ಜನವಾದಿಯ ಹೆಜ್ಜೆಯೊಂದಿಗೆ ಹೆಜ್ಜೆ ಹಾಕಿ ಸಹಕರಿಸಿದೆ. ಇದರ ಜೊತೆ ಜೊತೆಯಲ್ಲೇ ಈ ಪಿಡುಗನ್ನು ಕಿತ್ತುಬಿಸಾಡಲು ಕಂಕಣಬದ್ಧರಾಗಿ ಯೂತ್ ಸೆಂಟರ್ ಸಹ ಕೈ ಜೋಡಿಸಿದುದು ಹೆಮ್ಮೆಯ ವಿಷಯ. 30-09-2008 ರಂದು ಯೂತ್ ಸೆಂಟರ್‌ನ ಸಹಯೋಗದೊಂದಿಗೆ ‘ಮಹಿಳೆಯರು ಇಲ್ಲದ ನಾಳೆಗಳು ಯಾರು ಹೊಣೆ?’ ಕುರಿತಾದ ವಿಚಾರ ಸಂಕಿರಣವನ್ನು ನಡೆಸಲಾಯಿತು. ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ‘ಉದಯವಾಣಿ’ ದಿನಪತ್ರಿಕೆಯ ಸಂಪಾದಕಿ ಆರ್.ಪೂರ್ಣಿಮ ಇತಿಹಾಸ ಎಂಬುದು ಮಹಿಳಾ ಪರವಾಗಿಲ್ಲ, ಪುರುಷ ಪರವಾದದ್ದು. ಮಹಿಳೆ ಚಿಂತನಾಶೀಲಳಾಗಬೇಕು. ಪರಂಪರೆಯನ್ನು ಪ್ರಶ್ನಿಸಬೇಕು. ಹಾಗಾಗಬೇಕು ಎಂದರೆ ಆಕೆಗೆ ಸರಿಯಾದ ಶಿಕ್ಷಣ ಬೇಕು. ಐಕ್ಯ ಹೋರಾಟ ಆಗಬೇಕು ಎಂದರು. ಕೆ.ಎಸ್.ವಿಮಲಾ, ಗೌರಮ್ಮ ಬಿ.ಎಸ್.ಸಂಕೇಶ್, ಯೂತ್ ಸೆಂಟರ್‌ನ ಉಪ ನಿರ್ದೇಶಕರಾದ ಆರ್.ಎಲ್. ಪಾಟೀಲ್, ಎನ್‌ಎಸ್‌ಎಸ್‌ನ ರಾಜ್ಯ ಸಂಪರ್ಕಾಧಿಕಾರಿಗಳಾದ ಡಾ|| ಅಕ್ಕಮಹಾದೇವಿ ನಾಡಗೌಡ ಮತ್ತಿತರರು ಭಾಗವಹಿಸಿದ್ದರು. ಎನ್‌ಎಸ್‌ಎಸ್ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ವಲಯಗಳಿಂದ ಜನವಾದಿ ಕಾರ್ಯ ಕರ್ತರು, ಇತರರು ಭಾಗವಹಿಸಿದ್ದರು.

ಜಾಥಾದ ಸಮಾರೋಪ ಕಾರ್ಯಕ್ರಮ ಅಗಸ್ಟ್ 2 ರಂದು ರವೀಂದ್ರ ಕಲಾಕ್ಷೇತ್ರದ ಹಿಂಭಾಗದ ಸಂಸ ಬಯಲು ರಂಗಮಂದಿರದಲ್ಲಿ ವರುಣನ ಆರ್ಭಟದೊಂದಿಗೆ ಅತ್ಯಂತ ಯಶಸ್ವಿಯಾಗಿ ನಡೆಯಿತು. ಸಮಾರೋಪ ಕಾರ್ಯಕ್ರಮವನ್ನು ಮಳೆಯ ಮಧ್ಯದಲ್ಲೂ ಉದ್ಘಾಟಿಸಿ ಮಾತನಾಡಿದ ಚಲನಚಿತ್ರ ಕಲಾವಿದೆ, ಕರ್ನಾಟಕ ರಾಜ್ಯ ಚಲನಚಿತ್ರೋದ್ಯಮ ಮಂಡಳಿಯ ಪ್ರಥಮ ಮಹಿಳಾ ಅಧ್ಯಕ್ಷೆ ಡಾ.ಜಯಮಾಲ ನಾಗರೀಕತೆ ಬೆಳೆದಂತೆಲ್ಲಾ ಮನುಷ್ಯ ಕ್ರೂರಿ ಆಗುತ್ತಿದ್ದಾನೆ. ಅದಕ್ಕೆ ಸಾಕ್ಷಿ ಹೆಣ್ಣು ಭ್ರೂಣಹತ್ಯೆ. ಕಾಣೆಯಾಗುತ್ತಿರುವ ಹೆಣ್ಣಿನ ಸಂಖ್ಯೆಯ ಜೊತೆಯಲ್ಲೇ ಇಂದು ಹೆಣ್ಣು ಭ್ರೂಣಹತ್ಯೆ ಹೆಚ್ಚಾಗುತ್ತಿದೆ. ಹೆಣ್ಣನ್ನೇ ಇಲ್ಲವಾಗಿಸುವ ಮನಸ್ಸುಗಳು ಹೆಣ್ಣನ್ನೇ ದ್ರೋಹಿಯಾಗಿ ಮಾಡುತ್ತಿದೆ. “ಹೆಣ್ಣಿಗೆ ಉಳಿಸಿ ಹುಟ್ಟುವ ಸ್ವಾತಂತ್ರ್ಯ’’ ಎಂಬ ಶೀರ್ಷಿಕೆ ನಿಜಕ್ಕೂ ಅರ್ಥಗರ್ಭಿತ ಎಂದರು. ಪ್ರೊ.ಜಿ.ಕೆ.ಗೋವಿಂದ ರಾವ್ ಮಾತನಾಡಿ, ಮನಸ್ಸುಗಳ ಕ್ರಿಯಾಶೀಲತೆಯನ್ನು ನಾಶ ಮಾಡುವುದೇ ಸ್ತ್ರೀ ಭ್ರೂಣಹತ್ಯೆಯ ಹಿಂದಿರುವ ಹುನ್ನಾರ. ಸ್ವಾತಂತ್ರ್ಯ ಎಂಬುದು ಕುಟುಂಬದಿಂದ ಪ್ರಾರಂಭವಾಗಬೇಕು. ಮಹಿಳೆ ಮೊದಲು ತನ್ನನ್ನು ತಾನು ಗೌರವಿಸಲು ಕಲಿಯಬೇಕು. ಆಗ ಮಾತ್ರ ಸಮಾನತೆಗಾಗಿನ ಅವರ ಹೋರಾಟ ಯಶಸ್ವಿಯಾಗಬಲ್ಲದು ಎಂದರು. ಇದೇ ಸಂದರ್ಭದಲ್ಲಿ ಫಾದರ್ ಜೆಸೆರಾ ಮಾತನಾಡಿ ಹೆಣ್ಣು ಭ್ರೂಣ ಹತ್ಯೆ ಒಂದು ಮೌನ ಕೊಲೆ, ಇದರ ವಿರುದ್ಧದ ಹೋರಾಟ ಎಂದರೆ ಸಮಾಜ ಬದಲಾವಣೆ ಹೋರಾಟ ಎಂದರ್ಥ. ಸಮಾಜ ಬದಲಾವಣೆ ಬಯಸುವವರು ಮೊದಲು ಸಮಾಜದ ಭಾಗವಾಗಬೇಕು ಎಂದು ಕರೆ ನೀಡಿದ್ದ ಗಾಂಧೀಜಿಯವರ ಮಾತನ್ನು ಅಕ್ಷರಶಃ ಯಶಸ್ವಿ ಮಾಡಲು ಸಮಾಜದ ಎಲ್ಲರೂ ಜನವಾದಿ ಮಹಿಳಾ ಸಂಘಟನೆಯ ಈ ಮಹೋನ್ನತ ಕಾರ್ಯದಲ್ಲಿ ಭಾಗಿಯಾಗೋಣ ಎಂದರು. ಡಾ|| ಅಕ್ಕಮಹಾದೇವಿ ನಾಡಗೌಡ, ವಿಮಲಾ.ಕೆ.ಎಸ್, ಲಕ್ಷ್ಮಿ.ಕೆ.ಎಸ್. ಮಾತನಾಡಿದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಕಾಲೇಜು ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಬಹುಮಾನ ವಿತರಿಸಲಾಯಿತು.



ಈ ಜನಜಾಗೃತಿ ಜಾಥಾದ ಮುಂದುವರಿದ ಭಾಗವಾಗಿ ಆಗಸ್ಟ್ 11, 12, 13 ರಂದು ಎಸ್.ಸಿ.ಎಂ. ಹೌಸ್‌ನಲ್ಲಿ ಪ್ರೇರಣ ಶಿಬಿರವನ್ನು ನಡೆಸಲಾಯಿತು. ಎರಡು ದಿನಗಳ ಈ ಶಿಬಿರಕ್ಕೆ ಮಹಿಳಾ ಅಧ್ಯಯನ ಕೇಂದ್ರ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಕರ್ನಾಟಕ ರಾಜ್ಯ ಸರ್ಕಾರ, ಸಮತಾ, ಭಾರತ ಜ್ಞಾನವಿಜ್ಞಾನ ಸಮಿತಿ ಕಾರ್ಯಕರ್ತರು, ಅಧಿಕಾರಿಗಳು ಹಾಗೂ ಎನ್‌ಎಸ್‌ಎಸ್‌ನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು. ಈ ಶಿಬಿರ ವಿಭಾಗೀಯ ಮಟ್ಟದ ಶಿಬಿರವಾಗಿದ್ದುದರಿಂದ ಕೋಲಾರ, ಬೆಂಗಳೂರು, ತುಮಕೂರು, ಮಂಡ್ಯ, ಚಿಕ್ಕಬಳ್ಳಾಪುರ ಜಿಲ್ಲೆಗಳಿಂದ 125 ಜನ ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು. ಶಿಬಿರದಲ್ಲಿ 7 ಗೋಷ್ಠಿಗಳನ್ನು ನಡೆಸಲಾಯಿತು. ಈ ಗೋಷ್ಠಿಗಳಲ್ಲಿ ವೈದ್ಯರು, ವಕೀಲರು, ಪತ್ರಕರ್ತರು, ಪೊಲೀಸ್ ಅಧಿಕಾರಿಗಳು, ಶಿಕ್ಷಣ ತಜ್ಞರು ಪಾಲ್ಗೊಂಡು ಈ ಶಿಬಿರವನ್ನು ಯಶಸ್ವಿಗೊಳಿಸಲು ಸಹಕರಿಸಿದುದು ಈ ಶಿಬಿರದ ವಿಶಿಷ್ಟತೆ. ಹಂಪಿ ಮಹಿಳಾ ಅಧ್ಯಯನ ಕೇಂದ್ರದವರ ಕೊಡುಗೆ ಅಪಾರ. ಒಟ್ಟಾರೆ ಈ ಜನ ಜಾಗೃತಿ ಕಾರ್ಯಕ್ರಮ ಕಾಲೇಜಂಗಳದಲ್ಲಿ, ಇಲಾಖೆಗಳಲ್ಲಿ ಒಟ್ಟು ಜನರ ಮಧ್ಯೆ ಚರ್ಚಿಸುವಂತಾಗಿದೆ. ಜನವಾದಿಯ ಜೊತೆಗೂಡಿ ಈ ಪಿಡುಗಿಗೆ ಪರಿಹಾರ ಕಾಣಬೇಕು. ಅದಕ್ಕಾಗಿ ತಾವೇನಾದರೂ ಮಾಡಲೇಬೇಕೆಂಬ ಜಾಗೃತಿ ಮೂಡಿರುವುದು, ಮುಂದಿನ ದಿನಗಳಲ್ಲಿ ಮಹಿಳಾ ಚಳುವಳಿಗೆ, ಜನ ಚಳುವಳಿಗೆ ಒಂದು ಸ್ಫೂರ್ತಿ ಸಿಕ್ಕಂತಾಗಿದೆ.

ಜನವಾದಿಯು ಈ ಕಾರ್ಯಕ್ರಮದಿಂದ ಸ್ಫೂರ್ತಿಗೊಂಡಿರುವ ಆರೋಗ್ಯ ಇಲಾಖೆ ಅಕ್ಟೋಬರ್ 24 ರಂದು ಟಾಟಾ ಸಂಶೋಧನಾ ಕೇಂದ್ರದ ಜೆ.ಎಸ್.ಟಾಟಾ ಆಡಿಟೋರಿಯಂನಲ್ಲಿ. ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಅವರ ಜನ್ಮ ದಿನವನ್ನು ಸ್ಮರಿಸುವ ದಿನವಾಗಿ “ಹೆಣ್ಣು ಕೂಸು ಉಳಿಸಿ” ಎಂಬ ಘೋಷಣೆಯಡಿಯಲ್ಲಿ ರಾಜ್ಯಮಟ್ಟದ ಒಂದು ದಿನದ ಕಾರ್ಯಾಗಾರವನ್ನು ನಡೆಸಲಾಯಿತು. ಈ ಕಾರ್ಯಾಗಾರದಲ್ಲಿ ಡಾ:ಮೀನಾಕ್ಷಿ ಬಾಳಿ, ಲಿಂಗಾಸಮಾನತೆ ಬಗ್ಗೆ ಕೆ.ಎಸ್.ವಿಮಲ, ಸಾಮೂಹಿಕ ಸಂಸ್ಥೆಗಳ ಪಾತ್ರ ಮನಪರಿವರ್ತನೆ ಬಗ್ಗೆ ವಿಷಯ ಮಂಡಿಸಿದರು. ಜಿಲ್ಲೆಗಳ ಡಿ.ಎಚ್.ಒ.ಗಳು ಜನವಾದಿಯ ಜೊತೆಗೂಡಿ, ಕಾರ್ಯಾಗಾರ ಇನ್ನಿತರ ಚಟುವಟಿಕೆ ನಡೆಸಲು ತೀರ್ಮಾನಿಸಿದೆ.



ಕವನ ಮರೆಯಬೇಡ

ಹಾದಿ-ಬೀದಿಲಿ
ಕಲ್ಲು-ಮುಳ್ಳು
ತುಂಬಿ
ಪ್ರಯಾಣ ಸುಖಕರ
ವಾಗಲೆಂದು
ಹಾರೈಸಬೇಡ

ಮನಸು ತುಂಬಾ
ಕ್ರೋಧ-ದುರಾಲೋಚನೆ
ತುಂಬಿ
ಸರ್ವಜನಕ್ಕೆ
ಮಂಗಳವಾಗಲೆಂದು
ಭಜಿಸಬೇಡ

ಆಸ್ತಿ-ಅಧಿಕಾರ
ಅಂಗೈಯಲ್ಲಿ
ಹಿಡಿದು
ಊರು-ಕೇರಿ
ಜನ
ನನ್ನವರೆನ್ನಬೇಡ

ಅಕ್ಷರಗಳ ಗುರುತು
ತಿಳಿಯದವರ ಮುಂದೆ
ಪವಿತ್ರ-ಪುರಾಣ
ಧರ್ಮ-ಗ್ರಂಥಗಳ
ಪ್ರದರ್ಶಿಸಬೇಡ

- ಲಕ್ಷ್ಮಣ್, ಬೆಂಗಳೂರು

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH